Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–18 | ಸಂಚಿಕೆ–23 | ಜೂನ್ 3–9, 2024 | ಪುಟ 16 | ರೂ.10/–
Volume-18 | Issue-23 | June 3-9, 2024 | Pages:16 | Price: 10/-




`ಹಾಸನ: ಹೋರಾಟದ ನಡಿಗೆ' ಪ್ರಚಂಡ ಯಶಸ್ಸು...

ದೌರ್ಜನ್ಯಕೋರರಿಗೆ ಖಡಕ್ ಎಚ್ಚರಿಕೆ



ಲೋಕಸಭಾ ಚುನಾವಣೆ: ಸಂವಿಧಾನವೇ ಪ್ರಚಾರದ ಪ್ರಮುಖ ಅಂಶ





ಮೋದಿ ಜನರ ಪ್ರತಿನಿಧಿಯೋ, ದೇವರ ಪ್ರತಿನಿಧಿಯೊ?

ಸಾಮೂಹಿಕ ಬಡತನ ಹೆಚ್ಚಿಸಿದ ನವ- ಉದಾರವಾದ

ಐತಿಹಾಸಿಕ ರೈಲ್ವೆ ಮುಷ್ಕರಕ್ಕೆ 50 ವರ್ಷ

ಭಾರತದಲ್ಲಿ ಕಾರ್ಮಿಕ ಚಳುವಳಿಗಳು, ಸಿಐಟಿಯು ಸ್ಥಾಪನೆ, ನಂತರದ ಐಕ್ಯ ಚಳುವಳಿ ಕಟ್ಟಿದ ಅದರ ಪಾತ್ರದ ಕುರಿತಾದ ಒಂದು ಕಿರು ನೋಟ

ಸಿಐಟಿಯು ಸಂಸ್ಥಾಪನಾ ದಿನ–ಮೇ 30

ಸಿ.ಸಿದ್ದಯ್ಯ

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) 1970ರ ಮೇ 30ರಂದು ಕೊಲ್ಕತ್ತ ನಗರದಲ್ಲಿ ಸ್ಥಾಪನೆಯಾಯಿತು. ಈ ಮೇ 30ಕ್ಕೆ 54 ವರ್ಷಗಳು ತುಂಬಿ, 55ನೇ ವಸಂತಕ್ಕೆ ಕಾಲಿಟ್ಟಿದೆ. ಈ ಅವಧಿಯಲ್ಲಿ ಸಿಐಟಿಯು ತನ್ನ ಸಂಸ್ಥಾಪನಾ ಸಮ್ಮೇಳನದಲ್ಲಿ ಅಂಗೀಕರಿಸಿದ 'ಐಕ್ಯತೆ ಮತ್ತು ಹೋರಾಟ' ಎಂಬ ಘೋಷಣೆಯನ್ನು ಕಾರ್ಯರೂಪಕ್ಕೆ ತರಲು ಗಂಭೀರ ಪ್ರಯತ್ನಗಳನ್ನು ನಡೆಸಿದೆ. ಸಿಐಟಿಯು ಸಂಘಟನೆಯನ್ನು ದೇಶದ ಟ್ರೇಡ್ ಯೂನಿಯನ್ ಚಳವಳಿಯೊಳಗೆ ಪ್ರತ್ಯೇಕಿಸುವ ಆರಂಭಿಕ ಪ್ರಯತ್ನಗಳೆಲ್ಲವನ್ನೂ ಜಯಿಸಿ, ಇಂದು ಕಾರ್ಮಿಕರ ಹಕ್ಕುಗಳು, ವೇತನಗಳು, ಪ್ರಯೋಜನಗಳು ಮತ್ತು ಕೆಲಸದ ಪರಿಸ್ಥಿತಿಗಳನ್ನು ರಕ್ಷಿಸಲು ಕಾರ್ಮಿಕ ವರ್ಗದ ಐಕ್ಯ ಚಳುವಳಿಗಳನ್ನು ಬೆಳೆಸಿ, ಬಲಪಡಿಸುವಲ್ಲಿ ಮುಂಚೂಣಿ ಸ್ಥಾನದಲ್ಲಿ ನಿಂತಿದೆ.

ಭಾರತದಲ್ಲಿ ಕಾರ್ಮಿಕ ಚಳುವಳಿಗಳು

ಭಾರತ ದೇಶದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನ ಮತ್ತು ಕಾರ್ಮಿಕ ಚಳುವಳಿಗಳು ಜೊತೆಜೊತೆಯಾಗಿ ಸಾಗಿದವು. ಎಐಟಿಯುಸಿ (All India Trade Union Congress) ಸ್ಥಾಪನೆಯ ಆರಂಭದ ದಿನಗಳಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ನಾಯಕರೇ ಆ ನಂತರ ಎಐಟಿಯುಸಿಗೆ ನಾಯಕತ್ವ ನೀಡಿದರು. ಬಿ.ಟಿ. ರಣದಿವೆ, ಪಿ. ರಾಮಮೂರ್ತಿ, ಡಾಂಗೆ, ಘಾಟೆ ಮುಂತಾದ ಅನೇಕ ಕಮ್ಯುನಿಸ್ಟ್ ನಾಯಕರೂ ಈ ಸಂಘಟನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಆದ್ದರಿಂದಲೇ ರಾಷ್ಟ್ರೀಯ ಚಳುವಳಿ ಮತ್ತು ಕಾರ್ಮಿಕ ಚಳುವಳಿ ಎರಡರಲ್ಲೂ ದಿಟ್ಟ ಹೋರಾಟಗಳ ಬೆಳವಣಿಗೆ ಕಂಡುಬಂದಿದೆ.

ಭಾರತಕ್ಕೆ ಸ್ವಾತಂತ್ರ್ಯ ಬರುವ ಮೂರು ತಿಂಗಳ ಮೊದಲು ಎಐಟಿಯುಸಿಯಲ್ಲಿ ಒಡಕು ಮೂಡಿಸಲು ಕಾಂಗ್ರೆಸ್ ಪಕ್ಷ ಮುಂದಾಯಿತು. ಮೇ 3, 1947 ರಲ್ಲಿ ಐ.ಎನ್.ಟಿ.ಯು.ಸಿ. (Indian National Trade Union Congress) ಸ್ಥಾಪನೆಯಾಯಿತು. ಹಿಂದೂ ಮಜ್ದೂರ್ ಸಭಾ (HMS) ಅನ್ನು 1948 ರಲ್ಲಿ ಸ್ಥಾಪಿಸಲಾಯಿತು. 1948 ರಲ್ಲಿ UTUC, 1955 ರಲ್ಲಿ ಭಾರತೀಯ ಮಜ್ದೂರ್ ಸಂಘ (BMS), 1958 ರಲ್ಲಿ ಯುಟಿಯುಸಿ– ಲೆನಿನ್ ಸರಣಿ (UTUC-LS) ಮತ್ತು ಇನ್ನಿತರ ಕಾರ್ಮಿಕ ಸಂಘಗಳು ರಚಿಸಲ್ಪಟ್ಟವು.

ವರ್ಗ ಸಹಕಾರದ ಹಾದಿ ಹಿಡಿದ ಎಐಟಿಯುಸಿ

ಎಐಟಿಯುಸಿ ಸಂಘಟನೆಯು ಕಾಲಕ್ರಮೇಣ ಕಾರ್ಮಿಕರಿಗೆ ಹಾನಿಯಾಗುವಂತೆ ರಾಜಿ ವಿಧಾನಗಳನ್ನು ಅಳವಡಿಸಿಕೊಂಡಿತು. ಆಳುವ ವರ್ಗದ ಸ್ವಭಾವದಿಂದ ಭ್ರಮೆಗಳಿಗೆ ಒಳಗಾಯಿತು. ಆರ್ಥಿಕ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರದೊಂದಿಗೆ ಸಹಕರಿಸಲು ನಿರ್ಧರಿಸಿತು. ಅದು ವರ್ಗ ಹೋರಾಟವನ್ನು ಕೈಬಿಟ್ಟು ವರ್ಗ ಸಹಕಾರದ ಹಾದಿ ಹಿಡಿಯಿತು. ವರ್ಗ ಹೋರಾಟದ ಪರಿಕಲ್ಪನೆಯನ್ನೇ ಅಪಹಾಸ್ಯ ಮಾಡಿತು. ದುಡಿಯುವ ವರ್ಗದ ಐಕ್ಯತೆಯ ಪರವಾಗಿದ್ದ ಅಂದಿನ ಎಐಟಿಯುಸಿಯಲ್ಲಿದ್ದ ಕೆಲವು ನಾಯಕರಿಗೆ ಇದು ಅನೇಕ ನೋವು ಮತ್ತು ತೊಂದರೆಗಳನ್ನು ಉಂಟುಮಾಡಿತು. ಎಐಟಿಯುಸಿಯ ಅಂದಿನ ಪ್ರಧಾನ ಕಾರ್ಯದರ್ಶಿ ಎನ್.ಎಂ. ಜೋಶಿಯವರು ಕಾರ್ಮಿಕರು ರಾಜಕೀಯ ಹೋರಾಟಗಳಲ್ಲಿ ಪಾಲ್ಗೊಳ್ಳುವುದನ್ನು ವಿರೋಧಿಸಿದರು. ಎಸ್.ಎ. ಡಾಂಗೆ ಎರಡು ಸ್ತಂಭಗಳ ಸಿದ್ಧಾಂತವನ್ನು ಪ್ರಸ್ತಾಪಿಸಿದರು. ಈ ಸಿದ್ಧಾಂತವು ಕಾರ್ಮಿಕ ರಂಗದಲ್ಲಿ 'ಪರಿಷ್ಕರಣವಾದ'ಕ್ಕೆ ಬುನಾದಿ ಹಾಕಿತು.

ಅಂದಿನ ಆಳುವವರ್ಗ ಬೋನಸ್ ಅನ್ನು ಶೇ. 8.33ರಿಂದ ಶೇ.4ಕ್ಕೆ ಇಳಿಸಿದರೆ, ಎಐಟಿಯುಸಿ ನಾಯಕರಾಗಿದ್ದ ಎಸ್.ಎ. ಡಾಂಗೆ ಅದನ್ನು ಒಪ್ಪಿ ಸಹಿ ಹಾಕಿದರು. ಸರ್ಕಾರವೇ ಏಕಪಕ್ಷೀಯವಾಗಿ ನಿರ್ಧರಿಸಿದ ವೇತನ ಸಂಹಿತೆಗೆ ಸರ್ಕಾರ ಪ್ರಸ್ತಾಪಿಸಿದ್ದನ್ನೇ ಅವರು ಒಪ್ಪಿಕೊಂಡರು. 1975 ರಿಂದ 1978 ರವರೆಗೆ ಇಂದಿರಾಗಾಂಧಿ ಜಾರಿಗೆ ತಂದ ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದರು. ಎಐಟಿಯುಸಿಯ ಸುಧಾರಣಾವಾದಿ ಧೋರಣೆಗಳನ್ನು ವಿರೋಧಿಸಿದ ನಾಯಕರನ್ನು ಸಂಘಗಳ ನಾಯಕತ್ವದ ಸ್ಥಾನಗಳಿಂದ ತೆಗೆದುಹಾಕಲಾಯಿತು ಮತ್ತು ಅವರ ನಾಯಕತ್ವದ ಸಂಘಗಳ ಜೊತೆಗಿನ ಸಂಬಂಧಗಳನ್ನು ದೂರಮಾಡಿದರು. ಎಐಟಿಯುಸಿ ವರ್ಗ ಸಾಮರಸ್ಯ ನೀತಿಗಳಿಂದ ಮತ್ತು ಆಳುವ ವರ್ಗಗಳಿಗೆ ಬಾಲಂಗೋಚಿ ಪ್ರವೃತ್ತಿಯಿಂದ ಬೇರ್ಪಡಿಸಲು ಕೆಲವರು ಮಾಡಿದ ಪ್ರಯತ್ನಗಳು ವಿಫಲವಾದವು. ಆ ಪರಿಸ್ಥಿತಿಯಲ್ಲಿಯೂ ಕಾರ್ಮಿಕ ವರ್ಗವನ್ನು ಒಂದು ವರ್ಗವಾಗಿ ಒಗ್ಗೂಡಿಸಲು, ಪ್ರಜಾಸತ್ತಾತ್ಮಕ ಕಾರ್ಯ ವಿಧಾನವನ್ನು ಮುಕ್ತವಾಗಿ ಅನುಸ್ಥಾನಗೊಳಿಸಲು, ರಾಜಿ–ಶರಣಾಗತಿ ಧೋರಣೆಗಳ ವಿರುದ್ಧ 1970ರ ಮೇ 30ರಂದು ಸಿಐಟಿಯು ಅಸ್ತಿತ್ವಕ್ಕೆ ಬಂತು. ಬಿ.ಟಿ.ರಣದಿವೆ ಮೊದಲ ಅಧ್ಯಕ್ಷರಾಗಿ, ಪಿ. ರಾಮಮೂರ್ತಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ವರ್ಗ ಹೋರಾಟವಿಲ್ಲದೆ ಸಾಮಾಜಿಕ ಪರಿವರ್ತನೆಯನ್ನು ತರಲಾಗುವುದಿಲ್ಲ

ಭಾರತ ದೇಶದಲ್ಲಿ ವರ್ಗ ಶೋಷಣೆಯನ್ನು ಕೊನೆಗೊಳಿಸಿ ಸಾಮಾಜಿಕ ಬದಲಾವಣೆಗಾಗಿ ವರ್ಗ ಹೋರಾಟವನ್ನು ತೀವ್ರಗೊಳಿಸುವ ಉದ್ದೇಶದಿಂದ ಸಿಐಟಿಯು ಅನ್ನು ರಚಿಸಲಾಯಿತು. ಸಿಐಟಿಯು ತನ್ನ ಉದ್ದೇಶವನ್ನು ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ವಿವರಿಸಿದೆ. 1970, ಅಕ್ಟೋಬರ್ 2ರಿಂದ 4ರವರೆಗೆ ಜೈಪುರದಲ್ಲಿ ನಡೆದ ತನ್ನ ಕಾರ್ಯಕಾರಿ ಸಮಿತಿಯ ಮೊದಲ ಸಭೆಯಲ್ಲಿ ಸಿಐಟಿಯು ತನ್ನ ಸಂವಿಧಾನವನ್ನು ಅಂಗೀಕರಿಸಿತು. 'ಎಲ್ಲಾ ಶೋಷಣೆಯಿಂದ ಸಮಾಜದ ಸಂಪೂರ್ಣ ವಿಮೋಚನೆಯನ್ನು ಸೂಚಿಸುತ್ತದೆ' ಎಂದು ಸಿಐಟಿಯು ಸ್ಪಷ್ಟವಾಗಿ ಹೇಳುತ್ತದೆ. ಉತ್ಪಾದನಾ ಸಾಧನಗಳನ್ನು ವಿತರಣೆಯನ್ನು ಸಾರ್ವಜನಿಕಗೊಳಿಸದ ಹೊರತು ಕಾರ್ಮಿಕರ ಶೋಷಣೆ ಕೊನೆಗೊಳ್ಳುವುದಿಲ್ಲ ಎಂದು ಅದು ಹೇಳುತ್ತದೆ. ಈ ಬದಲಾವಣೆಯು ವರ್ಗ ಹೋರಾಟದ ಮೂಲಕ ಮಾತ್ರ ಸಾಧ್ಯವೆಂದೂ, ಎಲ್ಲಾ ರೀತಿಯ ದಬ್ಬಾಳಿಕೆ ಮತ್ತು ಅಸಮಾನತೆ ವಿರುದ್ಧ ಹೋರಾಡಲು ಕರೆ ನೀಡುತ್ತದೆ. 'ವರ್ಗ ಹೋರಾಟವಿಲ್ಲದೆ ಯಾವುದೇ ಸಾಮಾಜಿಕ ಪರಿವರ್ತನೆಯನ್ನು ತರಲಾಗುವುದಿಲ್ಲ' ಎಂದು ಸಿಐಟಿಯು ಸಂವಿಧಾನವು ಬಲವಾಗಿ ಪ್ರತಿಪಾದಿಸುತ್ತದೆ.

ಭಾರತದ ಕಾರ್ಮಿಕ ಚಳವಳಿಯ ಇತಿಹಾಸದಲ್ಲಿ ಸಿಐಟಿಯು ವಹಿಸಿದ ಪಾತ್ರ ಅಗಾಧವಾದುದು. ಕಾರ್ಮಿಕ ವರ್ಗವನ್ನು ಒಗ್ಗೂಡಿಸುವ ಉದ್ದೇಶದಿಂದ ಸಿಐಟಿಯು 54 ವರ್ಷಗಳಿಂದ ಅವಿರತ ಹೋರಾಟ ನಡೆಸುತ್ತಿದೆ. ಎಷ್ಟೇ ಏರಿಳಿತಗಳಿದ್ದರೂ ಕಾರ್ಮಿಕರ ಪರವಾಗಿ, ಕಾರ್ಮಿಕ ಹಕ್ಕುಗಳಿಗಾಗಿ ಮುಂದೆ ಸಾಗುತ್ತಿದೆ. ನಿರಂತರವಾಗಿ ಕಾರ್ಮಿಕ ಜಗತ್ತನ್ನು ಜಾಗೃತಗೊಳಸುತ್ತಿದೆ. ಸಿಐಟಿಯು ೫೫ನೇ ವಸಂತದೆಡೆಗೆ ಕಾಲಿಡುವ 2024 ಮೇ ೩೦ರ ಅರುಣೋದಯವು ಉಜ್ವಲವಾದ ಕ್ಷಣವಾಗಿದೆ. ಸಿಐಟಿಯು ಸ್ಥಾಪನೆಯ ಉತ್ಸಾಹದೊಂದಿಗೆ ಭವಿಷ್ಯದಲ್ಲಿ ಐಕ್ಯ ಪ್ರತಿರೋಧ ಹೋರಾಟಗಳಿಗೆ ಮತ್ತಷ್ಟು ಸಂಘಟಿಸೋಣ!!

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ

ಸಿಐಟಿಯುವಿನ ಆರಂಭದ ದಿನಗಳಲ್ಲಿ ಆಳುವ ವರ್ಗಗಳು ಮತ್ತು ಇತರ ಕಾರ್ಮಿಕ ಸಂಘಟನೆಗಳು ಅದನ್ನು ಒಂಟಿಯಾಗಿಸುವ ಪ್ರಯತ್ನ ಮಾಡಿದರು. ಸಿಐಟಿಯು ಕರೆ ನೀಡಿದ್ದ ಐಕ್ಯತೆಯ ಘೋಷಣೆಯನ್ನು ಅವಹೇಳನ ಮಾಡಿದರು. ಇವರಿಗೆ ಸಿಐಟಿಯು ತನ್ನ ಚಟುವಟಿಕೆಯ ಮೂಲಕವೇ ಉತ್ತರ ನೀಡಿದೆ. ಇಂದಿರಾಗಾಂಧಿ ಮಾಡಿದ ವೇತನ ಸ್ಥಗಿತ ಮತ್ತು ಕಡ್ಡಾಯ ಠೇವಣಿ ಯೋಜನೆಗಳ ವಿರುದ್ಧ ಹೋರಾಡಲು ಸಿಐಟಿಯು ಮುತುವರ್ಜಿ ವಹಿಸಿ ಯುನೈಟೆಡ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ಅನ್ನು ರಚಿಸಿತು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅಂದಿನ ಸರಕಾರ ಸಿಐಟಿಯು ಸಂಘಟನೆಯನ್ನು ಹತ್ತಿಕ್ಕಲು ಯತ್ನಿಸಿತು. ಸಿಐಟಿಯು ನಾಯಕತ್ವವನ್ನು ತೀವ್ರ ನಿರ್ಬಂಧಗಳಿಗೆ ಗುರಿಪಡಿಸಲಾಯಿತು. ಆದಾಗ್ಯೂ, ನಾಗರಿಕ ಹಕ್ಕುಗಳು ಮತ್ತು ಪ್ರಜಾಪ್ರಭುತ್ವ ವಿರೋಧಿ ದಾಳಿ ದಬ್ಬಾಳಿಕೆಗಳನ್ನು ಪ್ರತಿಭಟಿಸಿ ಕಾರ್ಮಿಕ ವರ್ಗದ ಒಗ್ಗಟ್ಟನ್ನು ವ್ಯಕ್ತಪಡಿಸುವ ಮೂಲಕ ಸಿಐಟಿಯು ಕಾರ್ಮಿಕ ಮತ್ತು ಸಾರ್ವಜನಿಕ ಹೋರಾಟಗಳಿಗೆ ಬೆಂಬಲವನ್ನು ಕ್ರೋಢೀಕರಿಸಿತು.

ರೈಲ್ವೆ ಕಾರ್ಮಿಕರ 20 ದಿನಗಳ ಮುಷ್ಕರ

1974 ರಲ್ಲಿ ನಡೆದ ಅದ್ಭುತವಾದ ರೈಲ್ವೆ ಕಾರ್ಮಿಕರ ಮುಷ್ಕರವು ದೇಶದಲ್ಲಿ ಇಡೀ ಕಾರ್ಮಿಕ ವರ್ಗವನ್ನು ಹುರಿದುಂಬಿಸಿತು. ರೈಲ್ವೆ ಕಾರ್ಮಿಕರನ್ನು ರಾಷ್ಟ್ರವ್ಯಾಪಿ ಹೋರಾಟದ ಹಾದಿಗೆ ತರಲು ಸಿಐಟಿಯು ಮುಂದಾಯಿತು. ತೀವ್ರವಾದ ದಬ್ಬಾಳಿಕೆ ಮತ್ತು ಬಣ ಸಾಧನಗಳ ನಡುವೆ 20 ದಿನಗಳ ಮುಷ್ಕರದಲ್ಲಿ ಪ್ರಮುಖ ಪಾತ್ರ ವಹಿಸಿತು. ದೇಶಾದ್ಯಂತ ಇರುವ ರೈಲ್ವೇ ಕಾರ್ಮಿಕರನ್ನು ಐಕ್ಯ ಹೋರಾಟಕ್ಕೆ ತರಲು ನ್ಯಾಷನಲ್ ಕೋ–ಆರ್ಡಿನೇಷನ್ ಕಮಿಟಿ ಫಾರ್ ರೈಲ್ವೆ ಮನ್ ಸ್ಟ್ರಗಲ್ (ಎನ್.ಸಿ.ಸಿ.ಆರ್.ಎಸ್.) ಎಂಬ ರಾಷ್ಟ್ರೀಯ ಸಮನ್ವಯ ಸಮಿತಿ ರಚನೆಯಲ್ಲಿ ಸಿಐಟಿಯು ಸಕ್ರಿಯ ಪಾತ್ರ ವಹಿಸಿದೆ. ಐ.ಎನ್.ಟಿ.ಯು.ಸಿ. ಹೊರತುಪಡಿಸಿ ಮಿಕ್ಕೆಲ್ಲಾ ಪ್ರಮುಖ ಕಾರ್ಮಿಕ ಸಂಘಗಳನ್ನು ಒಂದುಗೂಡಿಸಿತು. 1978 ರಲ್ಲಿ ಜನತಾ ಸರ್ಕಾರವು ಕೈಗಾರಿಕಾ ಸಂಬಂಧ ಮಸೂದೆ (ಇಂಡಸ್ಟ್ರಿಯಲ್ ರಿಲೇಷನ್ಸ್ ಬಿಲ್) ಯನ್ನು ಭೂತಲಿಂಗಂ ಸಮಿತಿಯ ಶಿಫಾರಸುಗಳ ಮೇರೆಗೆ ಜಾರಿಗೆ ತಂದ ಸಂದರ್ಭದಲ್ಲಿ ಅದಕ್ಕೆ ವಿರುದ್ಧವಾಗಿ ಸಿಐಟಿಯು ನಡೆಸಿದ ಒಗ್ಗಟ್ಟಿನ ಹೋರಾಟದ ಫಲವಾಗಿ ಅಂದಿನ ಸರ್ಕಾರವು ಮಸೂದೆಯನ್ನು ಸ್ಥಗಿತಗೊಳಿಸಬೇಕಾಯಿತು.

ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ ರಚನೆ

1980 ರ ದಶಕದಲ್ಲಿ ಸಾರ್ವಜನಿಕ ವಲಯದ ಸಂಸ್ಥೆಗಳನ್ನು ದುರ್ಬಲಗೊಳಿಸುವ ಆಡಳಿತಗಾರರ ಪಿತೂರಿಗಳ ವಿರುದ್ಧ ಎಐಟಿಯುಸಿ, ಎಚ್.ಎಂ.ಎಸ್. ಮತ್ತು ಇನ್ನಿತರ ಕಾರ್ಮಿಕ ಸಂಘಗಳೊಂದಿಗೆ ಸಿ.ಪಿ.ಎಸ್.ಟಿ.ಯು. (Committee of Public Sector Trade Unions) ಅನ್ನು ರಚಿಸಿತು. 1981 ರಲ್ಲಿ, ಕಾಂಗ್ರೆಸ್ ಅನುಸರಿಸುತ್ತಿದ್ದ ಆರ್ಥಿಕ ನೀತಿಗಳಿಗೆ ವಿರುದ್ಧವಾಗಿ ರಾಷ್ಟ್ರೀಯ ಕಾರ್ಮಿಕ ಸಂಘಗಳ ಪ್ರಚಾರ ಸಮಿತಿ (ನ್ಯಾಷನಲ್ ಕ್ಯಾಂಪಿಯನ್ ಕಮಿಟಿ ಆಫ್ ಟ್ರೇಡ್ ಯೂನಿಯನ್ಸ್–ಎನ್.ಸಿ.ಸಿ) ಯನ್ನು ರಚಿಸಿ ಹೋರಾಟದಲ್ಲಿ ಸಿಐಟಿಯು ಪ್ರಮುಖ ಪಾತ್ರ ವಹಿಸಿತು.

1982 ರಲ್ಲಿ ಮೊದಲಬಾರಿಗೆ ರಾಷ್ಟ್ರವ್ಯಾಪಿ ಮುಷ್ಕರ

ಕಾರ್ಮಿಕರು, ರೈತರು ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ಮುಂದಿಟ್ಟು 1982 ರ ಜನವರಿ 19 ರಂದು ಮೊದಲಬಾರಿಗೆ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಸಿಐಟಿಯು ಕರೆ ನೀಡಿತು. ಇದರಲ್ಲಿ ಕಾರ್ಮಿಕ ವರ್ಗ, ರೈತರು, ಕೃಷಿ ಕಾರ್ಮಿಕರ ಬೇಡಿಕೆಗಳಿಗೂ ಕೂಡಾ ದೇಶದ ಕಾರ್ಮಿಕ ವರ್ಗ ದ್ವನಿ ಎತ್ತಿದೆ. ಈ ಮುಷ್ಕರದಲ್ಲಿ ಭಾಗವಹಿಸಿದ್ದ 10 ಕೃಷಿ ಕಾರ್ಮಿಕರು ಪೊಲೀಸರು ನಡೆಸಿದ ಗೋಲಿಬಾರ್ ಗೆ ಬಲಿಯಾದರು. ಜನವರಿ 19 ರ ಆ ದಿನವನ್ನು ಕಾರ್ಮಿಕ–ರೈತ ಐಕ್ಯತಾ ದಿನವನ್ನಾಗಿ ಸಿಐಟಿಯು ಆಚರಿಸುತ್ತದೆ.

ಇ.ಪಿ.ಎಸ್. ವಿರುದ್ಧ ಹೋರಾಟ

1995 ನವೆಂಬರ್ 17 ರಂದು ಕಾರ್ಮಿಕ ಸಚಿವ ವೆಂಕಟಸ್ವಾಮಿ ಇ.ಪಿ.ಎಸ್. ಯೋಜನೆ (Employee Pension Scheme) ಯನ್ನು ಪ್ರಕಟಿಸಿದರು. ಎಐಟಿಯುಸಿ ಸೇರಿದಂತೆ ಎಲ್ಲ ಕಾರ್ಮಿಕ ಸಂಘಟನೆಗಳು ಈ ಯೋಜನೆಯನ್ನು ಸ್ವಾಗತಿಸಿದವು. ಸಿಐಟಿಯು ಮಾತ್ರ ಇದನ್ನು ವಿರೋಧಿಸಿತು. ರಾಷ್ಟ್ರವ್ಯಾಪಿ ಅಭಿಯಾನವನ್ನು ಆಯೋಜಿಸಿತು. 1996 ಫೆಬ್ರವರಿ 26 ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಲಾಯಿತು. ಅಂದು ಸಿಐಟಿಯು ಸದಸ್ಯತ್ವ ಪಡೆಯದ ಹಲವು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು.

2002 ರಲ್ಲಿ, ಕಾರ್ಮಿಕರ ರಾಷ್ಟ್ರೀಯ ಅಸೆಂಬ್ಲಿ, ಟ್ರೇಡ್ ಯೂನಿಯನ್ಸ್ ಪ್ರಾಯೋಜಕ ಸಮಿತಿಯನ್ನು ರಚಿಸಲು ಸಿಐಟಿಯು ಕೆಲಸ ಮಾಡಿತು. ಸಿಐಟಿಯು ತಾನು ಮಾಡುತ್ತಿರುವ ಸ್ವತಂತ್ರ ಚಟುವಟಿಕೆಗಳ ಮೂಲಕ ಒಗ್ಗಟ್ಟಿನ ಕಾರ್ಯಾಚರಣೆಗೆ ಅಡಿಪಾಯ ಹಾಕಿದೆ. 2018 ರಲ್ಲಿ ಆಯೋಜಿಸಲಾದ ಮಹಾಪಡಾವ್ ಅದಕ್ಕೆ ಉದಾಹರಣೆಯಾಗಿದೆ. 2019 ರ ಜನವರಿ 8 ಮತ್ತು 9 ರಂದು ಎರಡು ದಿನಗಳ ಮುಷ್ಕರದಲ್ಲಿ

ಪುಟ 4 ಕ್ಕೆ

ಚಂದ್ರಶೇಖರನ್ ಆತ್ಮಹತ್ಯೆ ಹಾಗು 87 ಕೋಟಿ ರೂ. ಹಗರಣ ನ್ಯಾಯಾಂಗ ತನಿಖೆಗೆ ವಹಿಸಿ–ಸಿಪಿಐ(ಎಂ)

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ, ಅತ್ಯಂತ ದುರ್ಬಲ ಸಮುದಾಯಗಳಲ್ಲಿ ಪ್ರಮುಖವಾದ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಂಚನೆ ಮಾಡಲು ನಡೆದಿದೆಯೆನ್ನಲಾದ 87 ಕೋಟಿ ರೂಗಳ ಹಗರಣ ಅತ್ಯಂತ ಆತಂಕಕಾರಿ ವಿಚಾರವಾಗಿದೆ. 187 ಕೋಟಿ ರೂ ಮೊತ್ತದಲ್ಲಿ ಅದರ ಸುಮಾರು ಶೇ 50 ರಷ್ಟು ಮೊತ್ತವನ್ನು ಸರ್ಕಾರದ ಮೂಗಿನ ಕೆಳಗಿರುವ ಉನ್ನತ ಹಂತದ ಅಧಿಕಾರಿ ವಲಯದಲ್ಲಿಯೆ ಲಪಟಾಯಿಸಲು ಮುಂದಾಗಿರುವುದು ಅತ್ಯಂತ ಗಂಭೀರ ಹಾಗು ತೀವ್ರ ಖಂಡನೀಯ ವಿಚಾರವಾಗಿದೆ.



ಇದು ದುರ್ಬಲ ಸಮುದಾಯಗಳ ಫಲಾನುಭವಿಗಳಿಗೆ ಸರ್ಕಾರದ ನೆರವು ಸಿಗದಂತೆ ಉನ್ನತ ವಲಯದಲ್ಲಿಯೆ ಹೇಗೆ ಲಪಟಾಯಿಸಲಾಗುತ್ತದೆ ಎಂಬುದರ ಸ್ಪಷ್ಟ ಚಿತ್ರಣ ನೀಡಿದೆ.

ಸದರಿ ಭ್ರಷ್ಟಾಚಾರದ ವಿಚಾರಕ್ಕೆ ಸಂಬಂಧಿಸಿ ನಿಗಮದ ಕೇಂದ್ರ ಕಛೇರಿಯ ಅಧೀಕ್ಷಕ ಶ್ರೀ ಚಂದ್ರಶೇಖರನ್ ಮಾನಸಿಕ ಒತ್ತಡ ಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆಯ ಘಟಿಸಿದೆ.

ಈ ಎಲ್ಲ ಪ್ರಕರಣದ ಹಿಂದೆ ಕಾಣದ ಕೈಗಳು ಇಲ್ಲವೆನ್ನಲು ಹಳೆಯ ಅನುಭವಗಳು ಅವಕಾಶ ನೀಡುತ್ತಿಲ್ಲ.

ಈ ಒಟ್ಟು ಪ್ರಕರಣದ ಮೂಲವನ್ನು ಬೇಧಿಸಲು, ರಾಜ್ಯದ ಜನತೆಯ ಆತಂಕವನ್ನು ನಿವಾರಿಸಲು ಮತ್ತು ಸತ್ಯವೇನೆಂದು ತಿಳಿಯುವಂತಾಗಲು ನೇರ ಸರಕಾರದ ನಿಯಂತ್ರಣ ದಿಂದ ಸ್ವತಂತ್ರವಾದ ನ್ಯಾಯಾಂಗದ ಸುಪರ್ಧಿಯಲ್ಲಿ ನ್ಯಾಯಾಂಗ ತನಿಖೆ ನಡೆಸುವುದೊಂದೆ ಸರಿಯಾದ ವಿಧಾನವಾಗಿದೆ ಎಂದಿದೆ.

ಆದ್ದರಿಂದ ರಾಜ್ಯ ಸರ್ಕಾರ ಈ ಕೂಡಲೆ ಪ್ರಕರಣವನ್ನು ನ್ಯಾಯಾಂಗದ ತನಿಖೆಗೆ ವಹಿಸಬೇಕೆಂದು ಮುಖ್ಯ ಮಂತ್ರಿಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಸಮಿತಿ ಬಲವಾಗಿ ಒತ್ತಾಯಿಸುತ್ತದೆ ಮತ್ತು ಈ ಕೂಡಲೆ ಡೆತ್ ನೋಟ್ ನಲ್ಲಿ ಹೆಸರಿಸಲಾದ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಮತ್ತು ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿಯ ಕುಟುಂಬಕ್ಕೆ ಸೂಕ್ತ ನೆರವು ನೀಡುವಂತೆ ಮನವಿ ಮಾಡಿದೆ.

ನೈಜ ಸಾಮಾಜಿಕ ನ್ಯಾಯಕ್ಕಾಗಿ, ಗುತ್ತಿಗೆ ಪದ್ದತಿ ಹಾಗು ಖಾಯಮಾತಿ ನಿರ್ಬಂಧ ತೊಲಗಿಸಲು ಸಿಪಿಐ(ಎಂ) ಒತ್ತಾಯ

ರಾಜ್ಯ ಸರ್ಕಾರ, ಸರಕಾರದ ಗುತ್ತಿಗೆ ಆಧಾರಿತ ನೌಕರಿಯಲ್ಲಿ ಮೀಸಲಾತಿ ಪ್ರಕಟಿಸಿರುವುದನ್ನು ಸಿಪಿಐ(ಎಂ) ಸ್ವಾಗತಿಸುತ್ತದೆ. ಆದರೆ ಅದು ಅಷ್ಟಕ್ಕೆ ಸೀಮಿತಗೊಳಿಸಿರುವುದು ಸರಿಯಲ್ಲ. ಅದನ್ನು ಖಾಸಗೀ ರಂಗಕ್ಕೂ ವಿಸ್ತರಿಸುವಂತೆ ಒತ್ತಾಯಿಸಿದೆ.


ಅದೇ ಸಂದರ್ಭದಲ್ಲಿ, ಮತ್ತೊಂದು ಕಡೆ, ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವವರಿಗೆ ಖಾಯಮಾತಿ ನಿರ್ಬಂಧ ಹೇರಿಕೆಗೆ ಕ್ರಮ ವಹಿಸಿರುವುದು ಅಕ್ಷಮ್ಯ ಮತ್ತು ಸಾಮಾಜಿಕ ನ್ಯಾಯದ ವಿರುದ್ಧವಾಗಿದೆ ಎಂದು ಬಲವಾಗಿ ಖಂಡಿಸಿದೆ.

ಸರಕಾರಿ ಹುದ್ದೆಗಳನ್ನು ಶಾಶ್ವತವಾಗಿ ಒಳ ಗುತ್ತಿಗೆ ಹಾಗು ಹೊರ ಗುತ್ತಿಗೆ, ಅತಿಥಿ ಮುಂತಾದ ಹೆಸರುಗಳಲ್ಲಿ ಮುಂದುವರೆಸುತ್ತಾ ಬಹುತೇಕ ದುರ್ಬಲ ಜನ ಸಮುದಾಯಗಳ ನಿರುದ್ಯೋಗಿ ಯುವಜನರನ್ನು ತೀವ್ರ ಶೋಷಣೆಗೀಡು ಮಾಡುವ ನಿಲುಮೆಯು ತೀವ್ರ ಖಂಡನಾರ್ಹವಾಗಿದೆ.

ಇದು ಒಟ್ಟು ಸರ್ಕಾರಿ ಉದ್ಯೋಗಗಳ ಶೇ 50ಕ್ಕೂ ಅಧಿಕವಾದರೆ, ಖಾಸಗೀ ರಂಗದಲ್ಲಿ ಶೇ 85 ಕ್ಕೂ ಅಧಿಕವಾಗಿದೆ.

ಸರ್ಕಾರದ ಈ ನೀತಿಯು ಖಾಸಗೀ ರಂಗದ ಉದ್ಯಮದ ತೀವ್ರ ಶೋಷಣೆಗೆ ಕುಮ್ಮಕ್ಕಾಗಿದೆ ಎಂದಿದೆ.

ಆದ್ದರಿಂದ, ಒಟ್ಟಾರೆ ಸಾರ್ವಜನಿಕ ಹಾಗೂ ಖಾಸಗೀ ರಂಗದಲ್ಲಿ ಗುತ್ತಿಗೆ ಪದ್ಧತಿಯನ್ನು ಮತ್ತು ಖಾಯಮಾತಿಗೆ ಇರುವ ನಿರ್ಬಂಧಗಳನ್ನು ರದ್ದುಗೊಳಿಸಿ, ಅಲ್ಲಿ ಹುದ್ದೆಗಳನ್ನು ಭರ್ತಿ ಮಾಡಿ ನಿಜ ಸಾಮಾಜಿಕ ನ್ಯಾಯಕ್ಕೆ ಆಗತ್ಯ ಕ್ರಮವಹಿಸಲು ಸಿಪಿಐ(ಎಂ) ಬಲವಾಗಿ ಒತ್ತಾಯಿಸಿದೆ.



ಎಂ.ಆರ್.ಪಿ.ಎಲ್. ಕಾರ್ಖಾನೆಯಲ್ಲಿ ದುರಂತ ಮೃತ ಕಾರ್ಮಿಕನ ಕುಟುಂಬಕ್ಕೆ ಪರಿಹಾರಕ್ಕೆ ಆಗ್ರಹ

ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ಕಾರ್ಖಾನೆಯಾದ ಎಂ.ಆರ್.ಪಿ.ಎಲ್.ನ ಹೈಡ್ರೋ ಕ್ರಾಕರ್ ಘಟಕದಲ್ಲಿ, ಕಂಪನಿಯ ಆಡಳಿತ ಮಂಡಳಿಯ ಕಡೆಯಿಂದ ವಹಿಸಬೇಕಾದ ಸುರಕ್ಷತಾ ಕ್ರಮಗಳ ಕೊರತೆ ಹಾಗೂ ಘೋರ ನಿರ್ಲಕ್ಷ್ಯದಿಂದ, ಗುತ್ತಿಗೆ ಕಾರ್ಮಿಕರ ಕುರಿತಾದ ಅಸಡ್ಡೆಯ ಧೋರಣೆಗಳಿಂದ ಜಾರ್ಖಂಡ್ ಮೂಲದ 38 ವರ್ಷದ ಮಂಗ್ರಾ ಓರೋನ್ ಎಂಬ ಆದಿವಾಸಿ ವಲಸೆ ಕಾರ್ಮಿಕ ಬಲಿಯಾದ ದುರಂತವೊಂದು ಮೇ 27, 2024 ರಂದು ನಡೆದಿದೆ. ನೀರಿನ ಸೋರಿಕೆ ಸರಿಪಡಿಸಲು ಯತ್ನಿಸುತ್ತಿದ್ದ ಮಂಗ್ರಾ ಓರೋನ್ 120 ಅಡಿಗಳ ಮೇಲಿಂದ ಕೆಳಗೆ ಬಿದ್ದು ಭೀಕರ ಅವಘಡದಲ್ಲಿ ತೀರಿಕೊಂಡಿದ್ದಾರೆ.

ಮಂಗ್ರಾ ಓರೋನ್ ಸಾವಿನ ಪ್ರಕರಣದ ತನಿಖೆಯನ್ನು ಅಲ್ಲಿಂದಲ್ಲಿಗೆ ಸರಿಪಡಿಸಲು ಮಾತುಕತೆಗಳು ನಡೆಯುತ್ತಿದೆ ಎಂಬ ಗುಸು ಗುಸು ಹರಡಿದ್ದ ಸನ್ನಿವೇಶದಲ್ಲಿ, ದುರಂತದ ಮಾಹಿತಿ ತಿಳಿದ ಕೂಡಲೇ ಸುರತ್ಕಲ್ ನಾಗರೀಕರ ಹೋರಾಟ ಸಮಿತಿಯ ಸಂಚಾಲಕರಾದ ಮುನಿರ್ ಕಾಟಿಪಳ್ಳ ಅವರ ನೇತೃತ್ವದಲ್ಲಿ ಕಂಪೆನಿಯ ಹಾಗೂ ಗುತ್ತಿಗೆ ಏಜೆನ್ಸಿಯ ತಪ್ಪಿನಿಂದ ಮೃತ ಪಟ್ಟ ವಲಸೆ ಕಾರ್ಮಿಕನ ಕುಟುಂಬಕ್ಕೆ ಸಿಗಬೇಕಾದ ಪರಿಹಾರ, ತನಿಖೆಯ ಕುರಿತು ಕಾಳಜಿ ವಹಿಸುವಂತೆ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿಯವರಿಗೆ ಈ ಕುರಿತು ಮಾಹಿತಿ ನೀಡಿ ವಿನಂತಿಸಲಾಯಿತು. ಮನವಿಯ ವಿವರಗಳು ಹೀಗಿವೆ.

ಕುಟುಂಬಕ್ಕೆ ನ್ಯಾಯ ಕೊಡಿ

ಎಂ.ಆರ್.ಪಿ.ಎಲ್. ಕಾರ್ಮಿಕ ಸಂಘದ ಪದಾಧಿಕಾರಿಗಳು ನೀಡಿದ ಮಾಹಿತಿ ಪ್ರಕಾರ ವಿಮೆ, ಪಿ.ಎಫ್. ಮೇಲಿನ ವಿಮೆ, ಅವಘಡದಲ್ಲಿ ಮೃತ ಪಟ್ಟಾಗ ಒಪ್ಪಂದದಂತೆ ನೀಡಬೇಕಾದ ಪರಿಹಾರ, ಗುತ್ತಿಗೆ ಏಜನ್ಸಿ ನೀಡಬೇಕಾದ ಪರಿಹಾರಗಳು ಸೇರಿ ಸುಮಾರು 25 ಲಕ್ಷ ರೂಪಾಯಿ ಮೃತ ಕಾರ್ಮಿಕನ ಕುಟುಂಬಕ್ಕೆ ದೊರಕಲಿದೆ. ಆದರೆ, ಇದು ಸಾಲದು. ಮೃತ ಕಾರ್ಮಿಕನಿಗೆ ಮಡದಿ ಹಾಗೂ ಎರಡು ಪುಟಾಣಿ ಮಕ್ಕಳಿದ್ದಾರೆ. ಅವಲಂಬಿತ ಕುಟುಂಬ ಇದೆ. ಕಂಪೆನಿಯ ನಿರ್ಲಕ್ಷ್ಯ, ನಿಯಮ ಪಾಲನೆಯ ಉಲ್ಲಂಘನೆಯಿಂದ ಈ ಸಾವು ಸಂಭವಿಸಿದೆ. ಈಗ ದೊರಕುತ್ತಿರುವ ಪರಿಹಾರದಲ್ಲಿ ಕಂಪೆನಿಯ ಕಡೆಯಿಂದ ದೊರಕುವ ಮೊತ್ತಗಳು ಯಾವುದೂ ಇಲ್ಲ. ವರ್ಷಕ್ಕೆ ಲಕ್ಷ ಕೋಟಿ ರೂಪಾಯಿಗಳ ವ್ಯವಹಾರ ನಡೆಸುವ ಕಂಪೆನಿಯು ತನ್ನ ಕಂಪೆನಿಗಾಗಿ ಪ್ರಾಣತ್ಯಾಗ ಮಾಡಿದ ವಲಸೆ ಕಾರ್ಮಿಕನ ಕುಟುಂಬವನ್ನು ನಡೆಸಿಕೊಳ್ಳುವ ರೀತಿ ಇದಲ್ಲ. ಆತನ ಪ್ರಾಣ ತ್ಯಾಗಕ್ಕೆ ಕಂಪೆನಿ ಬೆಲೆ ಕಟ್ಟಲಾಗದು. ಪ್ರಥಮವಾಗಿ ಮಂಗ್ರಾ ಓರೋನ್ ಮೃತ ದೇಹಕ್ಕೆ ಕಂಪೆನಿ ಗೌರವ ವಿದಾಯ ಸಲ್ಲಿಸಬೇಕು. ಮೃತ ದೇಹ ಹಾಗೂ ಕುಟುಂಬಸ್ಥರನ್ನು ಯಾವುದೇ ಸಮಸ್ಯೆಗಳು ಆಗದಂತೆ ಗೌರವ ಪೂರ್ವಕವಾಗಿ ಅವರ ಊರಿಗೆ ತಲುಪಿಸಬೇಕು. ಹಾಗೆಯೆ ಒಟ್ಟು ಒಂದು ಕೋಟಿ ರೂಪಾಯಿ ಪರಿಹಾರ ಧನ, ಆತನ ಹೆಂಡತಿಗೆ (ಅವರು ಬಯಸಿದರೆ) ಕನಿಷ್ಠ ಗುತ್ತಿಗೆ ಆಧಾರದಲ್ಲಾದರು ಉದ್ಯೋಗ ಒದಗಿಸಬೇಕು. ಮೃತನ ಮಕ್ಕಳಿಬ್ಬರ ವಿದ್ಯಾಭ್ಯಾಸದ ಹೊಣೆಯನ್ನು ಎಂ.ಆರ್.ಪಿ.ಎಲ್.ನ ಆಡಳಿತವೇ ವಹಿಸಿಕೊಳ್ಳಬೇಕು ಎಂದು ನಾಗರೀಕ ಸಮಿತಿ ಒತ್ತಾಯಿಸಿದೆ.

ಇದರ ಜೊತೆಗೆ, ಮಂಗ್ರಾ ಓರೋನ್ ಸಾವಿನ ಅವಘಡದ ಕುರಿತು ಸರಿಯಾದ ತನಿಖೆ ನಡೆಯಬೇಕು. ಪೊಲೀಸ್ ತನಿಖೆಯ ಜೊತೆಯಲ್ಲಿ ಜಿಲ್ಲಾಡಳಿತ ಪ್ರತ್ಯೇಕ ತನಿಖೆ ನಡೆಸಬೇಕು. ಗುತ್ತಿಗೆದಾರ ಏಜನ್ಸಿ ನಿಯಮಗಳನ್ನು ಸರಿಯಾಗಿ ಪಾಲಿಸುತ್ತಿತ್ತೆ, ಕಂಪೆನಿಯ ಒಳಗಡೆ ಕಾರ್ಮಿಕರ ಸುರಕ್ಷತಾ ವ್ಯವಸ್ಥೆಯಲ್ಲಿ ಲೋಪ ಆಗಿತ್ತೆ? ಎಂಬುದು ತನಿಖೆ ಆಗಲೇಬೇಕು. ಗುತ್ತಿಗೆ ಆಧಾರಿತ ವಲಸೆ ಕಾರ್ಮಿಕರನ್ನು ಶೆಡೌನ್ ಸಂದರ್ಭ 18, 20 ಗಂಟೆಗಳ ಕಾಲ ಸತತವಾಗಿ ದುಡಿಸುವ ಆರೋಪ ನಿಜವೆ ಎಂಬುದೂ ತನಿಖೆಯಾಗಬೇಕು. ಜಿಲ್ಲಾಡಳಿತ, ಉಸ್ತುವಾರಿ ಸಚಿವರು, ಕಾರ್ಮಿಕ ಸಚಿವರು ಇದನ್ನೆಲ್ಲಾ ಖಾತರಿ ಪಡಿಸಬೇಕು ಎಂದು ಸಮಿತಿಯ ನಾಯಕರು ಒತ್ತಾಯಿಸಿದ್ದಾರೆ.

ಇತ್ತೀಚೆಗೆ ತೋರಣಗಲ್‌ನ ಜಿಂದಾಲ್ ಉಕ್ಕಿನ ಕಾರ್ಖಾನೆಯಲ್ಲಿ ಅವಘಡ ಸಂಭವಿಸಿ ಮೂವರು, ಚಿಕ್ಕಮಗಳೂರು ಕ್ಲೋರಿಂಗ್ ಕಾರ್ಖಾನೆಯಲ್ಲಿ ಒಬ್ಬರು, ಕಾರ್ಮಿಕರು ಮೃತಪಟ್ಟಿದ್ದರು. ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕ ಜೀವಗಳ ಆರೋಗ್ಯ ರಕ್ಷಣೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ವ್ಯವಸ್ಥೆಗಳಲ್ಲಿ ಮತ್ತು ಅವುಗಳ ಮೇಲ್ವಿಚಾರಣೆಯಲ್ಲಿ ಇರುವ ಗಂಭೀರ ಸಮಸ್ಯೆಗಳನ್ನು ಈ ಅಪಘಾತಗಳು ಸೂಚಿಸುತ್ತಿವೆ. ರಾಜ್ಯ ಸರಕಾರ, ಕಾರ್ಮಿಕ ಇಲಾಖೆ ಈ ಬಗೆಗೆ ತುರ್ತು ಗಮನ ಹರಿಸಬೇಕಾದ ಅಗತ್ಯವಿದೆ.



ವಾರ್ತಾ ಭಾರತಿ

ಎಂಆರ್‌ಪಿಎಲ್: 120 ಅಡಿ ಮೇಲಿನಿಂದ ಬಿದ್ದು ಕಾರ್ಮಿಕ ಮೃತ್ಯು

ಹೈಡ್ರೋ ಕ್ರಾಕರ್ ಪ್ಲಾಂಟ್‌ನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಘಟನೆ

ಸುರತ್ಕಲ್, ಮೇ 28: ಎಂಆರ್‌ಪಿಎಲ್‌ನ ಹೈಡ್ರೋ ಕ್ರಾಕರ್ ಪ್ಲಾಂಟ್‌ನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕಾರ್ಮಿಕರೊಬ್ಬರು ಮೂರನೇ ಮಹಡಿಯಿಂದ (ಸುಮಾರು 120 ಅಡಿ ಎತ್ತರ) ಕೆಳಕ್ಕೆ ಬಿದ್ದು ಮೃತಪಟ್ಟಿರುವ ಘಟನೆ ಸೋಮವಾರ ತಡರಾತ್ರಿ ನಡೆದಿದ್ದು, ಬುಧವಾರ ಬೆಳಕಿಗೆ ಬಂದಿರುವುದಾಗಿ ವರದಿಯಾಗಿದೆ.

ಮಂಗ್ರಾ ಓರೋನ್

ಎಂಆರ್‌ಪಿಎಲ್‌ನಲ್ಲಿ ಸುಮಾರು 10 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮಂಗ್ರಾ ಓರೋನ್ (38) ಮೃತಪಟ್ಟವರು. ಇವರು ಮೂಲತಃ ಜಾರ್ಖಂಡ್‌ನ ರಾಂಚಿ ಜಿಲ್ಲೆಯವರಾಗಿದ್ದು, ಸದ್ಯ ಜೋಕಟ್ಟೆಯಲ್ಲಿ ವಾಸವಾಗಿದ್ದರು ಎಂದು ತಿಳಿದು ಬಂದಿದೆ.

ಓರೋನ್ ಮೇ 27ರಂದು ರಾತ್ರಿ 9ಗಂಟೆಗೆ ಕೆಲಸಕ್ಕೆ ಹಾಜರಾಗಿದ್ದು, ಎಂಆರ್ ಪಿಎಲ್‌ನಲ್ಲಿ ಸುಮಾರು 120 ಅಡಿ ಎತ್ತರದಲ್ಲಿರುವ ಹೈಡ್ರೋಕ್ರಾಕರ್ ಪ್ಲಾಂಟ್‌ನಲ್ಲಿ ಕೆಲಸ ಮಾಡುತ್ತಿದ್ದರು. ಪ್ಲಾಂಟ್‌ನಲ್ಲಿ ನೀರಿನ ಸೋರಿಕೆ ಕಂಡು ಬಂದ ಹಿನ್ನೆಲೆಯಲ್ಲಿ ಅದನ್ನು ದುರಸ್ತಿ ಮಾಡುತ್ತಿದ್ದರು. ಸರಿಪಡಿಸುವ ಸಂದರ್ಭ ಸೋರುವಿಕೆಯಲ್ಲಿ ನೀರಿನ ಹರಿವು ಏಕಾಏಕಿ ಹೆಚ್ಚಾಗಿ ಬೆಳಗ್ಗಿನ ಜಾವ 2:15ರ ಸುಮಾರಿಗೆ ಮಂಗ್ರಾ ಓರೋನ್ 120 ಅಡಿ ಮೇಲಿಂದ ಕೆಳಗೆ ಬಿದ್ದಿದ್ದಾರೆ ಎನ್ನಲಾಗಿದೆ.

ತಕ್ಷಣ ಅಲ್ಲಿನ ಸಿಬ್ಬಂದಿ ಅವರನ್ನು ಮುಕ್ಕದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಅವರು ಆಸ್ಪತ್ರೆಯಲ್ಲಿ ಮೃತಪಟ್ಟರೆಂದು ತಿಳಿದು ಬಂದಿದೆ.

ಎಂಆರ್‌ಪಿಎಲ್‌ನ ಹೈಡ್ರೋಲಿಕ್ ಪ್ಲಾಂಟ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಮಿಕನಾಗಿ ನಿಯೋಜನೆಗೊಂಡಿದ್ದ ಮಂಗ್ರಾ ಓರೋನ್ ಎಂಬ ಜಾರ್ಖಂಡ್ ಮೂಲದ ಆದಿವಾಸಿ ಯುವಕನೊಬ್ಬ ಕರ್ತವ್ಯದ ಸಂದರ್ಭದಲ್ಲಿ ಅವಘಡದಲ್ಲಿ ಮೃತಪಟ್ಟಿದ್ದಾರೆ. ಕಂಪೆನಿಯ ನಿರ್ಲಕ್ಷ್ಯ, ಸರಿಯಾದ ಜೀವರಕ್ಷಕ ವ್ಯವಸ್ಥೆಗಳಿಲ್ಲದೆ ಕೆಲಸಕ್ಕೆ ನಿಯೋಜಿಸಿರುವುದೇ ಈ ಅವಘಡ ಸಂಭವಿಸಲು ಮುಖ್ಯ ಕಾರಣ ಎಂಬ ಮಾಹಿತಿ ಇದೆ. ಎಂಆರ್‌ಪಿಎಲ್ ಕಂಪೆನಿಯು ಮೃತ ಕಾರ್ಮಿಕನ ಕುಟುಂಬಕ್ಕೆ ಕನಿಷ್ಠ 1 ಕೋಟಿ ರೂ. ಪರಿಹಾರ ನೀಡಬೇಕು. ನಿರ್ಲಕ್ಷ್ಯದಿಂದ ಅವಘಡಕ್ಕೆ ಕಾರಣವಾಗಿರುವ ಕಂಪೆನಿಯ ವಿರುದ್ಧ ರಾಜ್ಯ ಸರಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

। ಮುನೀರ್ ಕಾಟಿಪಳ್ಳ,
ಸಂಚಾಲಕ, ಸುರತ್ಕಲ್ ನಾಗರಿಕ ಹೋರಾಟ ಸಮಿತಿ

ಘಟನೆಗೆ ಸಂಬಂಧಿಸಿ ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಕುಣಬಿ ಆದಿವಾಸಿ ಸಮುದಾಯದ ಮುಖಂಡರು-ರೈತ ನಾಯಕ ಮುಡಿಯೆ ನಾರಾಯಣ ವೆಳಿಪ್‌ರಿಗೆ ನುಡಿನಮನ

ಜೋಯಿಡಾ ತಾಲೂಕಿನ ಮುಡಿಯೆ ಗ್ರಾಮದವರೂ ಕುಣಬಿ ಸಮಾಜದ ಮತ್ತು ಆದಿವಾಸಿ ಸಮಯದಾಯಗಳ ಮುಖಂಡರು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಹಿರಿಯ ಮುಖಂಡರೂ ಆದ ಕಾಮ್ರೇಡ್ ನಾರಾಯಣ ವೆಳಿಪ್ ಅವರು ಮೇ 23 2024 ರಂದು ನಮ್ಮನ್ನು ಅಗಲಿದ್ದಾರೆ. ಅವರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ನಾರಾಯಣ ವೆಳಿಪ್ ಅವರ ಅಗಲಿಕೆ ಜನಪರ ಚಳುವಳಿಗೆ ಆದ ದೊಡ್ಡ ನಷ್ಟ. ನಾರಾಯಣ ವೆಳಿಪ್ ಅವರು ಸಿಪಿಐ(ಎಂ)ನ ಜನಪರ ಹೋರಾಟವನ್ನು ಜೋಯಿಡಾದ ವಿವಿಧೆಡೆ ವಿಸ್ತರಿಸಲು ಶ್ರಮಿಸಿದವರಾಗಿದ್ದರು.



ಅವರನ್ನು ನಾರ್ಯಣ ಮಾಮ್ ಎಂದೇ ಪ್ರೀತಿಯಿಂದ ಕರೆಯುವುದು ರೂಢಿಯಾಗಿತ್ತು. ಕುಣಬಿ ಬುಡಕಟ್ಟು ಸಮುದಾಯದಲ್ಲಿ, ಅವಿಭಕ್ತ ಕುಟುಂಬದ ಈ ಹಿರಿಯರ ಮನೆಯಲ್ಲಿ ಮೂರು ತಲೆಮಾರಿನ ಸದಸ್ಯರು ಪ್ರೀತಿಯಿಂದ ಇರುವಂತೆ ನೋಡಿಕೊಂಡವರು. ರೈತ ಕಾರ್ಮಿಕ ಸಂಘಟನೆಯವರನ್ನು ಅನೇಕ ಹಳ್ಳಿಗಳಿಗೆ ಕರೆಯಿಸಿ ಜನರಿಗೆ ತಿಳಿವಳಿಕೆ ಮೂಡಿಸಲು ಶ್ರಮಿಸಿದವರು. ರೈತ ಸಂಘದ ರಾಜ್ಯ ಸಮಿತಿಯ ಮಾರುತಿ ಮಾನ್ಪಡೆ, ನಿತ್ಯಾನಂದಸ್ವಾಮಿ, ಜಿ.ಸಿ. ಬಯ್ಯಾರೆಡ್ಡಿಯವರು ಆಗಾಗ ಬಂದಿದ್ದಾರೆ.

"ನನಗೆ ಭಾಷಣ್ ಬರೂದಿಲ್ಲ, ನೀವ್ ಮಾಡಿ, ಕನ್ನಡ್ ಬರೂದಿಲ್ಲ ಕಲ್ಸಿ, ಲೀಡರ್ ಲೋಕಾಲೆ ಭಾಷಣ್ ಅಮ್ಗೆಲ್ ಲೋಕಾಕ್ ತೊಡೆ ಕೊಂಕಣ್ಯಾನ್ ಸಾಂಗ್ ಹ್ಣಾ" ಎಂದು ವಿನಯದಿಂದ ಹೇಳುವ ಹಿರಿಯರಾಗಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ತಾಲೂಕಿನ ಅಧ್ಯಕ್ಷರಾಗಿ, ಸಿಪಿಐ(ಎಂ)ನ ಸದಸ್ಯರಾಗಿ ಕಳೆದ ಇಪ್ಪತ್ತೇಳು ವರ್ಷಗಳ ಕಾಲ ಜೋಯಿಡಾ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಆಗ್ರಹಿಸುತ್ತಿರುವ ಹೋರಾಟದ ಮುಂಚೂಣಿಯಲ್ಲಿದ್ದವರು, ಆದಿವಾಸಿ ಹಕ್ಕುಗಳ ಹೋರಾಟ ಸಮಿತಿಯಲ್ಲೂ ಇದ್ದರು. ಕುಣಬಿ, ಕುಂಬ್ರಿ, ಮರಾಠಿ ಮುಂತಾದ ಕುಣಬಿ ಮೂಲಗಳ ಜನಾಂಗಕ್ಕೆ ಸಾಂವಿಧಾನಿಕವಾಗಿ ಮಾನ್ಯತೆ ನೀಡಿ ಬುಡಕಟ್ಟು ಎಂದು ಘೋಷಿಸಲು ಆಗ್ರಹಿಸಿದ ಹೋರಾಟ, ಸಹಸ್ರಾರು ಸಹಿ ಸಂಗ್ರಹಣೆ ಚಳವಳಿ, ಜೋಯಿಡಾದಿಂದ ಕಾರವಾರಕ್ಕೆ, ಕಾರ್ಟೋಳಿಯಿಂದ ಮತ್ತು ಕುಂಬಾರವಾಡಾದಿಂದ ಜೋಯಿಡಾಕ್ಕೆ ಪಾದಯಾತ್ರೆ ಸಂಘಟಿಸುವಲ್ಲಿ, ಡಾ.ಆರ್.ವಿ. ಭಂಡಾರಿಯವರು ಉ.ಕ. ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದಾಗ ಜೋಯಿಡಾ ಕಾರವಾರ ತಾಲೂಕಿನಾದ್ಯಂತ ಚಿಂತನ ಉ.ಕ. ಮತ್ತು ಚಿಂತನ ರಂಗ ಅಧ್ಯಯನ ಕೇಂದ್ರದಿಂದ ನಡೆಸಲಾದ ಕಲಾ ಜಾಥಾದ ಉದ್ದಕ್ಕೂ ಇದ್ದು ವಿವಿಧ ಹಳ್ಳಿಗಳಿಗೆ ತಡರಾತ್ರಿ ತನಕ ಕಲಾವಿದರನ್ನು ಕೊಂಡೊಯ್ಯುವಲ್ಲಿ ಉಪಚಾರ ನೀಡುವಲ್ಲಿ, ಅಂದಿನ ಕೇಂದ್ರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂಪಾ ರವರಿಗೆ, ಸಂಸತ್ತಿನಲ್ಲಿ ವಿರೋಧ ಪಕ್ಷದ ನಾಯಕರಾದ ಸಿಪಿಐ(ಎಂ)ನ ಬಸುದೇವ್ ಆಚಾರ್ಯರಿಗೆ, ಗಡಿ ಪ್ರಾಧಿಕಾರದ ಅಂದಿನ ಅಧ್ಯಕ್ಷರಾದ ಚಂದ್ರಕಾಂತ ಬೆಲ್ಲದ್‌ರಿಗೆ ಈ ಭಾಗದ ಸಮಸ್ಯೆಗಳ ವಿರುದ್ಧ ಮನವಿ ನೀಡುವಲ್ಲಿ, ಕ್ಯಾಸಲ್ ರಾಕ್‌ನಲ್ಲಿ ಜರುಗಿದ ಗಡಿ ಉತ್ಸವದ ವೇದಿಕೆಗೆ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಘೇರಾವ್ ಹಾಕಿ ಅಂದಿನ ಉಸ್ತುವಾರಿ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರಿಗೆ, ಡಾ.ಎಂ. ಎಂ. ಕಲಬುರ್ಗಿಯವರಿಗೆ, ಡಿ.ಸಿ. ಕೃಷ್ಣಯ್ಯರಿಗೆ ಸಂಘಟನೆ ಪರವಾಗಿ ಗಮನ ಸೆಳೆವಾಗ,



ಅಂದಿನ ಸಮಾಜ ಕಲ್ಯಾಣ ಮಂತ್ರಿಗಳಾದ ಎಚ್. ಆಂಜನೇಯ ಹಳಿಯಾಳದಲ್ಲಿ ಗ್ರಾಮ ವಾಸ್ತವ್ಯ ಮಾಡಿದಾಗ ಅಲ್ಲಿಗೂ ಹೋಗಿ ಜೋಯಿಡಾದ ಮತ್ತು ಕುಣಬಿಗಳ ಸಮಸ್ಯೆ ಮನವರಿಕೆ ಮಾಡುವಲ್ಲಿ ಜೊತೆಯಾದವರು. ಹೀಗೆ ಹತ್ತಾರು ಹೋರಾಟ ಜನಪರ ಕೆಲಸಗಳ ಮೂಲಕ ನಾರಾಯಣ್ ಮಾಮ ಮೆಚ್ಚಿನವರು. "ಅನೇಕ ರಾಜಕಾರಣಿಗಳ ಜೊತೆಗೆ ನನ್ನ ಯೌವನದ ಕಾಲದಲ್ಲಿ ಇದ್ದು, ಸಮಸ್ಯೆ ಬಗೆಹರಿಸಿರೆಂದು ಗೋಗರೆದರೂ ಕೆಲಸ ಮಾಡಿಸಿಕೊಳ್ಳಲಾಗಿಲ್ಲ. ಆದರೆ ಅವರೆಲ್ಲರನ್ನು ಎದುರು ಹಾಕಿಕೊಂಡು ಕಟ್ಟಕಡೆಯದಾಗಿ ನಾನು ನನ್ನ ಸಂಗಾತಿಗಳು ಕರ್ನಾಟಕ ಪ್ರಾಂತ ರೈತ ಸಂಘ ಕಟ್ಟಿದೆವು ಮತ್ತು ಸಿಪಿಐ(ಎಂ) ಅನ್ನೂ ಮಾಡಿದೆವು. ಹೋರಾಟವೊಂದೇ ನಮ್ಮನ್ನು ಮುಂದಕ್ಕೆ ತಂದಿತು. ಮೊದಮೊದಲು ವ್ಯಕ್ತಿಗಳಾಗಿ ಗುರ್ತಿಸಿಕೊಂಡಿದ್ದ ನಮಗೆ ಸಂಘಟನೆಯ ಶಕ್ತಿಯಾಗಿ ಗುರ್ತಿಸುವಂತೆ ಮಾಡಿದ್ದು ರೈತ ಸಂಘ, ಕೆಪಿಆರ್‌ಎಸ್. "ಆಮ್ಗೆಲೆ ರೈತ್ ಸಂಘ್ ಕರ್ನಾಟಕ್ ಪ್ರಾಂತ್ ರೈತ್ ಸಂಘ್ ಜಿಂದಾಬಾದ್, ಆಮಿ ಕಾರವಾರ್ ಪರ್ಯಂತ್ ವಸೂಲ್ ಎಯ್ಲೆ, ಹೋರಾಟ್ ಕೆಲೆ, ಪುಲ್ಕರ್ ಕಾಮ್ರೇಡ್ ಸದ್ದಾ ಯತಾಸಿಲ್ಲೊ. ಜೋಯ್ಡಾ ತಹಸಿಲ್ದಾರಾ ಮುಕಾರ್ ಖೂಬ್ ದಿವಸ್ ಬಸಿಲ್ಲೆ ಆಮಿ ತೈತ್ ಜೆವಣ್ ಸಗ್ಗೆ ಕರ್ತಾ ಆಸಿಲ್ಲೆ ಆಮ್ಗೆಲೆ ಮಾಂಗ್ಣಿ ಸರ್ಕಾರಾಕ್ ಪಾವೈಚಾಕ್ ಇತ್ಲೀ ದಿವಸ್ ಲಾಗ್ಲೆ, ಆತಾ ತುಮಿ ಮುಕಾರ್ ಹೊರ್ಕಾ" ಎಂದು

ಪುಟ 14 ಕ್ಕೆ

20 ಕೋಟಿ ಕಾರ್ಮಿಕರು ಭಾಗವಹಿಸಿದ್ದರು. ವಿವಿಧ ಒಕ್ಕೂಟಗಳ ಆಶ್ರಯದಲ್ಲಿ, ಕಲ್ಲಿದ್ದಲು, ಉಕ್ಕು, ತೋಟಗಾರಿಕೆ, ಅಂಗನವಾಡಿ, ಆಶಾ, ಮಧ್ಯಾಹ್ನದ ಬಿಸಿ ಊಟದ ನೌಕರರು ವಿವಿಧ ವಲಯಗಳ ನಡುವೆ ಐಕ್ಯ ಚಳುವಳಿಗಳು – ಮುಷ್ಕರಗಳು ನಡೆದವು.

ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಐಕ್ಯವೇದಿಕೆಯ ಮೂಲಕ

2010 ರಿಂದ 2013 ರವರೆಗೆ, ಐ.ಎನ್.ಟಿ.ಯು.ಸಿ. ಮತ್ತು ಬಿಎಂಎಸ್ ಸೇರಿದಂತೆ ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಐಕ್ಯವೇದಿಕೆಯ ಮೂಲಕ ಮೂರು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಗಳನ್ನು ಆಯೋಜಿಸಿವೆ. 1982ರಲ್ಲಿ ನಡೆದ ಮೊದಲ ರಾಷ್ಟ್ರವ್ಯಾಪಿ ಮುಷ್ಕರದಲ್ಲಿ ಐ.ಎನ್.ಟಿ.ಯು.ಸಿ. ಭಾಗವಹಿಸಲಿಲ್ಲ. 2015ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಬಿಎಂಎಸ್ ಐಕ್ಯ ಚಳವಳಿಯಿಂದ ದೂರ ಉಳಿದಿತ್ತು. ನವ ಉದಾರವಾದಿ ನೀತಿಗಳ ಆರಂಭದಿಂದ ಇಲ್ಲಿಯವರೆಗೆ 21 ಸಾರ್ವತ್ರಿಕ ಮುಷ್ಕರಗಳನ್ನು ಸಿಐಟಿಯು ಉಪಕ್ರಮದೊಂದಿಗೆ ನಡೆದಿರುವುದು ಅಭೂತಪೂರ್ವ.

ರೈತ ಚಳವಳಿಯ ಜೊತೆಗೂಡಿ

ಸಿಐಟಿಯು ಕೇವಲ ಕಾರ್ಮಿಕ ಸಂಘಟನೆಯಲ್ಲಿ, ಕಾರ್ಮಿಕರ ನಡುವೆ ಐಕ್ಯತೆಯನ್ನು ಸಾಧಿಸಲಷ್ಟೇ ಸೀಮಿತವಾಗಿಲ್ಲ. ಸಮಾಜದಲ್ಲಿ ಶೋಷಣೆ ಮತ್ತು ತುಳಿತಕ್ಕೊಳಗಾದ ಎಲ್ಲಾ ವರ್ಗಗಳ ಕಾರ್ಮಿಕರ, ಸಾರ್ವಜನಿಕರ ಸಮಸ್ಯೆಗಳ ವಿರುದ್ದ ತನ್ನ ಧ್ವನಿ ಎತ್ತಿ ಹೋರಾಡುತ್ತಾ ಬಂದಿದೆ. ನವೆಂಬರ್ 26, 2020 ರಂದು, 20 ನೇ ಸಾರ್ವತ್ರಿಕ ಮುಷ್ಕರದ ಸಮಯದಲ್ಲಿ, ಮೂರು ಕೃಷಿ ಕಾನೂನುಗಳ ವಿರುದ್ಧ ಪ್ರಾರಂಭವಾದ ರೈತ ಚಳವಳಿಯ ಜೊತೆಗೂಡಿ ಗೆಲ್ಲುವವರೆಗೂ ಆ ಹೋರಾಟವನ್ನು ಮುಂದುವರೆಸಿದರು. ಗ್ರಾಮೀಣ ಕೃಷಿ ಕಾರ್ಮಿಕರ

ಸಿಐಟಿಯು ಸಂಸ್ಥಾಪನಾ ದಿನ..... ಪುಟ 2 ರಿಂದ

ಸಮಸ್ಯೆಗಳ ಪರಿಹಾರಕ್ಕಾಗಿ ಸಿಐಟಿಯು ಜಂಟಿ ಹೋರಾಟಗಳಲ್ಲಿ ಭಾಗಿಯಾಗುತ್ತಿದೆ.

ಮೊದಲ ರಾಷ್ಟ್ರೀಯ ಕಾರ್ಮಿಕ ಮಹಿಳೆಯರ ಸಮ್ಮೇಳನ

ದುಡಿಯುವ ಮಹಿಳೆಯರನ್ನು ಚಳವಳಿಗೆ ಕರೆತರುವಲ್ಲಿ ಸಿಐಟಿಯು ಪಾತ್ರ ಬಹಳ ಮಹತ್ವದ್ದಾಗಿದೆ. ಇದನ್ನು ಒಂದು ವರ್ಗ ಕರ್ತವ್ಯವನ್ನಾಗಿ ಸಿಐಟಿಯು ಗುರುತಿಸಿದೆ. ವರ್ಗ ಐಕ್ಯತೆಯನ್ನು ಹೆಚ್ಚಿಸಲು ಮತ್ತು ವರ್ಗ ಹೋರಾಟಗಳನ್ನು ಬಲಪಡಿಸಲು ದುಡಿಯುವ ಮಹಿಳೆಯರು ಚಳವಳಿಗೆ ಬರುವುದು ಮುಖ್ಯವೆಂದು ಸಿಐಟಿಯು ಪರಿಗಣಿಸುತ್ತದೆ. 1979ರಲ್ಲಿ ಸಿಐಟಿಯು ಮೊದಲ ರಾಷ್ಟ್ರೀಯ ಕಾರ್ಮಿಕ ಮಹಿಳೆಯರ ಸಮ್ಮೇಳನವನ್ನು ಆಯೋಜಿಸಿತ್ತು. ಒಂದು ಕೇಂದ್ರ ಕಾರ್ಮಿಕ ಸಂಘದ ಆಶ್ರಯದಲ್ಲಿ ಮಹಿಳಾ ಸಮಾವೇಶ ನಡೆದಿದ್ದು ಅದೇ ಮೊದಲನೆಯದು.

ಕಾರ್ಮಿಕರ ಮತ್ತು ಜನತೆಯ ಸಂಕಷ್ಟಗಳು ಹೆಚ್ಚಾಗಿವೆ

ಕಳೆದ ಹತ್ತು ವರ್ಷಗಳ ಮೋದಿ ಸರ್ಕಾರದ ನೀತಿಗಳು ಕಾರ್ಮಿಕರು, ರೈತರು ಮತ್ತು ಶ್ರಮಿಕರು ಮಾತ್ರವಲ್ಲ, ರಾಷ್ಟ್ರಕ್ಕೂ ವಿಪತ್ತು ಎಂಬುದು ಸಾಬೀತಾಯಿತು. ನಿರುದ್ಯೋಗ, ವಿಶೇಷವಾಗಿ ವಿದ್ಯಾವಂತ ಯುವಕರಲ್ಲಿ ಅಭೂತಪೂರ್ವ ಮಟ್ಟವನ್ನು ತಲುಪಿದೆ. ಲಕ್ಷಾಂತರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಂಇ) ಮುಚ್ಚಿಹೋಗಿದ್ದು ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಷ್ಟಕ್ಕೆ ಕಾರಣವಾಗಿವೆ. ಕೆಲಸದ ಪರಿಸ್ಥಿತಿಗಳು ಹದಗೆಟ್ಟಿವೆ. ಖಾಯಂ ಉದ್ಯೋಗಗಳು ತೀವ್ರವಾಗಿ ಇಳಿದಿವೆ. ಗುತ್ತಿಗೆ, ತಾತ್ಕಾಲಿಕ, ನಿಶ್ಚಿತ ಅವಧಿ, ಅರೆಕಾಲಿಕ ಉದ್ಯೋಗಗಳು, ಗಿಗ್ ಕೆಲಸ ಇತ್ಯಾದಿ ಯಾವುದೇ ಉದ್ಯೋಗ ಭದ್ರತೆ, ಸಾಮಾಜಿಕ ಭದ್ರತೆ ಅಥವಾ ಕೆಲಸದ ಹಕ್ಕುಗಳಿಲ್ಲದೆ ಅನೇಕ ರೀತಿಯ ಉದ್ಯೋಗಗಳು ಹೆಚ್ಚಿವೆ. ಅಸ್ತಿತ್ವದಲ್ಲಿರುವ 29 ಕಾರ್ಮಿಕ ಕಾನೂನುಗಳನ್ನು ಸಜ್ಜುಗೊಳಿಸುವ, ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಅಂಗೀಕರಿಸುವ ಮೂಲಕ, ಮೋದಿ ಸರಕಾರವು ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಲು, ಅಸ್ತಿತ್ವದಲ್ಲಿರುವ ಸಾಮಾಜಿಕ ಭದ್ರತೆಯ ಪ್ರಯೋಜನಗಳನ್ನು ಸಹ ಕಸಿದುಕೊಳ್ಳಲು ಮತ್ತು ಅವರನ್ನು ವಾಸ್ತವ ಗುಲಾಮರಂತಹ ಪರಿಸ್ಥಿತಿಗಳಿಗೆ ತಳ್ಳಲು ಪ್ರಯತ್ನಿಸಿತು. ಸಾರ್ವಜನಿಕ ವಲಯ, ಆರೋಗ್ಯ, ಶಿಕ್ಷಣ, ಸಾರಿಗೆ ಮತ್ತು ದೇಶದ ನೈಸರ್ಗಿಕ ಸಂಪನ್ಮೂಲಗಳು ಸೇರಿದಂತೆ ಸಾರ್ವಜನಿಕ ಸೇವೆಗಳನ್ನು ವಿದೇಶಿ ಏಕಸ್ವಾಮ್ಯ ಸಂಸ್ಥೆಗಳಿಗೆ ಮತ್ತು ಖಾಸಗಿ ಕಾರ್ಪೊರೇಟ್‌ಗಳಿಗೆ ಹಸ್ತಾಂತರಿಸಲಾಗುತ್ತಿದೆ. ಅಗತ್ಯ ಸರಕುಗಳ ಬೆಲೆಗಳು ಗಗನಕ್ಕೇರಿದೆ. ಬಳಕೆ ಕುಸಿದಿದೆ. ಅಸಂಘಟಿತ ವಲಯದ ಕಾರ್ಮಿಕರ ದೊಡ್ಡ ವಿಭಾಗಗಳಿಗೆ ಸಾಲಬಾಧೆ ಹೆಚ್ಚಿದೆ.

ಮತಾಂಧ ಅಜೆಂಡಾದೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಮನುಸ್ಮೃತಿಯ ಆಧಾರದ ಮೇಲೆ ಹಿಂದುತ್ವ ಆಡಳಿತವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಅವರಲ್ಲಿ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರ ಮೇಲೆ ದಬ್ಬಾಳಿಕೆ, ಹಲ್ಲೆ ಮತ್ತು ಕ್ರೌರ್ಯ ನಡೆಯುತ್ತಿದೆ. ಗೋಸಂರಕ್ಷಣೆಯ ನೆಪದಲ್ಲಿ ಮುಸ್ಲಿಂ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ಹಲ್ಲೆಗಳು, ಅಂತರ್ಜಾತಿ ವಿವಾಹವಾದ ದಂಪತಿಗಳನ್ನು ಪ್ರತ್ಯೇಕಿಸಿ ಕಿರುಕುಳ ನೀಡಲಾಗುತ್ತಿದೆ. ಹೀಗಾಗಿ, ಇದು ಕಾರ್ಮಿಕ ವರ್ಗದ ಐಕ್ಯತೆಗೆ ಭಂಗ ತರುತ್ತದೆ.

ವರ್ಗ ಹೋರಾಟವನ್ನು ಬಲಪಡಿಸುವ ಪ್ರಯತ್ನಗಳು ಮುಂದುವರಿಯುತ್ತದೆ

18 ನೇ ಲೋಕಸಭಾ ಚುನಾವಣೆಯ ಮತದಾನ ಪ್ರಕ್ರಿಯೆಗಳು ಮುಗಿದಿವೆ. ಫಲಿತಾಂಶಗಳು ಜೂನ್ 4 ರಂದು ಹೊರಹೊಮ್ಮಲಿವೆ. ಹೊಸ ಸರ್ಕಾರವು ಕೆಲವೇ ದಿನಗಳಲ್ಲಿ ರೂಪುಗೊಳ್ಳುತ್ತದೆ. ಇದು ಬಿಜೆಪಿ ಅಧಿಕಾರಕ್ಕೆ ಮರಳಿದರೆ, ಅದು ನವ ಉದಾರೀಕರಣ ಮತ್ತು ಹಿಂದೂತ್ವದ ಅವಳಿ ಕಾರ್ಯಸೂಚಿಗಳನ್ನು ಹೆಚ್ಚು ಆಕ್ರಮಣಕಾರಿಯಾಗಿ ಅನುಸರಿಸುತ್ತದೆ ಮತ್ತು ಭಾರತವನ್ನು ಸಂಪೂರ್ಣವಾಗಿ ಪರಿವರ್ತಿಸುತ್ತದೆ. ಅದೇ ಸಮಯದಲ್ಲಿ, ಬಿಜೆಪಿ ಸೋತರೆ, ಬರುವ ಹೊಸ ಸರ್ಕಾರವು ಸ್ವಯಂಚಾಲಿತವಾಗಿ ಪರ್ಯಾಯ ಜನಪರ ನೀತಿಗಳನ್ನು, ಅವರ ಪ್ರಣಾಳಿಕೆಯಲ್ಲಿ ಏನೇನು ಭರವಸೆಗಳನ್ನು ನೀಡಲಾಗಿದೆಯೋ ಅದನ್ನು ಅನುಸರಿಸುತ್ತದೆ ಎಂದು ಅರ್ಥವಲ್ಲ. 2004 ರಂತೆ, 18 ನೇ ಲೋಕಸಭೆಯಲ್ಲಿ ಎಡಪಂಥೀಯರು ಬಲವಾದ ಉಪಸ್ಥಿತಿಯನ್ನು ಹೊಂದಿದ್ದರೆ, ಕಾರ್ಮಿಕರು, ರೈತರು ಮತ್ತು ಸಾಮಾನ್ಯ ಜನರ ಧ್ವನಿಗಳು ಸಂಸತ್ತಿನಲ್ಲಿ ಅಷ್ಟರ ಮಟ್ಟಿಗೆ ಪ್ರತಿಧ್ವನಿಸುತ್ತವೆ.


ಆದರೆ, ಯಾವ ರಾಜಕೀಯ ರಚನೆಯು ಕೇಂದ್ರದಲ್ಲಿ ಸರ್ಕಾರವನ್ನು ಸ್ಥಾಪಿಸಿದರೂ, ವರ್ಗ ಐಕ್ಯತೆಯನ್ನು ಅಭಿವೃದ್ಧಿಪಡಿಸಲು ಮತ್ತು ವರ್ಗ ಹೋರಾಟವನ್ನು ಬಲಪಡಿಸುವ ಪ್ರಯತ್ನಗಳನ್ನು ಮುಂದುವರಿಸುವುದು ಸಿಐಟಿಯುಗೆ ಹೆಚ್ಚು ಮುಖ್ಯವಾದುದು. ಅದೇ ಸಮಯದಲ್ಲಿ ಅದರ ಸಾಂವಿಧಾನಿಕ ಉದ್ದೇಶದ ದೃಷ್ಟಿ ಕಳೆದುಕೊಳ್ಳುತ್ತಿಲ್ಲ. ಕಾರ್ಮಿಕ ವರ್ಗವು ಸಮಾಜವನ್ನು ಪರಿವರ್ತಿಸುವಲ್ಲಿ ತನ್ನ ಐತಿಹಾಸಿಕ ಪಾತ್ರ ಮತ್ತು ಜವಾಬ್ದಾರಿಯನ್ನು ತನ್ನ ತಕ್ಷಣದ ವಿಷಯಗಳ ಕುರಿತು ಹೋರಾಟಗಳ ಮೂಲಕ ನಿರ್ವಹಿಸಲು ಸಿದ್ಧರಾಗಿರಬೇಕು. ●

ಆರ್.ಜಯಕುಮಾರ್: ಸಂಗಾತಿತನದ ಆಪ್ತತೆ

ಕಾಡ ಹಾದಿಯಲ್ಲಿ ಕಾಡಿದ ನೆನಪುಗಳು...

ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.)ನ ಮಾಜಿ ರಾಜ್ಯ ಅಧ್ಯಕ್ಷರು, ಭಾರತ ಪ್ರಜ್ಞಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ.)ನ ಮಾಜಿ ರಾಜ್ಯ ಮುಖಂಡರೂ ಆಗಿದ್ದ ಜನ ಚಳುವಳಿಗಳ ಪ್ರೀತಿಯ ಸಂಗಾತಿ ಆರ್. ಜಯಕುಮಾರ್ ಅವರು ಮೇ 25, 2024 ರಂದು ನಮ್ಮನ್ನು ಅಗಲಿದ್ದಾರೆ. ಇತ್ತೀಚೆಗೆ ಬಿಡುಗಡೆಯಾದ ಜಯಕುಮಾರ್ ಅವರ ಆತ್ಮಕತೆ 'ಕಾಡ ಹಾದಿಯ ಬೆಳಕಿನ ಜಾಡು' ಪುಸ್ತಕದ ಬಗೆಗೆ ಜಯಕುಮಾರ್ ಅವರ ದೀರ್ಘಕಾಲದ ಒಡನಾಡಿ ಡಾ. ಎಸ್.ವೈ.ಗುರುಶಾಂತ್ ಅವರು ಫೆಬ್ರವರಿ 17, 2024 ರಂದು ಬರೆದ ಅನಿಸಿಕೆ ಇದು. ಹಾಗೆಯೇ ಇದು, ಆತ್ಮೀಯ ಸಂಗಾತಿಯೊಬ್ಬರ ಕುರಿತ ಆಪ್ತ ಬರಹವೂ ಹೌದು.

ಡಾ.ಎಸ್.ವೈ.ಗುರುಶಾಂತ್



ದಮ್ಮು ಕಟ್ಟಿ ರೈಲು ಓಡುತ್ತಿದೆ. ಡಂ, ಡಂ (ಕಲ್ಕತ್ತಾ) ತಲುಪಲು ಇನ್ನೂ ಈಗಿನ ಹಗಲು, ಒಂದು ರಾತ್ರಿ ಪಯಣ ಸವೆಸಬೇಕು. ಬೋಗಿಯಲ್ಲಿದ್ದ ಪ್ರತಿನಿಧಿಗಳು ಒಂದೆಡೆ ಕಲೆತಿದ್ದೇವೆ. ಮಾತುಗಳು ತತ್ವ, ಸಿದ್ಧಾಂತಗಳ ಸುತ್ತ ಇದ್ದರೂ ಅವನ್ನು ಒಂದು ವ್ಯವಸ್ಥಿತ ಚರ್ಚೆ ಎನ್ನಲಾಗುವುದಿಲ್ಲ. ಅದು ಎಲ್ಲಾ ಕಡೆ ಸುಳಿದಾಡೋ ಸಂವಾದ. ಆ ಸುತ್ತಾಟ ಹಾಗೇ ನಿಧಾನಕ್ಕೆ ತನ್ನ ಗತಿಯನ್ನು ಬದಲಿಸಿತು, ಹರಟೆ ಹೋಗಿ ಗಂಭೀರ ವಿಷಯಕ್ಕೆ ಪ್ರವೇಶಿಸಿಯಾಯಿತು. ಎಸ್.ಎಫ್.ಐ.ನ ಅಖಿಲ ಭಾರತ ಸಮ್ಮೇಳನಕ್ಕೆ ಹೊರಟಿದ್ದ ಪ್ರತಿಯೊಬ್ಬ ಪ್ರತಿನಿಧಿಯ ಹಿನ್ನೆಲೆಯನ್ನು ಮುನ್ನಲೆಗೆ ತರುವ ಸಂವಾದ ಅದು!

'. . . . ಕೊಡಗಿನ ತೋಟವೊಂದರಲ್ಲಿ ಕೆಲಸ ಮಾಡುವ ಹೆಣ್ಣು ಮಗಳಿದ್ದಾಳೆ. ಅಲ್ಲಿಯ ಮ್ಯಾನೇಜರ್‌ಗೆ ಆಕೆಯ ಗುಣ, ರೂಪ ಬಹುವಾಗಿ ಹಿಡಿಸಿದೆ. ಪ್ರೀತಿ ಮೊಳೆತು ಮದುವೆಯಾಗುತ್ತದೆ. ಮಕ್ಕಳೂ ಆಗುತ್ತಾರೆ. ಶ್ರೀಮಂತ ಕುಟುಂಬದ ಸೊಸೆಯಾಗಿದ್ದಾಳೆ ಆಕೆ. ಆದರೆ ಆ ಒಂದು ದಿನ . . . .' ಹೀಗೆ ವಿವರಗಳು ಸಾಗುತ್ತಾ 'ಆ ತಾಯಿಯ ಮಗ ನಾನು' ಎಂದು ಪರಿಚಯಿಸುವ ಮೂಲಕ ಮಾತು ಮೌನವಾಗುತ್ತದೆ. ಮತ್ತೇ ಕೂಲಿ ಕೆಲಸ ಮಾಡಿ ತನ್ನ ಮಕ್ಕಳನ್ನು ಸಲಹಿ, ವಿದ್ಯಾವಂತರನ್ನಾಗಿಸಲು ಪಡಬಾರದ ಕಷ್ಟ ಪಟ್ಟ ತ್ಯಾಗಮಯಿ ತಾಯಿ, ತಂದೆಯನ್ನು ನೋಡದ, ತಂದೆಗಾಗಿ ಹಂಬಲಿಸಿದ ಮಗನ ಚಿತ್ರ ಮೂಡುತ್ತದೆ. ಈ ಎಲ್ಲಾ ವಿವರಗಳು ನನ್ನೊಳಗೆ ಬಹುವಾಗಿ ಕಾಡಿ ಮನಸ್ಸಿನೊಳಗೆ ಅಚ್ಚೊತ್ತುತ್ತವೆ. ಎಸ್.ಎಫ್.ಐ.ನ ಅಧ್ಯಕ್ಷರಾಗಿ ಮಾತ್ರವೇ ಗೊತ್ತಿದ್ದ ಆರ್.ಜಯಕುಮಾರ್ ಈ ಸಂವಾದದಲ್ಲಿ ಮತ್ತಷ್ಟೂ ಹತ್ತಿರದ ಒಡನಾಡಿಯಾಗುತ್ತಾರೆ.

ಆರ್.ಜಯಕುಮಾರ್ ಅಂದು ಸಂಗಾತಿಗಳ ಎದುರು ಮನಸ್ಸು ತೆರೆದು ಹೇಳಿದ ಕೆಲವು ಸಂಗತಿಗಳು, ವಿವರಿಸಿದ ಅದೇ ಕಥನದ ಧಾಟಿ ಈ ಪುಸ್ತಕದಲ್ಲಿದೆ. ಅವರ ಮನಸ್ಸಿನಲ್ಲಿಯ ಹಲವು ಸಂಕೀರ್ಣ ವಿಷಯಗಳನ್ನು ತಡವರಿಸದೇ ಇನ್ನೊಂದು ಬಗೆಯಲ್ಲಿ ಅಭಿವ್ಯಕ್ತಿಗೊಳಿಸಲು ಜಯಕುಮಾರರು ಆರಿಸಿಕೊಳ್ಳುವ, ಅದನ್ನು ಸಾದರ ಪಡಿಸುವ ವಿಧಾನ, ಕಥನ ಶೈಲಿಯ ಆಯ್ಕೆಯೂ ವಿಶಿಷ್ಟವಾಗಿ ಆಪ್ತವಾಗುತ್ತದೆ.

ಹತ್ತಿರದಿಂದ ಬಲ್ಲವರಿಗೆ ವ್ಯಕ್ತಿ ಜೀವನದ ಕಥನವಾಗಿ, ಹಾಗೇ ಓದಬಲ್ಲವರಿಗೆ ಕಿರು ಕಾದಂಬರಿಯಾಗಿ ಇದು ಗ್ರಾಹ್ಯವಾಗಬಲ್ಲದು. ಜಯಕುಮಾರ್ ಮತ್ತವರ ಕುಟುಂಬದ ಜೊತೆ, ಜೊತೆಯೇ ನಡೆದ ಅನುಭವ ಓದು ಮುಗಿಸುವಾಗ ಗಾಢವಾಗಿ ಕಾಡುತ್ತದೆ, ಎದೆ ಭಾರವಾಗುತ್ತದೆ. ಒಡನಾಟದಲ್ಲಿ ಅರಿತ ವಿಷಯಗಳಾಚೆ ಎಷ್ಟೊಂದು ಗಹನ ಸಂಗತಿಗಳಿವೆ! ಸರಿದ ಸರಳ ಎನಿಸಿದ ಘಟನೆಗಳೂ ಇಂದು ನೋವಿನ ಭಾರ ಹೊತ್ತು ನಿಂತಿವೆ.

ಈ ಪುಸ್ತಕವು ಬದುಕಿನ ಎರಡು ಭಾಗಗಳನ್ನು ಹೊತ್ತಿದೆ. ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಅಮ್ಮ, ಅಣ್ಣ, ಬಾಲ್ಯ ಬದುಕಿ ಬಾಳಿದ ಪರಿಸರ, ಸಮಾಜಮುಖಿ, ಜನ ಚಳುವಳಿ, ಹೋರಾಟ, ಬದುಕಿನ ತಿರುವು, ಹಲವು ಬಗೆಯ ವೃತ್ತಿ ಜೀವನ, ಬದಲಾಗದ ಪ್ರವೃತ್ತಿ ಹೀಗೆ ವಿಷಯಗಳ ಸರಮಾಲೆ. ಇಲ್ಲಿಯ ವಿಷಯಗಳು ವ್ಯಕ್ತಿಗತ ಎಂದು ಕಂಡರೂ ಅಲ್ಲಿಗೇ ಸೀಮಿತಗೊಳ್ಳದ ಸಾಮಾಜಿಕ ಸಂಗತಿಗಳೂ ಆಗಿವೆ. ವೈಯುಕ್ತಿಕ ಹಾಗೂ ಸಾಮಾಜಿಕ ಎಂದು ವಿಭಜಿಸದ ಅಂತರ್ ಸಂಬಂಧಗಳ ಅನಾವರಣ ಈ ಕಥನದಲ್ಲಿ.

ಆ ಕಾರಣದಿಂದಾಗಿ ಅವರ ಬದುಕಿನ ಎಲ್ಲಾ ಬವಣೆಗಳೂ ವ್ಯಕ್ತಿಗತ ಸಂಕಟಗಳಾಗದೇ ಅವನ್ನು ಎದುರಿಸುವ ಸಾಮಾಜಿಕ ಸವಾಲುಗಳಾಗಿ ಮಾರ್ಪಾಡಾಗಿವೆ. ದಾರಿ ಇನ್ನೆಲ್ಲಿ ಎಂದಾಗ ಹೊಸ ದಾರಿಯ ಅನ್ವೇಷಣೆ. ನಿಲ್ಲದೇ ನಡೆಯುವ ಗುಣವೇ ದಾರಿಯನ್ನು ತೋರಿದೆ, ನಡೆದದ್ದೇ ದಾರಿಯಾಗಿ ಬದುಕಿನ ಹಂದರವನ್ನು ನೇಯ್ದಿದೆ.



ಜಯಕುಮಾರ್ ಎಂದರೆ ವಿದ್ಯಾರ್ಥಿ–ಯುವಜನ ಸಂಘಟನೆಗಳಲ್ಲಿ ಎಲ್ಲ ಸಂಗಾತಿಗಳಿಗೆ ಅಚ್ಚುಮೆಚ್ಚು. ರಾಜ್ಯ ಕಾರ್ಯದರ್ಶಿಯಾಗಿದ್ದ ಎಸ್. ಆರ್. ಆರಾಧ್ಯ ತಾತ್ವಿಕ, ರಾಜಕೀಯ, ಸಂಘಟನಾ ವಿಷಯಗಳಲ್ಲಿ ಬಲು ಜಿಗುಟು! ಜಯಕುಮಾರ್ ಅವರದ್ದು ಮೃದು ಭಾಷೆ, ಸೂಕ್ತ ನ್ಯಾಯ ನಿರ್ಣಯ, ಅಧ್ಯಕ್ಷರಾಗಿ ಸಮಾರೋಪಿಸುವ ರೀತಿ ವಿಶೇಷ. ಎಲ್ಲರನ್ನೂ ಒಳಗೊಳ್ಳ ಬೇಕೆಂಬ ಕಾಳಜಿ. ಅಭಿಪ್ರಾಯ ಭಿನ್ನತೆಗಳಿದ್ದ ವಿಷಯದಲ್ಲಿ 'ಓ, ಜಯಕುಮಾರ್ ಹೀಗಂದರಾ' ಎಂದು ಪ್ರಶ್ನಿಸುವ ಧಾಟಿಯಲ್ಲಿಯೇ ಅರ್ಥ ಅರಿತು ಒಪ್ಪುವ ಸಂದರ್ಭಗಳೂ ಹಲವು. ಸಭೆಗಳಲ್ಲಿ ಮಾತನಾಡುವಾಗಲೂ ಜಯಕುಮಾರ್ ಅವರದ್ದು ಖಚಿತತೆಯ ಧಾಟಿ. ಹರಟುವ ಸಂದರ್ಭದಲ್ಲಿ ಹಾಸ್ಯ, ಚುರುಕಿನ ತರ್ಕ. ಎಲ್ಲಾ ಹಂತಗಳ ಕಾರ್ಯಕರ್ತರೊಂದಿಗೆ ಹಮ್ಮು ಬಿಮ್ಮುಗಳಿಲ್ಲದೇ ಸುಲಲಿತವಾಗಿ ಬೆರೆಯುವ ಗುಣ, ಸಹಜವಾಗಿ ಆವರಿಸುವ ನಾಯಕತ್ವದ ಸ್ಥಾನ.

1984 ಅಂತಾ ಕಾಣುತ್ತದೆ. ಅವಿಭಜಿತ ದ.ಕನ್ನಡದ ಮಂಗಳೂರಿನಲ್ಲಿ ಸಿಐಟಿಯುನ ರಾಜ್ಯ ಸಮ್ಮೇಳನ. ಆಗ ಅವಿಭಜಿತ ಬಳ್ಳಾರಿ ಜಿಲ್ಲೆ ಹೊಸಪೇಟೆಯಲ್ಲಿದ್ದ ನಾನು ಎಸ್.ಎಫ್.ಐ. ರಾಜ್ಯ ಸಮಿತಿಯ ಪರವಾಗಿ ಒಬ್ಬ ಸೌಹಾರ್ದ ಪ್ರತಿನಿಧಿಯಾಗಿ ಭಾಗವಹಿಸಿದ್ದೆ. ಹಿರಿಯ ಮಾರ್ಕ್ಸ್‌ವಾದಿ ನಾಯಕ, ಸಿಐಟಿಯು ಅಧ್ಯಕ್ಷರಾಗಿದ್ದ ಕಾಮ್ರೇಡ್ ಬಿ.ಟಿ.ರಣದಿವೆ ಯವರು ಇಡೀ ಸಮ್ಮೇಳನದಲ್ಲಿ ಹಾಜರಿದ್ದು ಮಾರ್ಗದರ್ಶನ ನೀಡಿದರು. ಅವರ ಉದ್ಘಾಟನಾ ಭಾಷಣ, ಸಮಾರೋಪವನ್ನು 'ಒಂದು ಸಾಲು ಅಕ್ಷರ' ಬಿಡದೇ ಎನ್ನುವಂತೆ ಐಕ್ಯರಂಗಕ್ಕೆ ಲೇಖನ ರೂಪದಲ್ಲಿ ಕೊಟ್ಟೆ. ಅವರು ವಿಷಯ, ವಿದ್ಯಾಮಾನಗಳನ್ನು ವಿಶ್ಲೇಷಿಸಿದ ರೀತಿ, ಉನ್ನತ ನಾಯಕತ್ವದ ದಿಗ್ದರ್ಶನ. ಅಲ್ಲದೇ ಸಮ್ಮೇಳನದ ಕೊನೆಯ ಭಾಗವಾಗಿ ಅತ್ಯಂತ ಬೃಹತ್ ರ್‍ಯಾಲಿ, ಅಬ್ರಾಹಂ ಕರ್ಕಡರಂಥವರ ಮುಂದಾಳತ್ವದಲ್ಲಿ ಆವೇಶ, ಸ್ಫೂರ್ತಿ ತುಂಬುವ ಕೆಂಪು ಸ್ವಯಂ ಸೇವಕರ ಪರಿಣಾಮಕಾರಿ ಪರೇಡ್! ನನಗೆ ಉತ್ಸಾಹ ಉಕ್ಕಿಸಿದ್ದವು. ಇಂತಹ ಅತೀ ದೊಡ್ಡ ಸಮ್ಮೇಳನವನ್ನು ಯಶಸ್ವಿಗೊಳಿಸಲು ದುಡಿದ ಹತ್ತಾರು ಸ್ವಯಂ ಸೇವಕರ ತಂಡಗಳಿದ್ದವು. ಆಗಲೇ ಜಯಕುಮಾರ್ ರವರು ದ.ಕ.ದಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿ ಇದ್ದರು. ಅವರ ಮುಂದಾಳತ್ವದಲ್ಲಿ ಸುನೀಲ್ ನಟೇಕರ್, ಶಿವಾನಂದ ಕೋಡಿ, ಮುಂತಾದ ಯುವ ಸಂಗಾತಿಗಳ ತಂಡವೂ ಕೆಲಸ ಮಾಡಿತ್ತು. ಬಹಿರಂಗ ಸಭೆಯ ಬಳಿಕ ಎಲ್ಲವನ್ನೂ ಒಪ್ಪ ಓರಣವಾಗಿ ವಸ್ತುಗಳನ್ನು ಬಿಚ್ಚಿ ಜೋಡಿಸುವ ಕೆಲಸಗಳನ್ನು ಈ ತಂಡ ಮಾಡಿ ಮುಗಿಸಿತು. ಕರ್ತವ್ಯ ಮಾಡಿ ಮುಗಿಸಿದ ಸಂತಸ ಎಲ್ಲರಲ್ಲೂ ಚಿಮ್ಮುತ್ತಿತ್ತು. ನನಗೆ ಈ ಬೃಹತ್ ಸಮ್ಮೇಳನದ ಕೆಲಸಗಳು ಇವೆಲ್ಲಾ ಹೊಸತು! ಅಂದು ಸಿಐಟಿಯುವಿನ ರಾಜ್ಯ ಪ್ರಧಾನ

ಪುಟ 10 ಕ್ಕೆ


ಇತ್ತೀಚೆಗೆ ಲೀಲಾ–ಜಯಕುಮಾರ್ ದಂಪತಿಗಳನ್ನು ಪಕ್ಷದ ಸಂಗಾತಿಗಳು ಭೇಟಿ ಮಾಡಿದಾಗ... ಜಿ.ಸಿ.ಬಯ್ಯಾರೆಡ್ಡಿ, ಕೆ.ಪ್ರಕಾಶ್, ಎಸ್.ವೈ.ಗುರುಶಾಂತ್


ಇ.ಎಂ.ಎಸ್. ನಂಬೂದರಿ ಪಾದ್ ಅವರೊಂದಿಗೆ ಲೀಲಾ – ಜಯಕುಮಾರ್



ಎಸ್.ಎಫ್.ಐ. ಸಮ್ಮೇಳನವೊಂದರ ಸಂದರ್ಭದಲ್ಲಿ ವಿದ್ಯಾರ್ಥಿ ಚಳುವಳಿಯ ಸಂಗಾತಿಗಳು

ವಿಶ್ವದ ಅತಿದೊಡ್ಡ ಕಾರ್ಮಿಕ ಮುಷ್ಕರಗಳಲ್ಲಿ ಒಂದಾದ ಅಖಿಲ ಭಾರತ ರೈಲ್ವೆ ಮುಷ್ಕರವು ಮೇ 8 ರಂದು ಸುವರ್ಣಮಹೋತ್ಸವವನ್ನು ಆಚರಿಸಿಕೊಂಡಿತು. 50 ವರ್ಷಗಳ ಹಿಂದಿನ ಮುಷ್ಕರದಲ್ಲಿ ಸುಮಾರು 20 ಲಕ್ಷ ಉದ್ಯೋಗಿಗಳು ಮತ್ತು ಕಾರ್ಮಿಕರು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ, ದೇಶದ ಜೀವನಾಡಿಯಾಗಿದ್ದ ರೈಲ್ವೆ ಹಳಿಗಳು 20 ದಿನಗಳ ಕಾಲ ನಿಶ್ಚಲವಾಗಿದ್ದವು. 1974ರ ಮೇ 8 ರಿಂದ 28 ರವರೆಗೆ ನಡೆದ ಮುಷ್ಕರವು ಹೋರಾಟದ ಇತಿಹಾಸದಲ್ಲಿ ವರ್ಗ ಪ್ರಜ್ಞೆಗಾಗಿ ಹೊಸ ಪುಟಗಳನ್ನು ಬರೆದಿದೆ. 15 ಲಕ್ಷ ಉದ್ಯೋಗಿಗಳು ಮತ್ತು 5 ಲಕ್ಷ ಕ್ಯಾಶುಯಲ್ ಕಾರ್ಮಿಕರು ನಡೆಸಿದ ಮುಷ್ಕರ ಜಗತ್ತಿನ ಗಮನ ಸೆಳೆದಿತ್ತು.



ವಿಶ್ವದ ಅತಿದೊಡ್ಡ ಕಾರ್ಮಿಕ ಮುಷ್ಕರಗಳಲ್ಲಿ ಒಂದಾದ 20 ದಿನಗಳ ಕಾಲ ನಡೆದ

ಅಖಿಲ ಭಾರತ ರೈಲ್ವೆ ಮುಷ್ಕರಕ್ಕೆ–50 ವರ್ಷಗಳು

ಬ್ರಿಟಿಷ್ ಆಳ್ವಿಕೆಯಲ್ಲಿಯೂ ರೈಲ್ವೆ ಉದ್ಯೋಗಿಗಳನ್ನು ನಿರಂತರವಾಗಿ ದುಡಿಸಿಕೊಳ್ಳಲಾಗುತ್ತಿತ್ತು. ಇಂತಹ ಶೋಷಣೆಯ ವಿರುದ್ದ ರೈಲ್ವೆ ಉದ್ಯೋಗಿಗಳು ನಡೆಸಿದ ಹಲವು ಹೋರಾಟಗಳು ಸಹ ಸಾಮ್ರಾಜ್ಯವಾದಿ ವಿರೋಧಿ ಹೋರಾಟಗಳೇ ಅಗಿದ್ದವು. ದುಷ್ಟ ಬ್ರಿಟಿಷ್ ಸಾಮ್ರಾಜ್ಯಶಾಹಿ ಯಾವಾಗಲೂ ಅಂತಹ ಹೋರಾಟಗಳನ್ನು ನಿಗ್ರಹಿಸಲು ಪ್ರಯತ್ನಿಸಿದೆ. 1946 ರಲ್ಲಿ ನಡೆದ 31–ದಿನಗಳ ಸುದೀರ್ಘ ಮುಷ್ಕರವನ್ನು ನಿಗ್ರಹಿಸಲು ಬ್ರಿಟಿಷ್ ಆಡಳಿತ ಹಲವು ವಿಧದಲ್ಲಿ ಪ್ರಯತ್ನಿಸಿತು. ವಿತ್ತಿರಾಪಲ್ಲಿಯ ಗೋಲ್ಡನ್ ರಾಕ್ ರೈಲ್ವೆ ಕಾರ್ಯಾಗಾರದ ಬಳಿ ಮುಷ್ಕರ ಮಾಡುತ್ತಿದ್ದ ಕಾರ್ಮಿಕರ ಮೇಲೆ ಪೊಲೀಸರು ನಡೆಸಿದ ದಾಳಿಯಲ್ಲಿ ಐದು ಜನರು ಸಾವನ್ನಪ್ಪಿದರು.

ಸ್ವಾತಂತ್ರ್ಯ ಬಂದ ನಂತರವೂ ವಸಾಹತುಶಾಹಿ ಆಡಳಿತದ ವೇತನ ನೀತಿ ಮಾತ್ರ ಬದಲಾಗಲಿಲ್ಲ. ಮೊದಲನೆ, ದ್ವಿತೀಯ ಮತ್ತು ತೃತೀಯ ವೇತನ ಆಯೋಗಗಳು ಉದ್ಯೋಗಿಗಳಿಗೆ ನ್ಯಾಯ ಒದಗಿಸಲಿಲ್ಲ. ಮೊದಲ ವೇತನ ಸಮಿತಿಯ ಶಿಫಾರಸುಗಳ ವಿರುದ್ಧ 1948 ರಲ್ಲಿ ದಕ್ಷಿಣ ಭಾರತ ರೈಲ್ವೆ ಲೇಬರ್ಸ್ ಯೂನಿಯನ್ ಮುಷ್ಕರ ನಡೆಸಿತು. 1960 ಹಾಗೂ 1968 ರಲ್ಲಿ ಕೂಡಾ ಮುಷ್ಕರಗಳು ನಡೆದವು. ಹೆಚ್ಚುತ್ತಿರುವ ಹಣದುಬ್ಬರ, ಯುದ್ದ ಕಾಲ ಪರಿಸ್ಥಿತಿಯ ಕಾರಣದಿಂದ ಉದ್ಯೋಗದ ಹಕ್ಕುಗಳನ್ನು ತಿರಸ್ಕರಿಸುವುದು, ಇವುಗಳ ಜೊತೆಗೆ ದೇಶದಲ್ಲಿ ತೀವ್ರಗೊಂಡ ಅಸಮಾನತೆಗಳು, ಕಾರ್ಮಿಕರ ಅಸಂತೃಪ್ತಿಗೆ ಕಾರಣವಾದವು. ಜೊತೆಗೆ ಕೆಲಸದ ಸಮಯ ಅನಿಶ್ಚಿತವಾಗಿತ್ತು. ಏತನ್ಮಧ್ಯೆ, ಸಿಐಟಿಯು ರಚನೆಯು ಕಾರ್ಮಿಕರ ಐಕ್ಯತೆಯನ್ನು ಬಲಪಡಿಸಿದೆ. ದೇಶದಲ್ಲಿ ಆಂದೋಲನ ವಾತಾವರಣ ನೆಲೆಗೊಂಡಿದೆ. ಸಿಐಟಿಯು ಬೆಂಬಲದೊಂದಿಗೆ, ಸದರ್ನ್ ರೈಲ್ವೆ ನೌಕರರ ಒಕ್ಕೂಟ (ಡಿಆರ್ಇಯು) ಕಾರ್ಮಿಕರ ಕಲ್ಯಾಣಕ್ಕಾಗಿ ಕ್ರಮ ಕೈಗೊಂಡಿದೆ. ಆಗಸ್ಟ್ 1973 ರಲ್ಲಿ ಆಹಾರದ ಕೊರತೆಯ ಕಾರಣದಿಂದಾಗಿ, ರೈಲ್ವೆ ಕಾರ್ಮಿಕರು ಮೂರು ದಿನಗಳ ಕಾಲ ಮುಷ್ಕರ ನಡೆಸಿದರು.

ಸಿಐಟಿಯು ಬೆಂಬಲದೊಂದಿಗೆ, ಅಖಿಲ ಭಾರತ ರೈಲ್ವೆ ಮೆನ್ಸ್ ಫೆಡರೇಶನ್ (ಏರ್ಫ್) ನ ಅಧ್ಯಕ್ಷರಾಗಿ ಜಾರ್ಜ್ ಫರ್ನಾಂಡೀಸ್ ಆಯ್ಕೆಯಾದರು. ತರುವಾಯ, ಫೆಬ್ರವರಿ 27, 1974 ರಂದು, ದೆಹಲಿಯಲ್ಲಿ ಸುಮಾರು ರೈಲ್ವೆ ಕಾರ್ಮಿಕ ಮತ್ತು ಉದ್ಯೋಗಿಗಳ 130 ಸಂಘಟನೆಗಳ ಸಮಾವೇಶ ನಡೆಯಿತು. ಮುಷ್ಕರ ಸಮಿತಿ (ರೈಲ್ವೆ ಮೆನ್ಸ್ ಸ್ಟ್ರಗಲ್ ನ್ಯಾಷನಲ್ ಕೊ–ಆರ್ಡಿನೇಷನ್ ಕಮಿಟಿ–ಎನ್.ಸಿ.ಸಿ.ಆರ್.ಎಸ್) ಅನ್ನು ಸ್ಥಾಪಿಸಲಾಯಿತು. ಆ ನಂತರ ಕಾರ್ಮಿಕರ ಹಕ್ಕುಗಳಿಗಾಗಿ ಮೇ 8, 1974 ರಿಂದ ಮುಷ್ಕರ ಮಾಡಲು ನಿರ್ಧರಿಸಲಾಯಿತು. ಒಂದೆಡೆ, ಮುಷ್ಕರ ಸಮಿತಿಯೊಂದಿಗೆ ಎರಡನೇ ಹಂತದ ಮಾತುಕತೆ ನಡೆಯುದಿತ್ತು. ಏತನ್ಮಧ್ಯೆ, ಜಾರ್ಜ್ ಫರ್ನಾಂಡೀಸ್ ಸೇರಿದಂತೆ ಮುಷ್ಕರ ಸಮಿತಿಯ ನಾಯಕರನ್ನು, ಕಾರ್ಯಕರ್ತರನ್ನು, ಮುಷ್ಕರಕ್ಕೆ ಬೆಂಬಲ ನೀಡಿದವರನ್ನು ಇಂದಿರಾ ಗಾಂಧಿ ಸರ್ಕಾರ ಮೇ 2ರಂದು ಬೆಳಿಗ್ಗೆ ಆಂತರಿಕ ಭದ್ರತಾ ಕಾಯ್ದೆಯ ನಿರ್ವಹಣೆ (MISA) ಅಡಿಯಲ್ಲಿ ಬಂಧಿಸಲು ಪ್ರಾರಂಭಿಸಿತು. ಮುಷ್ಕರ ನಿರತರ ಮೇಲೆ ಮಾತ್ರವೇ ಅಲ್ಲ, ಅವರ ಕುಟುಂಬಗಳ ವಿರುದ್ಧ ಹಿಂಸೆ ನಡೆಯಿತು. ಈ ಹೋರಾಟದಲ್ಲಿ ದೇಶಾದ್ಯಂತ ಅನೇಕ ಜನರು ಹುತಾತ್ಮರಾದರು. ಮದುರೈ ಸಿಐಟಿಯು ಕಾರ್ಯಕರ್ತರೊಬ್ಬರು ರೈಲು ತಡೆಯುವ ಪ್ರಯತ್ನದಲ್ಲಿ ಸಾವನ್ನಪ್ಪಿದರು.

ಮುಷ್ಕರವನ್ನು ಬೆಂಬಲಿಸಿ ಎರ್ನಾಕುಲಂ ಜಂಕ್ಷನ್ ನಿಲ್ದಾಣದಲ್ಲಿ ಎ.ಕೆ. ಗೋಪಾಲನ್, ಸುಶಿಲಾ ಗೋಪಾಲನ್, ಎಂ.ಎಂ. ಲಾರೆನ್ಸ್ ಮತ್ತು ಕೆ.ಎನ್. ರವೀಂದ್ರನಾಥ್ ನೇತೃತ್ವದಲ್ಲಿ ಹೋರಾಟ ನಡೆಸಲಾಯಿತು. ನಾಯಕರ ವ್ಯಾಪಕ ಬಂಧನಗಳು ಮತ್ತು ಆರ್ಥಿಕ ತೊಂದರೆಗಳನ್ನು ಗಣನೆಗೆ ತೆಗೆದುಕೊಂಡು ಈ ಮುಷ್ಕರವನ್ನು ಮೇ 28 ರಂದು ನಿಲ್ಲಿಸಲು ನಿರ್ಧರಿಸಿದರು. ಮುಷ್ಕರದ ನಂತರ ಬಡ್ತಿ ಇಲ್ಲದೆ ನಿವೃತ್ತಿ ಹೊಂದಬೇಕಾದವರಿಗೂ (ಸ್ಟೇಷನ್ ಮಾಸ್ಟರ್ ಸೇರಿದಂತೆ) ಮೂರು ಬಡ್ತಿಗಳು ಲಭಿಸಿದವು. ಬೋನಸ್ ಲಭಿಸಿತು. ಕ್ಯಾಶುಯಲ್ ಉದ್ಯೋಗಿಗಳನ್ನು ಖಾಯಂಗೊಳಿಸಲಾಯಿತು. ವೇತನ ಪ್ರಕ್ರಿಯೆಯಲ್ಲಿ ಗಮನಾರ್ಹ ಬದಲಾವಣೆ ಬಂದಿತು. ಕುಟುಂಬ ಮತ್ತು ಅವಲಂಬಿತರ ಪಿಂಚಣಿ ಸೌಲಭ್ಯ ಲಭಿಸಿತು. ರೈಲ್ವೆ ಉದ್ಯೋಗಿಗಳಿಗೆ ಈಗಿರುವ ಅನೇಕ ದೊಡ್ಡ ಪ್ರಯೋಜನಗಳು 1974 ರ ಮುಷ್ಕರದ ನಂತರ ಜಾರಿಗೆ ಬಂದಿರುವವೇ ಆಗಿವೆ.

ಇಂದು, ನಾಲ್ಕೂವರೆ ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೆ, ಖಾಯಂ ಉದ್ಯೋಗಗಳನ್ನು ನೇಮಕ ಮಾಡಿಕೊಳ್ಳದೆ, ಅಪ್ರೆಂಟಿಸ್ ಮತ್ತು ಗುತ್ತಿಗೆ ನೇಮಕಾತಿಗಳನ್ನು ಮಾಡುತ್ತ, ದೇಶದ ಅತಿದೊಡ್ಡ ಸಾರ್ವಜನಿಕ ವಲಯವಾದ ರೈಲ್ವೆಯನ್ನು ಸರ್ವನಾಶ ಮಾಡುವ ದಿಕ್ಕಿನಲ್ಲಿ ಮೋದಿ ನಾಯಕತ್ವದ ಬಿಜೆಪಿ ಸರ್ಕಾರ ಹೆಜ್ಜೆ ಹಾಕುತ್ತಿದೆ. 1974 ರ ರೈಲ್ವೆ ಮುಷ್ಕರದ ಸ್ಫೂರ್ತಿಯೊಂದಿಗೆ ಅಂತಹ ನಡೆಗಳ ವಿರುದ್ಧದ ಹೋರಾಟವನ್ನು ಬಲಪಡಿಸಬೇಕು.

ಆರ್.ಜಿ. ಪಿಳ್ಳೈ (ದಕ್ಷಿಣ ರೈಲ್ವೆ ನೌಕರರ ಒಕ್ಕೂಟದ ನಾಯಕ)

ಕೃಪೆ:ಪ್ರಜಾಶಕ್ತಿ (ಮೇ 24, 2024)



ಬದುಕಿನ ಹೊಸ ಪಯಣ ಆರಂಭಿಸಿರುವ ಕಾಮ್ರೇಡ್ ನವೀನ್–ಕಾಮ್ರೇಡ್ ಮಧು ಅವರಿಗೆ ಅಭಿನಂದನೆ

ಅದೊಂದು ವಿಶೇಷ ಮದುವೆ. ಯಾವುದೇ ಸಂಪ್ರದಾಯಗಳಿಗೆ ಅವಕಾಶಗಳಿಲ್ಲದೆ, ಮುಹೂರ್ತ ನಿಗದಿ ಮಾಡದೆ, ಮಂತ್ರಗಳು ಮೊಳಗದೆ, ತಾಳಿ ಕಟ್ಟದೆ, ದುಂದು ವೆಚ್ಚಕ್ಕೆ ಅವಕಾಶವಿಲ್ಲದೆ, ಜನ ಚಳುವಳಿಯ ಒಡನಾಡಿಗಳು ಮತ್ತು ಆಪ್ತರ ಸಮ್ಮುಖದಲ್ಲಿ ಸರಳವಾಗಿ ನಡೆದ ಅಂತರ್ಜಾತಿ ಮದುವೆ ಇದಾಗಿತ್ತು. ಬುದ್ಧ, ಬಸವ, ಅಂಬೇಡ್ಕರ್, ಮಾರ್ಕ್ಸ್‌ರವರ ಚಿಂತನೆ ಮತ್ತು ಆದರ್ಶಗಳನ್ನು ಪಾಲಿಸುವ ಪ್ರತಿಜ್ಞೆಯೊಂದಿಗೆ 'ಬಾಳ ಸಂವಿಧಾನ'ದ ಪ್ರಮಾಣ ಸ್ವೀಕರಿಸುವ ಮೂಲಕ ಗಂಡು ಮತ್ತು ಹೆಣ್ಣು ಇಬ್ಬರೂ ಬದುಕಿನ ಹೊಸ ಪಯಣ ಆರಂಭಿಸಿದರು. ಕಾಮ್ರೇಡ್ ನವೀನ್–ಕಾಮ್ರೇಡ್ ಮಧು ಅವರ ಸರಳ ಮದುವೆಯು ಮೇ 12, 2024 ರಂದು, ಹಾಸನದ ಸಂಸ್ಕೃತ ಭವನದಲ್ಲಿ ಹೀಗೆ ಅರ್ಥಪೂರ್ಣವಾದ ರೀತಿಯಲ್ಲಿ ನಡೆದಿತ್ತು.

ಗಂಡು ಹೆಣ್ಣುಗಳಿಗೆ ಹಾರವನ್ನು ಕೊಟ್ಟವರು ಸಿಐಟಿಯ ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಎನ್. ವೆಂಕಟಾಚಲಯ್ಯ. ಬಾಳ ಸಂವಿಧಾನವನ್ನು ಬೋಧಿಸಿದವರು ಸಮುದಾಯ ಸಾಂಸ್ಕೃತಿಕ ಸಂಘಟನೆಯ ಸಂಗಾತಿಗಳಾದ ಕೆ.ಎಸ್.ವಿಮಲಾ ಮತ್ತು ಟಿ.ಸುರೇಂದ್ರ ರಾವ್. ಕಾರ್ಯಕ್ರಮ ನಿರ್ವಹಿಸಿದವರು ಸಿಪಿಐ(ಎಂ) ಹಾಸನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್, ವೇದಿಕೆಯಲ್ಲಿ ಹಿರಿಯ ಸಂಗಾತಿ ವಿ.ಸುಕುಮಾರ್ ಜೊತೆಗಿದ್ದರು.

ದಾಂಪತ್ಯ ಜೀವನಕ್ಕೆ ಕಾಲಿಟ್ಟ ಕಾಂ.ಎಚ್. ಆರ್.ನವೀನ್ ಕುಮಾರ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಹಣಕಾಸು ಕಾರ್ಯದರ್ಶಿ. ರೈತ ಚಳುವಳಿಯ ನಾಯಕರಾದ ನವೀನ್, ಉತ್ತಮ ಬರಹಗಾರರೂ, ಛಾಯಾಗ್ರಾಹಕರೂ ಆಗಿದ್ದಾರೆ. ಸಿ.ಐ.ಟಿ.ಯು. ಸಂಘಟನೆಯ ಕಾರ್ಯಕರ್ತೆಯಾದ ಬಿ.ಎಸ್. ಮಧು, ಅವರು ಅಂಗನವಾಡಿ ನೌಕರರಾಗಿದ್ದು, ಕರ್ನಾಟಕ ರಾಜ್ಯ ಅಂಗನಾಡಿ ನೌಕರರ ಸಂಘದ ಕಾರ್ಯಕರ್ತೆಯೂ ಆಗಿದ್ದಾರೆ.

ಈ ಹೊಸ ಜೋಡಿಯನ್ನು ಅಭಿನಂದಿಸುವ ಪುಟ್ಟ ಸಮಾರಂಭವು ಮೇ 28, 2024 ರಂದು ಬೆಂಗಳೂರಿನ ಇ.ಎಂ.ಎಸ್. ಭವನದಲ್ಲಿ ನಡೆಯಿತು. ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ವಿಜು ಕೃಷ್ಣನ್, ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಕಾರ್ಯದರ್ಶಿ ಟಿ.ಯಶವಂತ್ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮತ್ತು ವಿವಿಧ ಸಂಘಟನೆಗಳ ನಾಯಕರು, ಪ್ರತಿನಿಧಿಗಳು ಈ ಸಂದರ್ಭದಲ್ಲಿ ಹಾಜರಿದ್ದು ಶುಭ ಹಾರೈಸಿದರು.



ಲೋಕಸಭಾ ಚುನಾವಣೆ ಸಂವಿಧಾನವೇ ಪ್ರಚಾರದ ಪ್ರಮುಖ ಅಂಶ

ಪ್ರಕಾಶ್ ಕಾರತ್

ಕೊನೆಯ ಹಂತದ ಮತದಾನ ಪೂರ್ಣಗೊಳ್ಳಲಿರುವ ಸಮಯವಿದು. ಲೋಕಸಭೆ ಚುನಾವಣೆಯಲ್ಲಿ ಭಾರತದ ಸಂವಿಧಾನ ಮತ್ತು ಅದರ ಸಂರಕ್ಷಣೆ ಪ್ರಮುಖ ವಿಷಯವಾಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಮೊದಲಿನಿಂದಲೂ, ಇಂಡಿಯಾ ಬಣದ ಪಕ್ಷಗಳ ನಾಯಕರು ತಮ್ಮ ಚುನಾವಣಾ ವೇದಿಕೆಯಲ್ಲಿ ಸಂವಿಧಾನದ ರಕ್ಷಣೆಯನ್ನು ಕೇಂದ್ರ ವಿಷಯವಾಗಿ ಪ್ರತಿಪಾದಿಸಿದ್ದರು.

ಕಳೆದ ಒಂದು ದಶಕದಲ್ಲಿ ದೇಶದಲ್ಲಿ ಸರ್ವಾಧಿಕಾರಿ ಪ್ರವೃತ್ತಿ ಆಡಳಿತದ ವಿವಿಧ ಮುಖಗಳನ್ನು ಹೆಚ್ಚಿನ ಸಂಖ್ಯೆಯ ಜನರು ನೋಡಿ, ಅನುಭವಿಸಿದ್ದಾರೆ. "ಸಂವಿಧಾನ ಅಪಾಯದಲ್ಲಿದೆ" ಎಂಬ ವಿಷಯವು ಪ್ರತಿಪಕ್ಷಗಳಿಗೆ ಪ್ರಚಾರದ ಪ್ರಮುಖ ವಿಷಯವಾಗಿತ್ತು. ಬಿಜೆಪಿಯ 400 ಪ್ಲಸ್ ಸೀಟುಗಳ ಮೋದಿಯವರ ಕರೆಯಂತೆ, 400 ಪ್ಲಸ್ ಸ್ಥಾನಗಳು ಸಂವಿಧಾನವನ್ನು ಬದಲಾಯಿಸಲು ಅಗತ್ಯವಿದೆ ಎಂದು ಅವರ ವಿವಿಧ ನಾಯಕರು ಪ್ರಚಾರದ ಸಂದರ್ಭದಲ್ಲಿ ವಾದಿಸಿದ್ದರು. ಇದು ಸಂವಿಧಾನವನ್ನು ಬದಲಾಯಿಸುವ ಬೆದರಿಕೆಯನ್ನು ಬಲಪಡಿಸಿತು.

ಮಾರ್ಚ್ 9 ರಂದು, ಬಿಜೆಪಿ ಸಂಸದ ಅನಂತ್ ಕುಮಾರ್ ಹೆಗಡೆ ಅವರು ಲೋಕಸಭೆಯಲ್ಲಿ 400 ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸುವ ಗುರಿ ನಮ್ಮದು, ಏಕೆಂದರೆ, ಸಂವಿಧಾನವನ್ನು ಬದಲಾಯಿಸಲು ಸಂಸತ್ತಿನಲ್ಲಿ ನಮಗೆ ನಿರ್ದಿಷ್ಟ ವಾಗಿ ಮೂರನೇ ಎರಡರಷ್ಟು ಬಹುಮತದ ಅಗತ್ಯವಿದೆ ಎಂದು ಪ್ರಸ್ತಾಪಿಸಿದ್ದರು. ಇದೇ ರೀತಿಯ ಅಭಿಪ್ರಾಯಗಳನ್ನು ಫೈಜಾಬಾದ್ ಬಿಜೆಪಿ ಸಂಸದ ಲಲ್ಲು ಸಿಂಗ್, ನಾಗಪುರ ಬಿಜೆಪಿ ಅಭ್ಯರ್ಥಿ ಜ್ಯೋತಿ ಮಿರ್ಧಾ ಮತ್ತು ಮೀರತ್ನ ಬಿಜೆಪಿ ಅಭ್ಯರ್ಥಿ ಅರುಣ್ ಗೋವಿಲ್ ಇದನ್ನೆ ಪ್ರತಿಧ್ವನಿಸಿದ್ದಾರೆ. ಹಾಗಾಗಿಯೇ 400 ಪ್ಲಸ್ ಬಿಜೆಪಿಯ ಗುರಿಯಾಗಿದೆ.

ಸಂವಿಧಾನ ಸಂರಕ್ಷಣೆಯ ಚುನಾವಣೆ ಇದಾಗಿದೆ ಎಂಬ ಪ್ರತಿಪಕ್ಷಗಳು ನಡೆಸಿದ ಪ್ರಚಾರವು, ಬಿಜೆಪಿ ಅಭ್ಯರ್ಥಿಗಳ ಈ ಹೇಳಿಕೆಗಳಿಂದ ಮತ್ತಷ್ಟು ಕಾವು ಪಡೆದುಕೊಂಡಿತು.

ಈ ವಿಚಾರ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸಂವಿಧಾನ ಶಿಲ್ಪಿ ಎಂದು ಗೌರವಿಸುವ ದಲಿತ ವರ್ಗದವರಲ್ಲಿ ಆತಂಕ ಮೂಡಿಸಿತು. ಬಿಜೆಪಿ ಮತ್ತೆ ಅಧಿಕಾರದ ಗದ್ದುಗೆ ಏರಿದರೆ, ಸಂವಿಧಾನಕ್ಕೆ ಬೆದರಿಕೆ ಒದಗುತ್ತದೆ ಎಂಬ ಅಂಶವು ಎಸ್‌ಸಿ, ಎಸ್‌ಟಿ, ಸಮುದಾಯದ ನಡುವೆ ಬಲವಾದ ಅಭಿಪ್ರಾಯ ಮೂಡಿಸಿತು. ಈ ಅಂಶವನ್ನು ಮೋದಿ,ಶಾ ಈ ಇಬ್ಬರು ನಾಯಕರು ಗಮನಿಸಿದರು.

ಈ ಹಿನ್ನೆಲೆಯಲ್ಲಿ ಮೋದಿ ಪ್ರತಿಪಕ್ಷಗಳ ಆರೋಪವನ್ನು ಆಕ್ರಮಣಕಾರಿಯಾಗಿ ಎದುರಿಸಲು ಆರಂಭಿಸಿದರು. ಮೊದಲ ಹಂತದ ಮತದಾನಕ್ಕೂ ಮುನ್ನವೇ ಬಿಜೆಪಿ ಪಕ್ಷಕ್ಕೆ ಸಂವಿಧಾನವೇ ಪವಿತ್ರ ಗ್ರಂಥ, ಸಂವಿಧಾನವೇ ಸರಕಾರಕ್ಕೆ ಭಗವದ್ಗೀತೆ, ಸಂವಿಧಾನವೇ ರಾಮಾಯಣ, ಮಹಾಭಾರತ, ಸಂವಿಧಾನವೇ ಬೈಬಲ್, ಕುರಾನ್ ಎಂದು ಮೋದಿಯವರು, ಆಕ್ರಮಣಕಾರಿಯಾಗಿಯೇ, ಪ್ರಚಾರದಲ್ಲಿ ಅಬ್ಬರಿಸಿದರು. ನಮಗೆ ಮಾತ್ರವಲ್ಲ, ಸಂವಿಧಾನವನ್ನು ಬದಲಿಸಲು "ಬಾಬಾ ಸಾಹೇಬ್ ಅಂಬೇಡ್ಕರ್ ಮರು ಹುಟ್ಟಿ ಬಂದರು ಅವರಿಂದಲೂ ಸಂವಿಧಾನ ಬದಲಿಸಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಎಸ್‌ಸಿ, ಎಸ್‌ಟಿ ಸಮುದಾಯದ ವಿಶ್ವಾಸ ಗಳಿಸಲು ಪ್ರಯತ್ನಿಸಿದರು.

ಸಂವಿಧಾನವನ್ನು ಬದಲಾಯಿಸುವ ಗುರಿ ಹೊಂದಿರುವವರು, ಕಾಂಗ್ರೆಸ್ ಮತ್ತು ಇಂಡಿಯಾ ಬಣದವರು, ಎಂದು ಕಟುವಾದ ಧ್ವನಿಯಲ್ಲಿ ಪ್ರತಿದಾಳಿಯನ್ನು ಮೋದಿ ನಡೆಸಿದರು. ಇಂಡಿಯಾ ಬಣದ ಆರೋಪವು ಮನೆಯನ್ನು ಹೊಡೆಯುತ್ತದೆ. ಅವರದ್ದು, ತಪ್ಪು ಪ್ರತಿಕ್ರಿಯೆ ಎಂದು ಮೋದಿ ತಮ್ಮ ಪ್ರಚಾರದ ವೈಖರಿಯನ್ನು ಬದಲಿಸಿದರು.

ಹಾಗೆಯೇ, ಸಂವಿಧಾನದ ಬದಲಾವಣೆಯಿಂದ SC, ST ಮತ್ತು OBC ಗಳಿಗೆ ಮೀಸಲಾತಿಯನ್ನು ರದ್ದುಗೊಳಿಸಲು ಕಾರಣವಾಗುತ್ತದೆ ಎಂಬ ಇಂಡಿಯಾದ ಆರೋಪವು ಮೋದಿಯನ್ನು ಅಸಮಾಧಾನಗೊಳಿಸಿತ್ತು. ಕೆಲವು ಮತದಾರರ ವರ್ಗಪಟಲದ ಭಯವನ್ನು ಕೆಲವು ಮಾಧ್ಯಮದೊಂದಿಗೆ ಮಾತನಾಡುವಾಗ ಮೋದಿಗೆ ತಿಳಿಯಿತು. ಇದನ್ನು ಮನಗಂಡ ಅವರು, ಸಂವಿಧಾನ ಬದಲಾವಣೆ ಎಂಬ ಪ್ರತಿಪಕ್ಷದವರ ಆರೋಪಗಳನ್ನು ಬುಡಮೇಲು ಗೊಳಿಸಲು ಕೋಮು ತಿರುವು ನೀಡಲು ಪ್ರಯತ್ನಿಸಿದರು. ಆ ಮೂಲಕ ಮೋದಿ ಪ್ರತಿದಾಳಿ ನಡೆಸಲು ಯತ್ನಿಸಿದರು. ಇಂಡಿಯಾ ಬಣವು ಸಂವಿಧಾನವನ್ನು ಬದಲಾಯಿಸಲು ಬಯಸುತ್ತದೆಯೇ ಹೊರೆತು ಬಿಜೆಪಿಯಲ್ಲ. SC, ST ಮತ್ತು OBC ಗಳ ಮೀಸಲಾತಿಯನ್ನು ಕಿತ್ತು, ಧರ್ಮದ ಆಧಾರದ ಮೇಲೆ ಮುಸ್ಲಿಮರಿಗೆ ಇಂಡಿಯಾ ಬಣವು ಮೀಸಲಾತಿಯನ್ನು ವರ್ಗಾವಣೆ ಮಾಡಬಹುದು ಎಂದು ಮೋದಿ ಪ್ರಸ್ತಾಪಿಸಿದರು.

ಮೋದಿ ಮತ್ತು ಅಮಿತ್ ಶಾ ಇಬ್ಬರೂ ಕರ್ನಾಟಕ ಮತ್ತು ತೆಲಂಗಾಣದಲ್ಲಿ ಒಬಿಸಿ ವರ್ಗದ ಅಡಿಯಲ್ಲಿ ಮುಸ್ಲಿಮರಿಗೆ ನೀಡಲಾದ 4 ಪ್ರತಿಶತ ಮೀಸಲಾತಿಯನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ. ಕಾಂಗ್ರೆಸ್ ಮತ್ತು ಇಂಡಿಯಾ ಬಣವು ಮೀಸಲಾತಿಯನ್ನು ಮಾತ್ರವಲ್ಲದೆ ಹಿಂದೂಗಳ ಆಸ್ತಿಯನ್ನು ಕಸಿದುಕೊಂಡು, ಮುಸ್ಲಿಮರಿಗೆ ಹಸ್ತಾಂತರಿಸಬಹುದು ಎಂಬ ವಿಷಯವು ನಿರಂತರವಾಗಿ ಮೋದಿಯವರ ಪ್ರಚಾರದ ಅಂಶವಾಗಿತ್ತು.

ಹಿಂದುಳಿದವರು ಎಂದು ಘೋಷಿಸಲ್ಪಟ್ಟಿರುವ ಒಬಿಸಿ ಸ್ಥಾನಮಾನವನ್ನು ಧರ್ಮದ ಆಧಾರದ ಮೇಲೆ ಮುಸ್ಲಿಂರಿಗೆ ನೀಡಲಾದ ಮೀಸಲಾತಿಯನ್ನು ಬಣ್ಣಿಸುವ ಪ್ರಯತ್ನವು ಹುಸಿಯಾದುದ್ದು, ಔಚಿಅಗಳ ವಿಷಯದಲ್ಲಿ, ಸಂವಿಧಾನದ 15 (4) ಮತ್ತು 16 (4) ವಿಧಿಗಳು ಧರ್ಮವನ್ನು ಲೆಕ್ಕಿಸದೆ ಹಿಂದುಳಿದಿರುವಿಕೆಗೆ ಮಾನದಂಡಗಳನ್ನು ನಿಗದಿಪಡಿಸುತ್ತವೆ. ಹಿಂದುಳಿದ ವರ್ಗಗಳ ರಾಜ್ಯ ಆಯೋಗವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಎಂದು ಗುರುತಿಸಲ್ಪಟ್ಟ ಮುಸ್ಲಿಂ ಗುಂಪುಗಳನ್ನು ವೈಜ್ಞಾನಿಕ ಸಮೀಕ್ಷೆಯ ನಂತರ ಅನೇಕ ರಾಜ್ಯಗಳಲ್ಲಿ ಒಬಿಸಿ ವರ್ಗಕ್ಕೆ ಸೇರಿಸಲಾಯಿತು. ವಾಸ್ತವವಾಗಿ, ಎರಡು ವರ್ಷಗಳ ಹಿಂದೆ ಗುಜರಾತ್ ನಲ್ಲಿ 70 ಮುಸ್ಲಿಂ ಗುಂಪುಗಳಿಗೆ ಒಬಿಸಿ ಸ್ಥಾನಮಾನವನ್ನು ನೀಡಲಾಗಿದೆ ಎಂದು ಮೋದಿ ಅವರೇ ಎಎನ್ಐ ಸಂದರ್ಶನದಲ್ಲಿ ಹೇಳಿಕೊಂಡಿದ್ದರು.

ವಾಸ್ತವ ಏನೆಂದರೆ, ಮೋದಿ ಸರ್ಕಾರವು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಬೆದರಿಕೆಯನ್ನು ಒಡ್ಡುತ್ತದೆ ಎಂಬ ಆತಂಕದ ಕಾರಣದಿಂದ ಗಣನೀಯ ವರ್ಗದ ಜನರು ಬಿಜೆಪಿಯ ವಿರುದ್ಧ ಮತ ಚಲಾಯಿಸಲು ನಿರ್ಧರಿಸಿದ್ದಾರೆ. ಹಾಗಾಗಿಯೇ ಈ ಬಾರಿಯ ಚುನಾವಣೆಯ ಫಲಿತಾಂಶ ಮತ್ತು ನಂತರ ಏನಾಗಬಹುದು ಎಂಬ ಆತಂಕದ ಭಾವನೆ ಮೋದಿಯವರಲ್ಲಿಯೂ ಮೂಡಿದೆ.

ಹತ್ತು ವರ್ಷಗಳ ಮೋದಿ ಆಡಳಿತವು ರಾಜ್ಯದ ಎಲ್ಲಾ ಸಾಂವಿಧಾನಿಕ ಸಂಸ್ಥೆಗಳನ್ನು ನಾಶಪಡಿಸಿದೆ. ಚುನಾವಣೆಯ ಸಂದರ್ಭದಲ್ಲಿ ಚುನಾವಣಾ ಆಯೋಗವು ನಡೆದುಕೊಂಡ ರೀತಿಯು ನ್ಯಾಯಯುತ ನಿರ್ವಹಣೆ ಎಂದು ಖಚಿತಪಡಿಸಿಕೊಳ್ಳಲು ಅಸಾಧ್ಯ. ಮುಕ್ತ ಮತ್ತು ನ್ಯಾಯಸಮ್ಮತವಾದ ಮತದಾನವನ್ನು ಮೇಲ್ವಿಚಾರಣೆ ಮಾಡಲು ಚುನಾವಣಾ ಆಯೋಗಕ್ಕೆ ಸಾಧ್ಯವೇ ಎಂಬ ಆತಂಕವನ್ನು ಹುಟ್ಟುಹಾಕಿದೆ. ಪ್ರಧಾನ ಮಂತ್ರಿಯ ಪ್ರಚೋದಕ ಕೋಮುವಾದಿ ಚುನಾವಣಾ ಪ್ರಚಾರವನ್ನು ನಿಗ್ರಹಿಸಲು ಆಯೋಗ ವಿಫಲವಾಗಿದೆ. ಸಮಗ್ರ ಮತದಾನದ ಅಂಕಿಅಂಶಗಳನ್ನು ಒದಗಿಸುವಲ್ಲಿ ತೋರಿದ ಹಿಂಜರಿಕೆ ಮತ್ತು ವಿಷಯವು ಸುಪ್ರೀಂ ಕೋರ್ಟ್‌ಗೆ ಹೋದ ನಂತರ ಮಾತ್ರ, ಅಂಕಿಅಂಶಗಳ ಮಾಹಿತಿ ನೀಡುತ್ತಿರುವುದು ಮತ್ತು ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸುವಲ್ಲಿ ತೋರಿದ ಸಾಮಾನ್ಯ ವೈಫಲ್ಯಗಳು, ಫಲಿತಾಂಶಗಳ ಮೇಲೆ ಬೀಳಬಹುದಾದ ಆತಂಕಗಳಿಗೆ ಆಧಾರಗಳನ್ನು ಒದಗಿಸಿಕೊಟ್ಟಿದೆ.

ಅಂತಿಮ ಹಂತದ ಮತದಾನಕ್ಕೆ ಕೆಲವೇ ದಿನಗಳ ಮೊದಲು ಮೇ 31 ರಂದು ನಿವೃತ್ತರಾಗಲಿರುವ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರಿಗೆ ಒಂದು ತಿಂಗಳ ವಿಸ್ತರಣೆಯನ್ನು ಕೇಂದ್ರದ ಮೋದಿ ಸರ್ಕಾರ ನೀಡಿದೆ. ಯಾವುದೇ ಸೇನಾ ಮುಖ್ಯಸ್ಥರಿಗೆ (1975 ರಲ್ಲಿ ಒಮ್ಮೆ ಹೊರತುಪಡಿಸಿ) ವಿಸ್ತರಣೆಯನ್ನು ನೀಡಲಾಗಿಲ್ಲ. ನಿವೃತ್ತಿಯ ಮೊದಲು ಸೇನಾ ಸಿಬ್ಬಂದಿಯ ಹೊಸ ಮುಖ್ಯಸ್ಥರ ನೇಮಕಾತಿಯನ್ನು ಘೋಷಿಸದಿದ್ದರೆ, ಅಲ್ಲಿಯವರೆಗೆ ಹಂಗಾಮಿ ಮುಖ್ಯಸ್ಥರನ್ನು ನೇಮಿಸಲಾಗುತ್ತದೆ. ಈ ಸಂದರ್ಭದಲ್ಲಿ, ಹೊಸ ಮುಖ್ಯ ಸಿಬ್ಬಂದಿಯನ್ನು ಹೊಸ ಸರ್ಕಾರ ನೇಮಿಸುತ್ತದೆ. ಇದನ್ನು ಏಕೆ ಮಾಡಲಾಗಿದೆ ಎಂಬುದಕ್ಕೆ ಯಾವುದೇ ವಿವರಣೆ ನೀಡಿಲ್ಲ ಅಥವಾ ಚುನಾವಣಾ ಆಯೋಗವು ಈ ವಿಸ್ತರಣೆಗೆ ಅನುಮತಿ ನೀಡಿದೆಯೇ ಎಂಬುದು ಸ್ಪಷ್ಟವಾಗಿಲ್ಲ. ಇದು ಚುನಾವಣೆಯ ನಂತರದ ಸನ್ನಿವೇಶದ ಬಗ್ಗೆ ಎಲ್ಲಾ ರೀತಿಯ ಊಹಾಪೋಹಗಳಿಗೆ ಕಾರಣವಾಗಿದೆ.

ಕೊನೆಯದಾಗಿ, ನರೇಂದ್ರ ಮೋದಿ ಅವರೇ ಸಂವಿಧಾನದ ಘನತೆಯನ್ನು ತಾವೇ ಸ್ವತಃ ಪ್ರಶ್ನಿಸಿದ್ದಾರೆ. ಅದು ಹೇಗೆಂದರೆ, ಈ ದೇಶ ಮತ್ತು ಜನರ ಸೇವೆಗಾಗಿ, ನನ್ನನ್ನು ಈ ಭೂಮಿಗೆ ಕಳುಹಿಸಿದ್ದು ಪರಮಾತ್ಮ ಎಂದು ನನಗೆ ಮನವರಿಕೆಯಾಗಿದೆ. ಇದರ ಅರ್ಥ ಮೋದಿಯವರಿಗೆ, ಸಂವಿಧಾನದ ಬಗ್ಗೆ ಘನತೆ ಎಷ್ಟಿದೆ? ಎಂಬುದು ಇಲ್ಲಿ ತಿಳಿಯುತ್ತದೆ. ಭಗವಂತನೇ ನನ್ನನ್ನು ಕಳುಹಿಸಿರುವುದು. 2047 ರ ವರೆಗೂ ಆಡಳಿತ ನಡೆಸಲು ಪರಮಾತ್ಮ ಅನುಗ್ರಹ ಕರುಣಿಸಿದ್ದಾನೆ ಎಂದು ಮೋದಿ ವಿಚಿತ್ರವಾದ ಹೇಳಿಕೆಯನ್ನು ನೀಡಿದ್ದಾರೆ. ತಾನು ಯಾರಿಗೂ ಉತ್ತರ ಕೊಡುವವನಲ್ಲ, ದೇವರಿಗೆ ಮಾತ್ರ ಉತ್ತರ ಕೊಡುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ. ಇದೀಗ ಕೊನೆಯ ಹಂತದ ಮತದಾನದ ವೇಳೆ ಕನ್ಯಾಕುಮಾರಿಯ ವಿವೇಕಾನಂದ ಬಂಡೆಯಲ್ಲಿ 48 ಗಂಟೆಗಳ ಕಾಲ ಧ್ಯಾನದಲ್ಲಿ ಕಳೆಯಲು ನಿರ್ಧರಿಸಿರುವ ಅವರ ಮುಂದಿನ ಕಾರ್ಯಗಳು ಸಾಂವಿಧಾನಿಕವಾಗಿಯೇ ಅಥವಾ ದೈವಾಜ್ಞೆಯಾಗಲಿವೆಯೇ ಎಂಬುದನ್ನು ಕಾದು ನೋಡಬೇಕಿದೆ.

ಅನು: ನಾಗರಾಜ ನಂಜುಂಡಯ್ಯ





ಮೇ–30–'ಹೋರಾಟದ ನಡಿಗೆ ಹಾಸನದ ಕಡೆಗೆ'–ಅಭೂತಪೂರ್ವ ಯಶಸ್ಸು

'ನೊಂದ ಮಹಿಳೆಯರೇ ನಿರ್ಭಯವಾಗಿ ದೂರು ಕೊಡಿ' ಆಸರೆ ಘೋಷಿಸಿದ ಚಳುವಳಿ

ಲೈಂಗಿಕ ದೌರ್ಜನ್ಯದ ಎಲ್ಲ ಆರೋಪಿಗಳನ್ನು ಬಂಧಿಸಲು ಆಗ್ರಹ



ಮೇ 30, 2024 ಹಾಸನ ಜಿಲ್ಲಾ ಕೇಂದ್ರದಲ್ಲಿ ಎಲ್ಲೆಲ್ಲೂ ಚಳುವಳಿಗಾರರದ್ದೇ ಸದ್ದು. ಜಿಲ್ಲೆಯ ನಾನಾ ತಾಲೂಕುಗಳಿಂದ ಹಾಗೂ ರಾಜ್ಯದ ನಾನಾ ಜಿಲ್ಲೆಗಳಿಂದ ಬಂದ ಸಾವಿರಾರು ಪ್ರತಿಭಟನಾಕಾರರು, ಮಹಿಳೆಯರು, ಪುರುಷರು, ದೊಡ್ಡವರ ಜೊತೆ ಬಂದ ಮಕ್ಕಳು, ಲೈಂಗಿಕ ಅಲ್ಪ ಸಂಖ್ಯಾತರು ಅಲ್ಲಿ ಮಹಾರಾಜ ಪಾರ್ಕಿನ ಬಳಿ ನೆರೆದರು. 'ವಿಕೃತ ಕಾಮಿ ಪ್ರಜ್ವಲ್ ರೇವಣ್ಣನನ್ನು ಬಂಧಿಸಿ', 'ಮಹಿಳೆಯರ ಘನತೆ ಕಾಪಾಡಿ', 'ಘನತೆಯ ಬದುಕು–ಮಹಿಳೆಯ ಹಕ್ಕು', 'ಅಪರಾಧಿಗಳಿಗೆ ಸನ್ಮಾನ–ಸಂತ್ರಸ್ತರಿಗೆ ಅಪಮಾನ–ಒಪ್ಪುವುದಿಲ್ಲ ಸಂವಿಧಾನ', 'ಬೇಟಿ ಬಚಾವ್, ಬೇಟಿ ಪಡಾವ್, ನಾಲಿಗೆ ತುದಿಯ ಮಾತುಗಳಷ್ಟೆ', 'ಮುಖ್ಯಮಂತ್ರಿಗಳೇ ಎಲ್ಲಿದ್ದೀರಿ?, ಗೃಹಮಂತ್ರಿಗಳೇ ಎಲ್ಲಿದ್ದೀರಿ?' ಮುಂತಾದ ಘೋಷಣೆಗಳು ದಾರಿಯುದ್ದಕ್ಕೂ ಮೊಳಗಿದವು. ನಗರದ ಪ್ರಮುಖ ರಸ್ತೆಗಳಲ್ಲಿ ಬೃಹತ್ ಜನಪ್ರವಾಹದಂತೆ ಹರಿದರು. ಮೆರವಣಿಗೆಯ ಕೊನೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಮೀಪದಲ್ಲಿ ಸಮಾವೇಶಗೊಂಡರು.



ನಾವಿದ್ದೇವೆ, ದೂರು ಕೊಡಿ..

ವೇದಿಕೆಯಲ್ಲಿ ಮೊತ್ತ ಮೊದಲಿಗೆ ಅನಾವಣಗೊಂಡದ್ದು, 'ಕಾಮುಕನಿಂದ ನೊಂದ ಸಹೋದರಿಯರೇ ನಿರ್ಭಯವಾಗಿ ಎಸ್.ಐ.ಟಿ.ಗೆ ದೂರು ಕೊಡಿ'–ನಿಮಗೆ ಅಸರೆಯಾಗಿ–ಬೆಂಬಲವಾಗಿ ನಾವಿದ್ದೇವೆ ಎಂದು ಸಾರುವ ದೊಡ್ಡ ಬ್ಯಾನರ್. 'ಪೆನ್ ಡ್ರೈವ್' ಪ್ರಕರಣ ಎಂದೇ ಕರೆಯಲಾಗುತ್ತಿರುವ ಈ ಹೀನಾಯ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಚಳುವಳಿಯ ಪ್ರಧಾನ ಮತ್ತು ಮೊದಲ ಅದ್ಯತೆ ಏನು ಎಂಬುದನ್ನು ಇದು ಸೂಚಿಸಿತು.

ಲೈಂಗಿಕ ದೌರ್ಜನ್ಯಕೋರರ ಪರವಾಗಿರುವ ಶಕ್ತಿಗಳು ಈ ಬೃಹತ್ ಚಳುವಳಿಯ ವಿರುದ್ಧ ಇದೊಂದು ಸರಕಾರಿ ಪ್ರಾಯೋಜಿತ ಚಳುವಳಿ, ರಾಜಕೀಯ ಪ್ರಾಯೋಜಿತ ಹೋರಾಟ, ಎಂದೆಲ್ಲಾ ಸುದ್ದಿ ಹರಡಿದ್ದಾರೆ. ಪ್ರತಿಭಟನೆಯನ್ನು ತಡೆಯುವ ಪ್ರಯತ್ನಗಳನ್ನೂ ಮಾಡಿದ್ದಾರೆ. ಹಲವರಿಗೆ ಬೆದರಿಕೆಗಳನ್ನೂ ಹಾಕಿದ್ದಾರೆ. ಹಳ್ಳಿಗಳಿಂದ ಪ್ರತಿಭಟನೆಗೆ ಜನರು ಹೋಗದಂತೆ ತಡೆಯುವ ಪ್ರಯತ್ನವನ್ನು ಮಾಡಲಾಗಿದೆ. ಆ ನಂತರ ಪ್ರತಿಭಟನೆಯಲ್ಲಿ ಜೆಡಿ(ಎಸ್) ಪಕ್ಷದ ಹಿರಿಯ ನಾಯಕರಾದ ಎಚ್.ಡಿ.ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ, ಎಚ್.ಡಿ.ರೇವಣ್ಣ ಮುಂತಾದವರ ಹೆಸರು ಹೇಳಬಾರದು ಎಂಬ ನಿರ್ಬಂಧಗಳನ್ನು ಹಾಕಲು ಪ್ರಯತ್ನ ಪಟ್ಟಿದ್ದಾರೆ. ಈ ಚಳುವಳಿ ಸರಕಾರಿ ಪ್ರಾಯೋಜಿತ ಅಥವಾ ರಾಜಕೀಯ ಪ್ರಾಯೋಜಿತ ಆಗಿದ್ದಿದ್ದರೆ ಬಹುಶಃ ಚಳುವಳಿಯನ್ನು ಅಸ್ತವ್ಯಸ್ತ ಮಾಡಲು ಸಾಧ್ಯವಾಗುತ್ತಿತ್ತೇನೋ ಆದರೆ ಅದು ವಿಕೃತ ಲೈಂಗಿಕ ದೌರ್ಜನ್ಯದ ವಿರುದ್ಧ ಜನರ ಮನದಾಳದಿಂದ ಹೊರ ಹೊಮ್ಮಿಬಂದ ಪ್ರಾಮಾಣಿಕ ಸಾತ್ವಿಕ ಆಕ್ರೋಶ. ಹಾಗಾಗಿ ಅದನ್ನು ಯಾರೂ ತಡೆಯಲು ಆಗಲಿಲ್ಲ. ಹಾಸನದ ಹಳ್ಳಿ ಹಳ್ಳಿಗಳು, ಪಟ್ಟಣ, ನಗರಗಳಿಂದಲೂ ಸಾವಿರಾರು ಜನರು ಈ ಐತಿಹಾಸಿಕ ಚಳುವಳಿಗೆ ಬಂದಿದ್ದಾರೆ. ಚಳುವಳಿಯ ಖರ್ಚು ವೆಚ್ಚಗಳಿಗೆ ಹಣಕಾಸು ನೆರವು ನೀಡಿದ್ದಾರೆ.



ಕರ್ನಾಟಕ ರಾಜ್ಯ ಜನಚಳುವಳಿಗಳ ಒಕ್ಕೂಟದ ನೇತೃತ್ವದಲ್ಲಿ ನಡೆದ ಈ ಚಳುವಳಿಯ ಸಮನ್ವಯ ಸಮಿತಿ ಪ್ರಮುಖರಾದ ಧರ್ಮೇಶ್ ಅವರು ಮೊದಲಿಗೆ ಈ ಕುರಿತು ಕೆಲವು ಮಾತುಗಳನ್ನು ಆಡಿ ಸ್ಪಷ್ಟನೆ ನೀಡಿದರು. ಸುಮಾರು ನೂರೈವತ್ತಕ್ಕೂ ಹೆಚ್ಚು ಸಂಘಟನೆಗಳು ಸೇರಿ ನಡೆಸುತ್ತಿರುವ ಹೋರಾಟ ಇದು. ಕೇವಲ 12 ದಿನಗಳ ತಯಾರಿಯಲ್ಲಿ ಸಾವಿರಾರು ಜನರು ಸ್ವಯಂ ಪ್ರೇರಣೆಯಿಂದ ಬಂದು ಈ ಹೋರಾಟ ನಡೆಯುತ್ತಿದೆ. ಮಹಿಳೆಯರ ಘನತೆಯನ್ನು ಎತ್ತಿ ಹಿಡಿಯಲು ಇಡೀ ರಾಜ್ಯದ ಜನರು ಎದ್ದು ನಿಂತಿದ್ದಾರೆ ಎಂದ ಧರ್ಮೇಶ್ ಮುಖ್ಯಮಂತ್ರಿಗಳು ಹಾಸನಕ್ಕೆ ಬರಬೇಕು, ಚಳುವಳಿಕಾರರ ಮಾತನ್ನು ಆಲಿಸಬೇಕು. ಇಲ್ಲಿನ ಮಹಿಳೆಯರಿಗೆ ಸಾಂತ್ವನ ಹೇಳಿ, ರಕ್ಷಣೆಯ ಭರವಸೆ ನೀಡಬೇಕು ಎಂದು ಒತ್ತಾಯಿಸಿದರು. ಇದು ನಿಲ್ಲುವ ಹೋರಾಟವಲ್ಲ, ನಿರಂತರವಾಗಿ ನಡೆಯುವ ಹೋರಾಟ ಎಂದೂ ಅವರು ಘೋಷಿಸಿದರು.

'ಹಮ್ ಲಡೇಂಗೆ, ಹಮ್ ಜೀತೇಂಗೆ'
–ಸುಭಾಷಿಣಿ ಆಲಿ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಮಾಜಿ ಅಧ್ಯಕ್ಷರು, ಮಾಜಿ ಸಂಸದರೂ, ಹೋರಾಟಗಾರ್ತಿಯೂ ಆದ ಸುಭಾಷಿಣಿ ಆಲಿಯವರು ಮೊತ್ತ ಮೊದಲಿಗೆ ಮಾತನಾಡಿ ಈ ಚಳುವಳಿ ಹೊಸದೊಂದು ಇತಿಹಾಸ ಬರೆದಿದೆ. ಅಧಿಕಾರ ಬಲದಿಂದ ಇಲ್ಲಿ ಮಹಿಳೆಯರ ಮೇಲೆ ಕ್ರೂರ ಲೈಂಗಿಕ ದೌಜನ್ಯಗಳು ನಡೆದಿವೆ. ಇಡೀ ದೇಶಾದ್ಯಂತ ಆಕ್ರೋಶ ಭುಗಿಲೆದ್ದಿದೆ. ಈ ಚಳುವಳಿಯ ಬಹುದೊಡ್ಡ ಆಗ್ರಹವೇನೆಂದರೆ ಆರೋಪಿ ಪ್ರಜ್ವಲ್ ರೇವಣ್ಣ, ಎಚ್.ಡಿ. ರೇವಣ್ಣ ಮತ್ತು ಕುಟುಂಬ ಸದಸ್ಯರು ಸೇರಿದಂತೆ ಎಲ್ಲ ಆರೋಪಿಗಳನ್ನು ಕೂಡಲೇ ಬಂಧಿಸಬೇಕು. 'ನೋ ಬೇಲ್, ಓನ್ಲೀ ಜೈಲ್', ಅವರಿಗೆ ಯಾವ ಕಾರಣಕ್ಕೂ ಜಾಮೀನು ನೀಡಬಾರದು. ಅವರು ತಮ್ಮ ಪ್ರಭಾವ ಬಳಸಬಹುದು, ಅದಕ್ಕೆ ಮಣಿಯಬಾರದು, ಅಪರಾಧ ಮಾಡಿದವರಿಗೆ ತಕ್ಕ ಶಿಕ್ಷೆ ನೀಡಲೇಬೇಕು ಕರ್ನಾಟಕ ಸರ್ಕಾರಕ್ಕೆ ಎಚ್ಚರಿಕೆ ನೀಡುತ್ತಿದ್ದೇವೆ ಎಂದರು.

ಸಂತ್ರಸ್ತ ಮಹಿಳೆಯರು ಯಾವ ಕಾರಣಕ್ಕೂ ಅಂಜಬೇಕಿಲ್ಲ, ತಪ್ಪಿತಸ್ಥ ಭಾವದಲ್ಲಿ ನರಳಬೇಕಿಲ್ಲ ಎಂದ ಸುಭಾಷಿಣಿ ಆಲಿಯವರು ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ದೇಶದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಮುಂದುವರಿಯುತ್ತಿರುವುದಕ್ಕೆ ಪುರುಷ ಪ್ರಧಾನ ಮೌಲ್ಯಗಳು, ಪಾಳೇಗಾರಿ, ಬಂಡವಾಳಶಾಹಿ ವ್ಯವಸ್ಥೆಯೇ ಕಾರಣ ಎಂದು ಹೇಳಿದರು.

ಕೇಂದ್ರ ಸರಕಾರ ಬಲಾತ್ಕಾರಿಗಳಿಗೆ ಬೆಂಬಲ ಕೊಡುವ ಸರಕಾರ. ಬಿಲ್ಕಿಸ್ ಬಾನು, ಬ್ರಿಜ್ ಭೂಷಣ್ ಸಿಂಗ್, ಈಗ ಪ್ರಜ್ವಲ್ ರೇವಣ್ಣ ಪ್ರಕರಣ. ನರೇಂದ್ರ ಮೋದಿಯವರು ಈಗ ಜನತೆ ನೋಡಿರುವುದು ಕೇವಲ 'ಟ್ರೇಲರ್', ಮುಂದೆ ಸಿನಿಮಾ ಬರಲಿದೆ ಎನ್ನುತ್ತಾರೆ. ಈ ದೌರ್ಜನ್ಯ ಮುಂದೆ ನಡೆಯುವುದಿಲ್ಲ. ಜೂನ್ 4 ರ ನಂತರ ಜನತೆ ಈ ಸಿನಿಮಾವನ್ನು ಬಂದ್ ಮಾಡುತ್ತಾರೆ. 'ಹಮ್ ಲಡೇಂಗೆ, ಹಮ್ ಜೀತೇಂಗೆ...' ಎಂದು ಬಿಲ್ಕಿಸ್ ಬಾನು ಪ್ರಕರಣದಲ್ಲಿ ಅಪರಾಧಿಗಳನ್ನು ಬಿಡುಗಡೆ ಮಾಡಿದ ಗುಜರಾತ್ ಸರಕಾರ ಕ್ರಮದ ವಿರುದ್ಧ ಯಶಸ್ವಿ ಕಾನೂನು ಹೋರಾಟದ ಮುಂಚೂಣಿಯಲ್ಲಿದ್ದ ಸುಭಾಷಿಣಿ ಆಲಿಯವರು ಹೇಳಿದರು.

ಹಾಸನದ ಪಾಳೆಗಾರಿಕೆ ಅಂತ್ಯ ಮಾಡಲು ಹೋರಾಡೋಣ
–ಎಸ್.ಆರ್. ಹಿರೇಮಠ್



ಹಾಸನದಲ್ಲಿ ಸುದೀರ್ಘಕಾಲ ನಡೆದು ಬಂದಿರುವ ಪಾಳೆಗಾರಿಕೆ ದರ್ಪದಿಂದ ನಡೆದಿರುವ ದೌರ್ಜನ್ಯಕ್ಕೆ ಕೊನೆ ಹಾಡೋಣ. ಹೋರಾಡೋಣ. ನ್ಯಾಯಾಂಗ ಹೋರಾಟದಿಂದ ಬಳ್ಳಾರಿಯ ಗಣಿ ಧಣಿಗಳ ಪಾಳೆಗಾರಿಕೆಯನ್ನು ಅಂತ್ಯ ಕಾಣಿಸಿದಂತೆ, ಹಾಸನದ ಪಾಳೆಗಾರಿಕೆಯನ್ನು ಅಂತ್ಯ ಮಾಡಲು ನ್ಯಾಯಾಂಗ ಹೋರಾಟವನ್ನು ಯಶಸ್ವಿಯಾಗಿ ನಡೆಸಲು ನನ್ನ ಕೊನೆ ಉಸಿರು ಇರುವವರೆಗೂ ಸಹಕಾರ ನೀಡುತ್ತೇನೆ ಎಂದು ಖ್ಯಾತ ಹೋರಾಟಗಾರ, ಜನ ಸಂಗ್ರಾಮ ಪರಿಷತ್‌ನ ಎಸ್.ಆರ್. ಹಿರೇಮಠ್ ಅವರು ಹೇಳಿದರು.

ಶಿಕ್ಷೆ ಎಚ್ಚರಿಕೆಯ ಗಂಟೆ ಆಗಬೇಕು
–ಎಸ್.ವರಲಕ್ಷ್ಮಿ ಪ್ರಶ್ನೆ

ಮಹಿಳೆಯರು ಇರುವುದೇ ನಮ್ಮ ಅನುಭೋಗಕ್ಕೆ ಎಂಬ ಮನಸ್ಥಿತಿಯಲ್ಲಿ ಮಹಿಳೆಯರನ್ನು ವಸ್ತುವಿನಂತೆ ಬಳಸಿಕೊಳ್ಳುವ

ಪ್ರಜ್ವಲ್ ರೇವಣ್ಣನಂತವರಿಗೆ ಕಠಿಣ ಶಿಕ್ಷೆ ಆಗಬೇಕು. ಶಿಕ್ಷೆಯು ಇಂತಹ ಕೆಲಸ ಮಾಡುವ ಯಾರಿಗೇ ಆದರೂ ಎಚ್ಚರಿಕೆಯ ಗಂಟೆ ಆಗಬೇಕು. ಚುನಾವಣಾ ಲಾಭದ ಕಾರಣಕ್ಕಾಗಿ ಹುಬ್ಬಳ್ಳಿಯ ನೇಹಾ ಮನೆಗೆ ಧಾವಿಸಿದ ಬಿಜೆಪಿ ಮುಖಂಡರು ಹಾಸನದ ನೂರಾರು ಮಹಿಳೆಯರ ಬಗ್ಗೆ ಯಾಕೆ ಕಾಳಜಿ ವಹಿಸಿಲ್ಲ? ಮಹಿಳಾ ಮೀಸಲಾತಿ ಪರಿಚಯಿಸಿದಾಗ ಮಹಿಳೆಯರ ಬಗ್ಗೆ ನಮಗೆ ಕಾಳಜಿ ಇದೆ ಎಂದಿದ್ದ ದೇವೇಗೌಡರು ಹಾಸನದ ನೊಂದ ಮಹಿಳೆಯರ ಬಗ್ಗೆ ಯಾಕೆ ಕಾಳಜಿ ತೋರುತ್ತಿಲ್ಲ ಎಂದು ಪ್ರಶ್ನಿಸಿದ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷೆ ಎಸ್. ವರಲಕ್ಷ್ಮಿಯವರು ರಾಜ್ಯ ಸರಕಾರವು ಈ ವಿಷಯಕ್ಕೆ ಚುನಾವಣೆಗೆ ಕೊಟ್ಟ ಒತ್ತನ್ನು ಈಗ ಕೊಡುತ್ತಿಲ್ಲ ಎಂದೂ ಟೀಕಿಸಿದರು.

ಮಹಿಳೆಯರ ಹಕ್ಕುಗಳು ಯಾರ ಭಿಕ್ಷೆಯೂ ಅಲ್ಲ, ಹೋರಾಟದ ಫಲವಾಗಿ ಸಿಕ್ಕಂತವು. ಈ ಸಂದರ್ಭದಲ್ಲಿ ಕೇರಳದ ವೀರ ಮಹಿಳೆ ನಂಗೇಲಿಯನ್ನು ನೆನೆಯಬೇಕು. ಸ್ತನ ತೆರಿಗೆ ವಿರುದ್ಧ ಒಬ್ಬಂಟಿಯಾಗಿ ಹೋರಾಡಿ ಸ್ತನವನ್ನೇ ಕತ್ತರಿಸಿ ಕೊಟ್ಟ ನಂಗೇಲಿ, ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಶತ್ರುಗಳ ವಿರುದ್ಧ ಹೋರಾಡಿದ ಜಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರು ರಾಣಿ ಚೆನ್ನಮ್ಮ ನಮಗೆ ನೆನಪಾಗಬೇಕು. ಈ ದೌರ್ಜನ್ಯದ ಸಂದರ್ಭದಲ್ಲೂ ನಾವೆಲ್ಲರೂ ಗಟ್ಟಿಯಾದ ಹೋರಾಟ ಮಾಡಬೇಕು ಎಂದರು.

ಕಾನೂನಾತ್ಮಕ ಹೋರಾಟ ದೀರ್ಘ
– ಸಬಿಹಾ ಭೂಮಿಗೌಡ

ಎಲ್ಲರ ಮತಕ್ಕೂ ಒಂದೇ ಬೆಲೆ ಎನ್ನುತ್ತದೆ ಸಂವಿಧಾನ. ಆದರೆ ನ್ಯಾಯದ ಪ್ರಶ್ನೆ ಬಂದಾಗ ಎಲ್ಲರಿಗೂ ನ್ಯಾಯ ಒಂದೇ ಇದೆಯಾ? ಕಾನೂನಾತ್ಮಕ ಹೋರಾಟ ಸುದೀರ್ಘವಾದದ್ದು. ನಾವು ಇಂದು ತೋರುತ್ತಿರುವ ಆವೇಶ, ಸಿಟ್ಟನ್ನು ಕೊನೆಯವರೆಗೂ ಕಾಯ್ದುಕೊಳ್ಳಬೇಕು. ಮಹಿಳೆಯರಿಗೆ ನ್ಯಾಯ ಸಿಗುವವರೆಗೆ, ಅಪರಾಧಿಗಳಿಗೆ ಶಿಕ್ಷೆ ಆಗುವವರೆಗೆ ನಮ್ಮ ಹೋರಾಟದ ಬಿಸುಪನ್ನು ಕಾಯ್ದುಕೊಳ್ಳೋಣ ಎಂದು ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ. ಸಬೀಹಾ ಭೂಮಿಗೌಡ ಅವರು ಹೇಳಿದರು.

ಲೈಂಗಿಕ ಹಗರಣ ನಾಚಿಕೆಗೇಡು
–ಮಾವಳ್ಳಿ ಶಂಕರ್



ರೈತ ಹೋರಾಟ, ದಲಿತ ಹೋರಾಟ, ಮಹಿಳಾ ಹೋರಾಟ ಮತ್ತು ಎಲ್ಲ ಬಗೆಯ ಜನಪರ ಹೋರಾಟಗಳ ತಾಣವಾಗಿದ್ದ, ಕಣವಾಗಿದ್ದ ಜಿಲ್ಲೆಯಲ್ಲಿ ಇಂಥ ಘೋರ ಪ್ರಕರಣ ನಡೆದಿರುವುದು ನಾಚಿಕೆಗೇಡು. ಕುಮಾರಸ್ವಾಮಿಯವರು ಮೊದಲಿಗೆ ಆರೋಪಿಗೂ ನಮ್ಮ ಕುಟುಂಬಕ್ಕೂ ಸಂಬಂಧವಿಲ್ಲ ಎಂದವರು ಈಗ ಪ್ರತಿ ದಿನ ಯಾಕೆ ಮೈಕ್ ಮುಂದೆ ಭಾಷಣ ಮಾಡುತ್ತಿದ್ದಾರೆ, ಕುಟುಂಬ ಪ್ರೇಮ ಯಾಕೆ ಉಕ್ಕಿ ಹರಿಯುತ್ತಿದೆ? ಎಂದೂ ಡಿ.ಎಸ್.ಎಸ್.(ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಅವರು ಪ್ರಶ್ನಿಸಿದರು.

ಅಸ್ಪೃಶ್ಯತೆ ಆಚರಿಸುವ ರೇವಣ್ಣ
–ಡಾ. ಮೋಹನ್ ರಾಜ್

ಮಾಜಿ ಮಂತ್ರಿಗಳು, ಹಾಲಿ ಶಾಸಕರು ಆದ ಎಚ್.ಡಿ. ರೇವಣ್ಣನವರು ಮನೆಯಿಂದ ಹೊರಗೆ ಹೊರಟಾಗ ಯಾರಾದರೂ ದಲಿತ ವ್ಯಕ್ತಿಗಳು ಎದುರಾದರೆ, ಮನೆಗೆ ವಾಪಸ್ ಹೋಗಿ, ಸ್ನಾನ–ಪೂಜೆಗಳನ್ನು ಮಾಡಿ ಮತ್ತೆ ಹೊರಗೆ ಹೊರಡುತ್ತಾರೆ. ಇದು ಅಸ್ಪೃಶ್ಯತೆಯ ಆಚರಣೆ ಮತ್ತು ಸಂವಿಧಾನ ವಿರೋಧಿ ಕೃತ್ಯ. ಇಂತಹ ಮನಸ್ಥಿತಿಯವರಿಂದಲೇ ದಲಿತರು ಮತ್ತು ಶೋಷಿತ ಸಮುದಾಯಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ ಎಂದು ಡಿ.ಎಸ್.ಎಸ್. (ಭೀಮವಾದ) ರಾಜ್ಯ ಸಂಚಾಲಕರಾದ ಡಾ. ಮೋಹನ್ ರಾಜ್ ಹೇಳಿದರು.

ದೇವೇಗೌಡರೇ, ರಾಜಕೀಯ ನಿವೃತ್ತಿ ಘೋಷಿಸಿ–ಸಿದ್ದನಗೌಡ ಪಾಟೀಲ

ಕ್ರಿಮಿನಲ್‌ಗಳು, ಅತ್ಯಾಚಾರಿಗಳು, ಭ್ರಷ್ಟಾಚಾರಿಗಳು ಈ ದೇಶದಲ್ಲಿ ರಾಜಕಾರಣಿಗಳು ಆಗುತ್ತಿರುವ ಈ ಸಂದರ್ಭದಲ್ಲಿ ಜನಪರ ಸಂಘಟನೆಗಳು ಕಾವಲು ನಾಯಿಗಳ ರೀತಿ ಕೆಲಸ ಮಾಡಬೇಕಿದೆ. ಹಾಸನದಲ್ಲಿ ಈ ಹಿಂದೆ ನಡೆದ ಬಾಗೂರು ನವಿಲೆ ಹೋರಾಟದ ಸಂದರ್ಭದಲ್ಲಿ ಅಲ್ಲಿನ ಹಳ್ಳಿಗಳಿಗೆ ನುಗ್ಗಿ ಮಹಿಳೆಯರ ಮೇಲೂ ಪೊಲೀಸರು ದೌರ್ಜನ್ಯ ಎಸಗುವಂತಹ, ಚಳುವಳಿಗಾರರನ್ನು ಜೈಲಿಗಟ್ಟುವಂತಹ ಕೆಲಸ ಮಾಡಿದ್ದ ದೇವೇಗೌಡರಿಗೆ ಇಲ್ಲಿನ ಜನ ಅಂದೇ ಸರಿಯಾದ ಪಾಠ ಕಲಿಸಿದ್ದಿದ್ದರೆ ಇಂದು ಈ ಸ್ಥಿತಿ ಬರುತ್ತಿರಲಿಲ್ಲ ಎಂದೂ ಸಿದ್ದನಗೌಡ ಪಾಟೀಲರು ಹೇಳಿದರು. ದೇವೇಗೌಡರೇ, ನಿಮಗೆ ನೈತಿಕತೆ ಇದ್ದರೆ ಈ ಪ್ರಕರಣದ ಹೊಣೆ ಹೊತ್ತು ರಾಜಕೀಯ ನಿವೃತ್ತಿ ಘೋಷಿಸಿ ಎಂದೂ ಆಗ್ರಹಿಸಿದರು.

ಪ್ರಜ್ವಲ್ ಗೆದ್ದರೂ ಬಿಡೋದಿಲ್ಲ–ಬಡಗಲಪುರ ನಾಗೇಂದ್ರ



ಅಪರಾಧಿಗಳನ್ನು ಶಿಕ್ಷಿಸಬೇಕಾದ ವ್ಯವಸ್ಥೆಯೇ ದಾರಿ ತಪ್ಪಿದರೆ ಅದನ್ನು ದಾರಿಗೆ ತರಲು ನಾವಿದ್ದೇವೆ ಎಂಬ ಸಂದೇಶವನ್ನು ಈ ಹೋರಾಟ ಕೊಡುತ್ತಿದೆ. ಬಸವಣ್ಣ, ಕುವೆಂಪು ಹುಟ್ಟಿರುವ ನಾಡಿನಲ್ಲಿ, ಮಹಿಳೆಯರ ಘನತೆ ಗೌರವಕ್ಕೆ ಚ್ಯುತಿ ತರುವ ಪ್ರಕರಣಗಳು ಇನ್ನು ಮುಂದೆ ಎಲ್ಲಿಯೇ ನಡೆದರೂ ನಾವು ಬಿಡಬಾರದು, ಮುಖ್ಯವಾಗಿ ಜೂನ್ 4 ರಂದು ಪ್ರಜ್ವಲ್ ಗೆದ್ದರೂ ಆತನಿಂದ ರಾಜಿನಾಮೆ ಕೊಡಿಸುವ ನಿಟ್ಟಿನಲ್ಲಿ ಮುಂದಿನ ಹೋರಾಟ ರೂಪುಗೊಳಿಸೋಣ ಎಂದು ಕರ್ನಾಟಕ ರಾಜ್ಯ ರೈತ ಸಂಘದ ನಾಯಕರಾದ ಬಡಗಲಪುರ ನಾಗೇಂದ್ರ ಅವರು ಹೇಳಿದರು.



ಕಣ್ಣೀರ ಹನಿಗಳನ್ನೇ ಬಾವುಟವಾಗಿಸಿ ಹೋರಾಟ ಮಾಡೋಣ
ಕೆ. ನೀಲಾ

ಮಹಾಭಾರತದ ದ್ರೌಪದಿಯ ವಸ್ತ್ರವನ್ನು ಸೆಳೆದಾಗ ಆಕೆಯ ಐವರು ಗಂಡಂದಿರು ಆಗ ಸಹಾಯಕ್ಕೆ ಬರುವುದಿಲ್ಲ. ಆಕೆ ಪ್ರತಿಜ್ಞೆ ಮಾಡಿದಂತೆ ದುಶ್ಯಾಸನನ ತೊಡೆ ಸೀಳಿ ಆ ರಕ್ತದಿಂದ ಮುಡಿ ಕಟ್ಟಿದಳು. ಹಾಗಾಗಿ ಪ್ರಜ್ವಲ, ಜೂನ್ 4ನೇ ತಾರೀಖಿನ ನಂತರ ಗೆದ್ದು ಬಿಡಬಹುದು ಎಂಬ ಅಹಂಕಾರ ನಿನಗಿದ್ದರೆ ಎಚ್ಚರಿಕೆ, ನಿನ್ನ ಅಟ್ಟಹಾಸಕ್ಕೆ ಕೊನೆಯಿದೆ ಎಂದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ನಾಯಕಿ, ಸಾಹಿತಿ ಕೆ. ನೀಲಾ ಅವರು ಪ್ರಜ್ವಲ್ ಗೆದ್ದರೂ ಸೋತರೂ ಆತನನ್ನು ಒಪ್ಪಿಕೊಳ್ಳಬೇಡಿ ಎಂದು ಹಾಸನದ ಜನತೆಯಲ್ಲಿ ಮನವಿ ಮಾಡಿದರು. ಹಾಸನದ ಡಿ.ಸಿ., ಎಸ್.ಪಿ. ಮಹಿಳೆಯರಾಗಿದ್ದುಕೊಂಡು ತಪ್ಪು ಮಾಡಿದ್ದಾರೆ. ವಿಡಿಯೋ ಪ್ರಸಾರವಾಗುವುದಕ್ಕೆ ಬಿಡಬೇಡಿ, ತಡೆ ಹಾಕಿ ಎಂದು ಮನವಿ ಮಾಡಿದರೂ ಕ್ರಮವಹಿಸಲಿಲ್ಲ ಎಂದೂ ನೀಲಾ ಟೀಕಿಸಿದರು. ಪ್ರಜ್ವಲ್ ದೇವಲಾಪುರ ಅರಣ್ಯದಲ್ಲಿ ಪ್ರಾಣಿಗಳನ್ನು ಭೇಟೆಯಾಡುತ್ತಾನೆ. ಡಿಸಿ–ಎಸ್ಪಿಗಳು ನಿಮಗೆ ತಾಕತ್ತಿದ್ದರೆ ತನಿಖೆ ಮಾಡಿ ಎಂದ ನೀಲಾ ಅವರು ಈ ಪ್ರಕರಣದ ಮೂಲಕ ಹಾಸನದ ಗಂಡಸರು ಹೆಣ್ಣನ್ನು ಒಂಟಿಯಾಗಿ ಆಚೆ ಹೋಗದಂತೆ ಕಟ್ಟಿಹಾಕಲು ದಾರಿಮಾಡಿದ್ದಾರೆ. ಮನಸ್ಮೃತಿಯ ಅಣತಿಯಂತೆ ಮಹಿಳೆಯರನ್ನು ಕಟ್ಟಿಹಾಕುವ ಕೆಲಸಕ್ಕೆ ಬಿಜೆಪಿಯವರೇ ಅವಕಾಶ ಮಾಡಿಕೊಟ್ಟಿದ್ದಾರೆ. ಕುಮಾರಸ್ವಾಮಿ, ದೇವೇಗೌಡ ಹಾಗೂ ರೇವಣ್ಣ ಅವರು ಮನೆಯ ಮಗನನ್ನು ಬೆಂಬಲಿಸಿ ಆ ಮೂಲಕ ಒಂದು ಪ್ರಾದೇಶಿಕ ಪಕ್ಷವನ್ನು ನಾಶ ಮಾಡಿದ್ದಾರೆ ಎಂದರು. ಕಣ್ಣೀರ ಹನಿಗಳನ್ನೇ ಬಾವುಟವಾಗಿಸಿ ರಾಜ್ಯಾದ್ಯಂತ ಹೋರಾಟ ಮಾಡೋಣ. ಸ್ವಾಭಿಮಾನದ, ಮಹಿಳಾ ಅಸ್ಮಿತೆಯ ಚಳುವಳಿಯ ಕಟ್ಟೋಣ, ಅಂಜಬೇಡಿ. ನಿಮ್ಮೊಂದಿಗೆ ನಾವಿದ್ದೇವೆ ಎಂದು ಮಹಿಳೆಯರಿಗೆ ಧೈರ್ಯ ಹೇಳಿದರು.



ಅಪರಾಧಗಳ ಹೊಣೆ ಹೆಣ್ಣಿಗೇ ಯಾಕೆ?
ಮಲ್ಲಿಗೆ

ಈ ಹಗರಣದ ವಿಷಯದಲ್ಲಿ ಕುಮಾರಸ್ವಾಮಿ, ಎಚ್.ಡಿ.ರೇವಣ್ಣ ಹಾಗೂ ಬಿಜೆಪಿಯವರು ಏನೂ ಗೊತ್ತಿರದವರಂತೆ ನುಣಚಿಕೊಂಡರು. ಈ ನುಣುಚುಕೋರರಿಗೆ ಈ ಹೋರಾಟ ಒಂದು ಪಾಠ ಕಲಿಸಲಿದೆ. ಅಪರಾಧಗಳ ಹೊಣೆ ಪ್ರತಿ ಬಾರಿಯೂ ಹೆಣ್ಣು ಮಕ್ಕಳು ಹೊತ್ತುಕೊಳ್ಳುವುದು ಬೇಡ ಎಂದು ಕರ್ನಾಟಕ ಜನಶಕ್ತಿ ಸಂಘಟನೆಯ ಸಿರಿಮನೆ ಮಲ್ಲಿಗೆ ಹೇಳಿದರು.

ದಲಿತ ಚಳುವಳಿಯ ಮುಖಂಡರಾದ ಗುರುಪ್ರಸಾದ್ ಕೆರಗೋಡು, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಎಸ್.ಶೋಭಾ, ರಾಜ್ಯ ರೈತ ಸಂಘದ ಹಿರಿಯ ಹೋರಾಟಗಾರ್ತಿ ಸುನಂದಾ ಜಯರಾಮ್, ವಕೀಲರಾದ ಬಾಲನ್ ಸೇರಿದಂತೆ ಇನ್ನು ಹಲವಾರು ಮುಖಂಡರು ಜನರನ್ನುದ್ದೇಶಿಸಿ ಮಾತನಾಡಿದರು.

ಇದು ವಿಕೃತ ಲೈಂಗಿಕ ಹತ್ಯಾಕಾಂಡ–ರೂಪ ಹಾಸನ

ಇಲ್ಲಿ ನಡೆದಿರುವುದು ಕೇವಲ ಒಂದು ಲೈಂಗಿಕ ಹಗರಣವಲ್ಲ. ಇದು ವಿಕೃತ ಲೈಂಗಿಕ ಹತ್ಯಾಕಾಂಡ. ಹೆಣ್ಣುಮಕ್ಕಳ ಮಾನಪ್ರಾಣ ಕುಟುಂಬವನ್ನು ಪಣಕಿಟ್ಟು ಸಂಸದನೊಬ್ಬ ನಡೆಸಿರುವ ಕಾಮಕೃತ್ಯ.



ಅದನ್ನು ವಿಡಿಯೋ ಮಾಡಿದ್ದು, ತನ್ನ ನಿರ್ಲಕ್ಷ್ಯದಿಂದ ಮತ್ತೊಬ್ಬರಿಗೆ ಸಿಗುವಂತೆ ಮಾಡಿದ್ದು, ಹಾಗೂ ಚುನಾವಣಾ ಗೆಲುವಿಗಾಗಿ ಅದನ್ನು ಬಳಸಿಕೊಂಡ ರೀತಿ ಹೀಗೆ ಎಲ್ಲ ಹಂತಗಳನ್ನು ಖಂಡಿಸಬೇಕಿದೆ.

ಎಷ್ಟೆಲ್ಲ ಹಂತಗಳಲ್ಲಿ ವಿಡಿಯೋ ಹರಿಬಿಡಲಾಗುತ್ತಿದೆ ಅನ್ನುವುದು ಇಲ್ಲಿನ ಹೋರಾಟಗಾರರು, ಜನತೆಗೆ ಗೊತ್ತಿದೆ. ಇಲ್ಲಿನ ಹೆಣ್ಣು ಮಕ್ಕಳ ಸಮಾಧಿ ಕಟ್ಟಲಾಗುತ್ತಿದ್ದು, ಹೆಣ್ಣು ಮಕ್ಕಳ ಜರ್ಜರಿತ ಸ್ಥಿತಿಯನ್ನು ನೋಡಿ ನೊಂದಿದ್ದೇವೆ. ಅತ್ಯಂತ ತಳಸಮುದಾಯದಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳನ್ನು ಪ್ರಜ್ವಲ್ ತನ್ನ ಕಾಮಕೃತ್ಯಕ್ಕೆ ಬಳಸಿಕೊಂಡಿದ್ದಾನೆ. ಹಾಗಾಗಿ, ನಿಮ್ಮೊಂದಿಗೆ ನಾವಿದ್ದೇವೆ, ನೊಂದ ಹೆಣ್ಣುಮಕ್ಕಳು ಧೈರ್ಯವಾಗಿ ಮನೆಯಿಂದ ಹೊರಬಂದು ಎಸ್.ಐ.ಟಿ. ಮುಂದೆ ನಿಮ್ಮ ದೂರು ದಾಖಲಿಸಿ ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬರಹಗಾರ್ತಿ, ಹೋರಾಟಗಾರ್ತಿ ರೂಪ ಹಾಸನ ಅವರು ಕರೆ ನೀಡಿದರು.

ಸರ್ಕಾರಗಳೇ ಜವಾಬ್ದಾರಿಯಿಂದ ವರ್ತಿಸಿ, ಇನ್ನೂ ಪ್ರಜ್ವಲ್ ರೇವಣ್ಣನನ್ನು ರಕ್ಷಿಸುತ್ತಿರುವ ರಾಜ್ಯ ಕೇಂದ್ರ ಸರ್ಕಾರಗಳು, ಪರಸ್ಪರ ಕೆಸರೆರಚಾಟ ನಡೆಸುತ್ತಿರುವ ರಾಜಕೀಯ ನಾಯಕರು ಇನ್ನಾದರೂ ಅದನ್ನೆಲ್ಲ ನಿಲ್ಲಿಸಿ. ಈ ಕ್ಷಣಕ್ಕೂ ವಿಡಿಯೋ ಹರಿಯಬಿಡುತ್ತಿರುವವರನ್ನು ಹೆಡೆಮುರಿಕಟ್ಟಿ, ಪ್ರಕರಣಕ್ಕೆ ಅಂತ್ಯ ಹಾಡಿ. ಇಲ್ಲದಿದ್ದರೆ ಸರ್ಕಾರಗಳ ಮೇಲೆ ನಂಬಿಕೆ ಕಳೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದೂ ರೂಪ ಅವರು ಎಚ್ಚರಿಕೆ ನೀಡಿದರು. ಈ ವಿಷಯದಲ್ಲಿ ಕಾನೂನು ಹೋರಾಟ ಮತ್ತು ಬೀದಿ ಹೋರಾಟಗಳು ಮುಂದುವರಿಯಲಿವೆ ಎಂದೂ ಅವರು ಘೋಷಿಸಿದರು.

ವರದಿ–'ಹೋರಾಟದ ನಡಿಗೆ, ಹಾಸನದ ಕಡೆಗೆ' ಮೀಡಿಯಾ ತಂಡ.
ಕ್ರೋಢೀಕರಣ, ನಿರೂಪಣೆ: ಆರ್. ರಾಮಕೃಷ್ಣ.

ಜಿನೀವಾ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಮೀನಾಕ್ಷಿ ಸುಂದರಂ

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ- ಇಂಟರ್ ನ್ಯಾಷನಲ್ ಲೇಬರ್ ಆರ್ಗನೈಶೇಷನ್ (ಐಎಲ್‌ಓ)ನ 112ನೇ ಅಂತರರಾಷ್ಟ್ರಿಯ ಕಾರ್ಮಿಕ ಸಮ್ಮೇಳನವು ಜೂನ್ 03, 2024ರಿಂದ ಜೂನ್ 14, 2024ರವರೆಗೆ ಯೂರೋಪ್ ಖಂಡದ ಸ್ವಿಟ್ಜರ್‌ಲ್ಯಾಂಡ್ ದೇಶದ ಜಿನೀವಾ ನಗರದಲ್ಲಿ ನಡೆಯಲಿದೆ. ಈ ಸಮ್ಮೇಳನದಲ್ಲಿ ಭಾರತ ಕಾರ್ಮಿಕ ವರ್ಗದ ಪರವಾಗಿ ಒಟ್ಟು 11 ಜನ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಳ್ಳುತ್ತಿದ್ದಾರೆ. ಈ ಹನ್ನೊಂದು ಜನರ ಪೈಕಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು)ವನ್ನು ಪ್ರತಿನಿಧಿಸುವ ಭಾರತದ ಏಕೈಕ ಪ್ರತಿನಿಧಿಯಾಗಿ ಈ ಸಮ್ಮೇಳನದಲ್ಲಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳೂ



ಹಾಗೂ ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ಆದ ಎಂ.ಎಸ್. ಮೀನಾಕ್ಷಿ ಸುಂದರಂ ಭಾಗವಹಿಸಲಿದ್ದಾರೆ.

ಈ ಸಮ್ಮೇಳನದಲ್ಲಿ ಭಾರತ ದೇಶದ ಕಾರ್ಮಿಕ ವರ್ಗದ ಸ್ಥಿತಿಗತಿಗಳನ್ನು, ಕಾರ್ಮಿಕ ಚಳುವಳಿಯ ಅನುಭವಗಳು, ಬೇಡಿಕೆಗಳು ಮತ್ತು ಆಶಯಗಳನ್ನು ಸಮರ್ಥವಾಗಿ ಮಂಡಿಸುವ ಮತ್ತು ಬಿಂಬಿಸುವ ನಿಟ್ಟಿನಲ್ಲಿ ಯಶಸ್ಸನ್ನು ಕೋರಲು ಹಾಗೂ ಶುಭಾಶಯಗಳನ್ನು ತಿಳಿಸಲು ಒಂದು ಪುಟ್ಟ ಸಮಾರಂಭವನ್ನು ಬೆಂಗಳೂರಿನ ಇ.ಎಮ್.ಎಸ್. ಭವನದಲ್ಲಿ ಮೇ 28, 2024 ರಂದು ಸಂಜೆ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ, ಶುಭಕೋರಿ ಮಾತನಾಡಿದರು. ಭಾರತದ ಒಟ್ಟು ಕಾರ್ಮಿಕ ವರ್ಗದ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಜಿನೀವಾ ಸಮ್ಮೇಳನದಲ್ಲಿ ಸಿಐಟಿಯು ಪರವಾಗಿ ವಹಿಸಬೇಕಾಗಿರುವ ಬಹುದೊಡ್ಡ ಸವಾಲಿನ ಪಾತ್ರದ ಕುರಿತು ಮೀನಾಕ್ಷಿ ಸುಂದರಂ ಅವರು ಮಾತನಾಡಿದರು. ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ವಿಜು ಕೃಷ್ಣನ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಮೀನಾಕ್ಷಿ ಸುಂದರಂ ಅವರ ಮಡದಿ ಉಮಾ, ಮಗಳು ಕಾರ್ಮಿಕ ಪರ ವಕೀಲೆ ಮಹಿಮಾ, ಸಿಐಟಿಯು ರಾಜ್ಯ ಪದಾಧಿಕಾರಿಗಳು, ಜನವಾದಿ ಮಹಿಳಾ ಸಂಘಟನೆಯ ಪ್ರತಿನಿಧಿಗಳು, ಹಲವು ಕಾರ್ಖಾನೆಗಳ ಕಾರ್ಮಿಕ ಸಂಘಟನೆಯ ಮುಖಂಡರು ಮುಂತಾದವರು ಪಾಲ್ಗೊಂಡು ಶುಭ ಹಾರೈಸಿದರು.

ಕಾಡ ಹಾದಿಯಲ್ಲಿ ಕಾಡಿದ ನೆನಪುಗಳು.... ಪುಟ 5 ರಿಂದ

ಕಾರ್ಯದರ್ಶಿಯಾಗಿದ್ದ ಕಾಂ.ಸಿ.ನಂಜುಂಡಪ್ಪ ನವರು ಮತ್ತಷ್ಟು ನಿಕಟವಾದರು.

ಸಿ.ಎನ್, ಎನ್.ಕೆ.ಉಪಾಧ್ಯಾಯ ರವರು ನಮ್ಮ ಬಳ್ಳಾರಿ ಜಿಲ್ಲೆಗೆ ಸಂಘಟನಾ ಕಾರ್ಯ ನಿಮಿತ್ತ ಬಂದು ಹೋಗುತ್ತಿದ್ದರು. ಬೆಂಗಳೂರಿನಲ್ಲಿ ಸಭೆಗಾಗಿ ಹೋದಾಗ ಅವರು ವಾಸವಿದ್ದ ಸಿಐಟಿಯುವಿನ ರಾಜ್ಯ ಸಮಿತಿ ಕಛೇರಿಯೂ ಆಗಿದ್ದ ರತನ್ ಮಹಲ್‌ನ ರೂಂ ನಂ.4 ಕ್ಕೆ ಹೋಗಿದ್ದೆ. ಆಗ ಸಿ.ಎನ್.ರವರು ಒಂದು ಅಂತರ್ ದೇಶಿ ಪತ್ರವನ್ನು ತೆರೆದು ಅತೀ ಸಂತಸ ತುಂಬಿದ ದನಿಯಲ್ಲಿ ಓದಿದರು. ಸಿ.ಎನ್.ರವರಿಗೆ ಅವರದ್ದೇ ಆದ ಓದುವ ಸ್ಟೈಲ್ ಒಂದಿತ್ತು.

ಅದು ಜಯಕುಮಾರ್‌ರವರು ತಮಗೆ ದೊರೆತಿದ್ದ ಆರ್.ಟಿ.ಓ. ಆಫೀಸಿನ ಕೆಲಸಕ್ಕೆ ರಾಜಿನಾಮೆ ನೀಡಿ ಪೂರ್ಣಾವಧಿ ಕಾರ್ಯಕರ್ತನಾಗಿ ಬರಲು ನಿರ್ಧರಿಸಿದ ಬಗ್ಗೆ ಬರೆದ ಪತ್ರವಾಗಿತ್ತು. ಅದರಲ್ಲಿ ಕೇಳಿ ಬಂದ ಅವರ ಅಣ್ಣನವರ ಪ್ರಸ್ತಾಪ ಹೇಗೆ ಬಂದಿತ್ತು ಎನ್ನುವ ವಿಷಯ ನೆನಪಿಲ್ಲ. ಆದರೆ ಅಣ್ಣನ ಪ್ರಸ್ತಾಪ ಅದೇನೋ ಗಟ್ಟಿಯಾಗಿ ನೆನಪಿನಲ್ಲಿ ಉಳಿದಿದೆ. ಜಯಕುಮಾರ್ ಅಪಾರವಾಗಿ ಪ್ರೀತಿಸುತ್ತಿದ್ದ ಅವರ ಅಣ್ಣ ನವರನ್ನು ಮನೆಯಲ್ಲಿ ಒಮ್ಮೆ ಭೇಟಿ ಮಾಡಿದೆ. ಅವರಿಗೆ ತಮ್ಮನ ನಿರ್ದಾರ, ಕೆಲಸಗಳ ಬಗ್ಗೆ ಅಚ್ಚು ಮೆಚ್ಚು, ಪ್ರೀತಿ, ಗೌರವ! ಅಮ್ಮನನ್ನೂ ಒಮ್ಮೆ ನೋಡಿದೆ. ಕಾಡ ಹಾದಿಯ ಬದುಕಿನಲ್ಲಿ ಈ ಇಬ್ಬರೂ ಗಾಢವಾಗಿ ಹರಡಿಕೊಂಡಿದ್ದಾರೆ. ಅವರು ಜಯಕುಮಾರ್ ಅವರ ವ್ಯಕ್ತಿತ್ವ, ಬದುಕಿನಿಂದ ಬೇರ್ಪಡಿಸಲಾಗದ ಶಕ್ತಿಧಾರೆಗಳು ಎಂಬುದು ಬೇರೆ ಹೇಳಬೇಕಿಲ್ಲ. ಪ್ರತಿಯೊಬ್ಬರಿಗೂ ಒಬ್ಬ ಚಂದಿರನಂತೆ, ಪ್ರತಿಯೊಬ್ಬರಿಗೂ ಅವರ ತಾಯಿ! ಕುಂಞಮ್ಮ ಅಮ್ಮ, ಅಣ್ಣ ಪಿ.ಕೆ.ಚಂದ್ರಶೇಖರ್ ಬದುಕಲ್ಲಿ ಚಿರಸ್ಥಾಯಿ.

ಮಂಗಳೂರಿನಲ್ಲಿ ಸಿಐಟಿಯು ಸಮ್ಮೇಳನ ಮುಗಿದ ಬಳಿಕ 'ಏಯ್, ಹೋಗುವಿರಂತೆ ಇರ್ರಿಯಪ್ಪಾ' ಅಂದ ಜಯಕುಮಾರ್ ಉಪ್ಪಿನಂಗಡಿಯ ಯುವ ಸಂಗಾತಿ ವೆಂಟರಮಣಗೌಡ್ರು ಮನೆಗೆ ಕರೆದೊಯ್ದರು. ಅದು ಸುತ್ತಲೂ ಹಸಿರು ತುಂಬಿದ ತೋಟದ ಮನೆ. ಅದರೊಳಗೆ ಜುಳು ಜುಳು ಹರಿಯುವ ನೀರಿನ ಧಾರೆ. ಅದರಲ್ಲಿ ಮಲಗಿ ಹೊರಳಾಡಿ ಮಿಂದ ಖುಷಿ! ಗೌಡರ ಮನೆಯ ಮೀನಿನ ಬಿಸಿಯೂಟ! ಗೌಡರೂ ಜಯಕುಮಾರರಂತೆ ಗಡ್ಡ ಬಿಟ್ಟಿದ್ದರು. ಅವರೂ ಸಹ ಜೆ.ಕೆ. ಅವರೊಂದಿಗೆ ನೌಕರಿಗೆ ಆಯ್ಕೆಯಾಗಿದ್ದರು.

1988 ರಲ್ಲಿ ಗುಲ್ಬರ್ಗದಲ್ಲಿ ನಡೆದ ಎಸ್.ಎಫ್.ಐ ನ ರಾಜ್ಯ ಸಮ್ಮೇಳನದಲ್ಲಿ, ಅಲ್ಲಿಯವರೆಗೆ ಅಧ್ಯಕ್ಷರಾಗಿದ್ದ ಆರ್.ಜಯಕುಮಾರ್ ಮತ್ತು ಪ್ರಧಾನ ಕಾರ್ಯದರ್ಶಿ ಎಸ್.ಆರ್. ಆರಾಧ್ಯರವರು ಸಂಘಟನೆಯ ಸ್ಥಾನಗಳಿಂದ ಬಿಡುಗಡೆಯಾದರು. ಅಲ್ಲಿ ಅಧ್ಯಕ್ಷರಾಗಿ ಜಿ.ಸಿ. ಬಯಾರೆಡ್ಡಿ ಮತ್ತು ಕಾರ್ಯದರ್ಶಿಯಾಗಿ ನಾನು ಆಯ್ಕೆಯಾದೆವು. ಬಿಡುಗಡೆಯಾದ ಇಬ್ಬರು ಸಂಗಾತಿಗಳು ವಿದಾಯದ ಮಾತುಗಳನ್ನು ಆಡುವಾಗ ಇಡೀ ಸಮ್ಮೇಳನವು ತೀವ್ರ ಭಾವಾವೇಶಕ್ಕೆ ಒಳಗಾಯಿತು. ಸಂಗಾತಿ ಆರಾಧ್ಯರವರು ತಮ್ಮ ಅನುಭವ, ನೆನಪುಗಳನ್ನು ಪ್ರಸ್ತಾಪಿಸುತ್ತಾ ದುಃಖ ತಡೆಯಲಾಗದೆ ಬಿಕ್ಕಿದರು. ಸಂಗಾತಿ ಜಯಕುಮಾರ್ ರವರು ಕೂಡ ಮಾತನಾಡುತ್ತಾ ಭಾವ ಪರವಶರಾಗಿ ಅವರೂ ಗದ್ಗದಿತರಾದರು. ಇಬ್ಬರದೂ ವಿದ್ಯಾರ್ಥಿ ಚಳುವಳಿ-ಸಂಘಟನೆಯಲ್ಲಿ ಅತಿ ದೀರ್ಘವಾದ ಒಡನಾಟ. ಅತ್ಯಂತ ಕಡು ಕಷ್ಟದ ಸನ್ನಿವೇಶಗಳನ್ನು ಜಂಟಿಯಾಗಿ ಎದುರಿಸಿ ಧಾಳಿ ದಬ್ಬಾಳಿಕೆಗಳಿಗೆ ಒಳಗಾಗಿ ಕರ್ನಾಟಕದಲ್ಲಿ ಶ್ವೇತ ಪತಾಕೆ ಹಾರಾಡುವಂತೆ, ಕೆಂಪು ನಕ್ಷತ್ರ ಸದಾ ಬೆಳಗುವಂತೆ ಜತನದಿಂದ ಕಾಪಿಟ್ಟುಕೊಂಡು ಬಂದ ಮುಂಚೂಣಿಯ ಸಂಗಾತಿಗಳು ಅವರು. ಎಸ್.ಎಫ್.ಐ.ನೊಂದಿಗೆ ಅವರಿಗೆ ಇರುವ, ಇದ್ದ ಭಾವನಾತ್ಮಕ ಸಂಬಂಧದಂತೆ ಇಡೀ ಸಮ್ಮೇಳನದಲ್ಲಿದ್ದ ಪ್ರತಿನಿಧಿಗಳಿಗೂ ಒಂದೊಂದು ಬಗೆಯ ಒಡನಾಟದ ವಿಶಿಷ್ಟ ಅನುಭವ ಮತ್ತು ಅನುಭೂತಿಗಳಿದ್ದವು. ಹೀಗಾಗಿ ದೀರ್ಘಕಾಲದ ಒಡನಾಟದಲ್ಲಿ ಇರುವ ಸಂಗಾತಿಗಳು ಇನ್ನೇನು ಬಿಡುಗಡೆಯಾಗುತ್ತಾರೆ, ನಿತ್ಯದ ಒಡನಾಟದಲ್ಲಿ ಸಿಗುವುದಿಲ್ಲ ಎಂದಾಗ ಆಗಬಹುದಾದ ದುಃಖ ಅಪಾರ. ಹಾಗಾಗಿಯೇ ಅವರಿಗೆ ಭಾವನಾತ್ಮಕ ಬೀಳ್ಕೊಡುಗೆ. ಆಫ್ ಕೋರ್ಸ್, ಅಲ್ಲಿಂದ ಅವರು ಬೇರೆ ಜನ ವಿಭಾಗಗಳ ಚಳುವಳಿಗಳ ನಡುವೆ ಹೊಸ ಜವಾಬ್ದಾರಿಗಳನ್ನು ವಹಿಸಿಕೊಂಡು ಶ್ರಮಿಸಿದ್ದಾರೆ. ಹಾಗೆ ಹೊಣೆಗಾರಿಕೆಗಳಿಂದ ಬಿಡುಗಡೆಯಾದವರು ಒಂದಿಲ್ಲ ಒಂದು ಕಡೆ ನಾವು ಇದ್ದೇ ಇರುತ್ತೇವೆ. ಗುಲ್ಬರ್ಗಾ ಸಮ್ಮೇಳನದಲ್ಲಿ ಇಂತಹ ಸನ್ನಿವೇಶವನ್ನು ಕಂಡ ಅಂದಿನ ಎಸ್.ಎಫ್.ಐ. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ನೀಲೋತ್ಪಲ ಬಸುರವರು ಆಗಾಗ ಇತರೆ ಸಂಗಾತಿಗಳೆದುರು ಈ ಪ್ರಸಂಗವನ್ನು ನೆನಪಿಸಿ, ಛೇಡಿಸುತ್ತಿದ್ದುದು ಉಂಟು!

ವಿದ್ಯಾರ್ಥಿ ಸಂಘಟನೆಯಿಂದ ಜಯಕುಮಾರ್ ರವರು ಯುವಜನ ಚಳುವಳಿಯತ್ತ, ಆರಾಧ್ಯರವರು ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಹೊಣೆಗಾರಿಕೆಯತ್ತ. ನಂತರದ ದಿನಗಳಲ್ಲಿ ಅವರ ಕ್ರಿಯಾಶೀಲತೆ, ಬೆಂಗಳೂರು ಪಕ್ಷದ ರಾಜ್ಯ ಕೇಂದ್ರದಲ್ಲಿ, ಮೈಸೂರು, ಮಂಗಳೂರು, ಕುಂದಾಪುರಗಳಲ್ಲಿ. ಹೀಗೆಲ್ಲಾ ಚಳುವಳಿ, ಜೀವನದಲ್ಲಿ ಬಂದ ಹಲವು ತಿರುವುಗಳು ಇಲ್ಲಿನ ಪುಟಗಳಲ್ಲಿವೆ. ಎಸ್.ಎಫ್.ಐ.ನ ನಾಯಕಿ ಲೀಲಾ ಸಂಪಿಗೆ ಯವರೊಂದಿಗೆ ವಿವಾಹ, ಪ್ರೀತಿಯ ದೀಪೂ ಸೇರಿ ಅವರೆಲ್ಲಾ ಎದುರಿಸಿದ ಸಮಸ್ಯೆ, ಸಂಕಟಗಳು ತೀವ್ರ ದುಃಖ, ನೋವು ತರುತ್ತವೆ. ಹೀಗೆ ಏನೆಲ್ಲಾ ಘಟಿಸಿ ಹೋದವಲ್ಲಾ. ಅದನ್ನು ಎದುರಿಸಿದ ಛಲಗಾರಿಕೆ ಹೆಮ್ಮೆ ಮೂಡಿಸುವಾಗಲೇ ನೋವು ತುಂಬಿದ ಬದುಕು ಮನ ಕಲಕುತ್ತದೆ.

ಹೌದು, ಅವರ ಮನೆಯಲ್ಲಿದ್ದ ಪೇಂಟಿಂಗ್ ಒಂದು (ಜೆ.ಎಂ.ಎಸ್.ನ ಮಹಿಳಾ ಸಿಂಬಲ್) ನನ್ನ ಗಮನ ಸೆಳೆಯಿತು. ಕೊಡುಗೆ ನೀಡಿದ ದೀಪಿಕಾಳ ಹೆಸರಿನ ಜೊತೆ ಅಲ್ಲಿದ್ದ 'ಜೆ.ಕೆ.ಎಲ್..' ನನಗೆ ಕುತೂಹಲ ಕೆರಳಿಸಿತು, ಕೇಳಿದೆ. ಜಯಕುಮಾರ್, ಲೀಲಾವತಿ ಹೆಸರಿರುವುದನ್ನು ಊಹಿಸಿದ್ದೆ, ಲೀಲಾ ಸಹ ಅದನ್ನು ಬಿಡಿಸಿ ಹೇಳಿದಳು. ಒಂದು ಕ್ಷಣ ರೊಮ್ಯಾಂಟಿಕ್ ಅನಿಸಿದರೂ ಅವರೆಲ್ಲರಲ್ಲಿ ಮಿಳಿತಗೊಂಡಿದ್ದ ಹದವಾದ ಗಾಢ ಪ್ರೀತಿ, ಸಮಭಾವ ಮನದುಂಬಿಸಿತು.

ಜಯಕುಮಾರ್ ಅವರು ಪ್ರವೇಶಿಸಿದ ಹಲವು ವೃತ್ತಿಗಳನ್ನು ಹತ್ತಿರದಿಂದ ಕಂಡದ್ದೆಂದರೆ ಅಣಬೆ ಕೃಷಿ. ಮುದ್ರಣ ಕೆಲಸ, ನಂತರ ಪತ್ರಿಕೋದ್ಯಮ. ವಿಜಯ ಕರ್ನಾಟಕದಲ್ಲಿ ಉಪ ಸಂಪಾದಕರಾಗಿ ಕೆಲಸ ನಿರ್ವಹಿಸುವಾಗ ನನಗೆ ಜಯಕುಮಾರ್ ವಿದ್ಯಾರ್ಥಿವಾಣಿ/ ವೇದಿಕೆಯ ಸಂಪಾದಕರಾಗಿದ್ದುದು ನೆನಪಿಗೆ ಬಂತು. ಅವರ ಬಳಿಕ ನಾನು ಸಂಪಾದಕನಾಗಿದ್ದೆ.

ಜಯಕುಮಾರ್, ಲೀಲಾ, ದೀಪು ಜೊತೆಯಲ್ಲಿ ಗಾಢವಾಗಿ ಬೆಸೆದುಕೊಂಡ ಅನೇಕರಿದ್ದಾರೆ. ಅದರಲ್ಲಿ ನನಗೆ ಥಟ್ಟನೆ ಕಾಣುವವರು ಮೈಸೂರಿನ ಲ.ಜಗನ್ನಾಥ್, ಉಡುಪಿಯಲ್ಲಿರುವ ಬಾಲಕೃಷ್ಣ ಶೆಟ್ಟಿಯವರು. ಈಗಲೂ ಜಗನ್ನಾಥ್ ಮತ್ತು ಅವರ ಕುಟುಂಬ ಇವರನ್ನು ಕಂಡಾಗ ಅಥವಾ ನೆನಪಿಸಿದಾಗ ಅದೇ ಭಾವ ಉದ್ವೇಗ. ಹಾಗೇ ಕಷ್ಟದ ಸ್ಥಿತಿಯಲ್ಲಿ ಸಹಾಯ ಮಾಡಿದ ಶೆಟ್ಟರನ್ನು ಜಯಕುಮಾರ್ ಸ್ಮರಿಸಿದ್ದಾರೆ. ಜೆ.ಕೆ. ಯವರು ಶೆಟ್ಟರ ಸಹಾಯ ಕೋರಿದ್ದು ಗೊತ್ತಿತ್ತು, ಅವರಿಗೆ ಹಲವು ಮಿತಿಗಳಿದ್ದವು. ಆದರೂ ಅವರು ಸಂದರ್ಭ ಅರಿತು ನೆರವಿನ ಹಸ್ತ ಚಾಚಿದ್ದು ಎಷ್ಟು ಮಹತ್ವದ್ದಾಗಿತ್ತು ಎಂದು ತಿಳಿದಾಗ ಅಭಿಮಾನ, ಗೌರವ ಹೆಚ್ಚಿಸಿತು.

ಜಯಕುಮಾರ್, ಲೀಲಾರವರು ನನ್ನೊಂದಿಗೆ ಪರಿಚಿತರಾದ ಗಳಿಗೆಯಿಂದಲೇ ಬೆಸೆದ ಆಪ್ತತೆ, ಪ್ರೀತಿ, ಸಂಗಾತಿತನದ ಭಾವ ಎಳ್ಳಷ್ಟೂ ಕಡಿಮೆಯಾಗದಂತೆ ಉಳಿಸಿ ಬೆಳೆಸಿದ್ದಾರೆ. ಸಂಗಾತಿ ಸಂಬಂಧಕ್ಕೆ ಅವರದ್ದು ಕಟಿ ಬದ್ಧತೆ, ಅರ್ಥಪೂರ್ಣತೆ.

ಲೀಲಾ, ಜಯಕುಮಾರ್, ದೀಪು ಅವರು ಸಾಗಿದ ಹಾದಿಯಾಗಿ ಈ ಕೃತಿ ಕಂಡರೂ ಜನ ಚಳುವಳಿಯ ಒಳನೋಟಗಳೂ ದಾಖಲಾಗಿವೆ. ಅವರು ಜನ ಚಳುವಳಿಯನ್ನು ಕಟ್ಟಿದ, ಒಂದು ಸಂಘಟನೆ ಸಾಮೂಹಿಕ ಶಕ್ತಿಯಾಗಿ ಅದರ ಮುಂದಾಳದ ಕಾರ್ಯಕರ್ತನಾಗಿ ನಡೆದ ಹೋರಾಟಗಳನ್ನು ಆ ಕಾಲದ ವಿದ್ಯಾಮಾನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ ಇನ್ನೊಂದು ಕೃತಿ ಬರಲಿ. ಅಂತಹ ನೆನಪುಗಳು ಆ ಕಾಲದ ಮಹತ್ವದ ದಾಖಲೆಗಳಾಗುತ್ತವೆ. (ಇದು ಸಾಧ್ಯವಾಗಲಿಕ್ಕಿಲ್ಲ. ಅವರು ಮತ್ತೆ ಬರೆದಿದ್ದಾರೋ ಗೊತ್ತಿಲ್ಲ.)

ಕೃತಿ ಓದಿ ಮುಗಿಸಿದಾಗ ಎದೆ ಭಾರವಾಗಿದ್ದು, ಜಯಕುಮಾರ ಅವರ ಅಣ್ಣ ಜೀವನ ಸಾಕು ಎಂದೆನಿಸಿದಾಗ ಅಮ್ಮನ ಫೋಟೋದ ಮುಂದೆ ಕಣ್ಮುಚ್ಚಿ ಕುಳಿತು ಅಮ್ಮನಿರುವಲ್ಲಿಗೆ ಹೋಗುವ ಕೋರಿಕೆ ಮಾಡಿಕೊಂಡದ್ದು ಮನಕಲಕುತ್ತದೆ. ಜಯಕುಮಾರ್ ಅವರ ಕಥನದ ಕೊನೆಯ ಸಾಲುಗಳು ಅಂತಹುದೇ ಕೊನೆ ನಿರೀಕ್ಷಿಸುವುದು ತಲ್ಲಣ, ದುಃಖವನ್ನು ಹುಟ್ಟಿಸುತ್ತವೆ.

ನಿಜ, ಜಯಕುಮಾರ್ ಅವರಲ್ಲಿ ಕಾಡುವ ನೆನಪುಗಳಿವೆ, ಇನ್ನೂ ಆಡಬೇಕಾದ ಮಾತುಗಳಿವೆ. ಮಾಡಬೇಕಾದ ಕೆಲಸಗಳಿವೆ. ಹೀಗಿರುವಾಗ ಆತ್ಮವಿಶ್ವಾಸ ಕಳೆದುಕೊಂಡ ನಿಟ್ಟುಸಿರೇಕೆ?

'ದೇವರು ನನ್ನನ್ನು ಕಳುಹಿಸಿದ್ದಾನೆ, ನನ್ನದು ಜೈವಿಕ ಶರೀರವಲ್ಲ' ಎಂದ ಮೋದಿ

ಪ್ರಧಾನಿ ಜನರ ಪ್ರತಿನಿಧಿಯೋ ದೇವರ ಪ್ರತಿನಿಧಿಯೊ

ಸಂಗಿರೆಡ್ಡಿ ಹನುಮಂತ ರೆಡ್ಡಿ
(ಅಖಿಲ ಭಾರತ ಪ್ರಗತಿಪರ ವೇದಿಕೆಯ ರಾಷ್ಟ್ರೀಯ ಕಾರ್ಯದರ್ಶಿ)

"ನನ್ನ ತಾಯಿ ಜೀವಂತವಾಗಿದ್ದಾಗ, ನಾನು ಜೈವಿಕವಾಗಿ ಹುಟ್ಟಿದ್ದೇನೆ ಎಂದು ನಾನು ನಂಬುತ್ತಿದ್ದೆ. ಅವಳು ತೀರಿಕೊಂಡ ನಂತರ, ನನ್ನ ಎಲ್ಲಾ ಅನುಭವಗಳನ್ನು ಪ್ರತಿಬಿಂಬಿಸಿದ ನಂತರ, ದೇವರು ನನ್ನನ್ನು ಕಳುಹಿಸಿದ್ದಾನೆ ಎಂದು ನನಗೆ ಮನವರಿಕೆಯಾಯಿತು. ಈ ಶಕ್ತಿಯು ನನ್ನ ಜೈವಿಕ ದೇಹದಿಂದ ಸಾಧ್ಯವಿಲ್ಲ, ಆದರೆ ದೇವರು ನನಗೆ ದಯಪಾಲಿಸಿದ್ದಾನೆ... ನಾನು ಏನನ್ನಾದರೂ ಮಾಡಿದಾಗ, ದೇವರು ನನಗೆ ಮಾರ್ಗದರ್ಶನ ನೀಡುತ್ತಾನೆ ಎಂದು ನಾನು ನಂಬುತ್ತೇನೆ." ಎಂದು ಸುದ್ದಿ ಸಂಸ್ಥೆಯೊಂದರ ಸಂದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೊಂಡಿದ್ದಾರೆ.

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಂಸತ್ತಿನ ಸದಸ್ಯರು, ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಗಳು ಜನರ ಪ್ರತಿನಿಧಿಗಳು. ಆದರೆ ನಮ್ಮ ಪ್ರಧಾನ ಸೇವಕ ಮೋದಿ ತಾನು ದೇವರ ಪ್ರತಿನಿಧಿ ಎಂದು ಹೇಳಿಕೊಳ್ಳುತ್ತಿದ್ದಾರೆ. ಇಷ್ಟಕ್ಕೇ ಸುಮ್ಮನಾಗದ ಮೋದಿ, "ದೇವರು ವಿಶೇಷ ಕಾರ್ಯಕ್ಕಾಗಿ ನನ್ನನ್ನು ಕಳುಹಿಸಿದ್ದಾನೆ. 2047ರ ವೇಳೆಗೆ ಅಭಿವೃದ್ಧಿ ಹೊಂದಿದ ಭಾರತವನ್ನು ಸಾಧಿಸುವವರೆಗೆ ಅವರು ನನ್ನನ್ನು ಕರೆಯುವುದಿಲ್ಲ. ಅಲ್ಲಿಯವರೆಗೆ ನಾನೇ ಪ್ರಧಾನಿ" ಎಂದು ಹೇಳಿದರು. ತಾನು ಜನ್ಮ ಕೊಡಲಿಲ್ಲ ಎಂಬ ಮೋದಿ ಮಾತು ಕೇಳಿ ಅವರ ಅಮ್ಮ ಹೀರಾಬೆನ್ ಅವರ ಆತ್ಮವು ಎಷ್ಟು ದುಃಖಿತವಾಗಿದೆಯೊ! 2047ರವರೆಗೂ ಭಾರತ ಅಭಿವೃದ್ಧಿಯಾಗದಿದ್ದರೆ ನಂತರವೂ ಮೋದಿಯೇ ಪ್ರಧಾನಿಯಾಗಿ ಮುಂದುವರಿಯುತ್ತಾರಾ? ಏಕೆಂದರೆ, ದೇವದೂತರಿಗೆ ಸಾವು ಎಂಬುದಿಲ್ಲ ಎಂದು ಹೇಳುತ್ತಾರಲ್ಲವೆ?

ಪುರಾಣಗಳಲ್ಲಿ ಜೀವನ ಮತ್ತು ರಾಜರುಗಳ ಆಳ್ವಿಕೆಯ ಕಾಲವನ್ನು ಕವಿಗಳು ಸಾವಿರಾರು ವರ್ಷಗಳಿಂದ ಅತಿಶಯೋಕ್ತಿಗೊಳಿಸಿದ್ದಾರೆ. ಪುರಾಣ ರಚನೆಯ ಕಾಲದಲ್ಲಿ ಮನುಷ್ಯನ ಆಯುಷ್ಯ ಕಡಿಮೆ. 1947ರಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗ ಒಬ್ಬ ಭಾರತೀಯನ ಸರಾಸರಿ ಜೀವಿತಾವಧಿ 32 ವರ್ಷಗಳು. ಈಗ 70 ವರ್ಷಗಳು. ವಿಶ್ವಸಂಸ್ಥೆಯ ಪ್ರಕಾರ, ಜಗತ್ತಿನಲ್ಲಿ ಮನುಷ್ಯನ ಸರಾಸರಿ ಜೀವಿತಾವಧಿ 73 ವರ್ಷಗಳು. ಅಭಿವೃದ್ಧಿ ಹೊಂದಿದ ವಿಜ್ಞಾನ, ವೈದ್ಯಕೀಯ ವಿಜ್ಞಾನ, ಆಧುನಿಕ ಯಾಂತ್ರಿಕ ಸಂಶೋಧನೆ, ಪರೀಕ್ಷೆ, ಚಿಕಿತ್ಸಾ ಸಾಧನಗಳು ಮತ್ತು ಪದ್ಧತಿಗಳು ಮನುಷ್ಯನ ಜೀವಿತಾವಧಿಯನ್ನು ಹೆಚ್ಚಿಸಿವೆ. 100 ವರ್ಷಗಳ ವರೆಗೂ ದೇಶವನ್ನು ಆಳುವುದಕ್ಕಾಗಿ ಎಂಬ ಮೋದಿಯವರ ಚುನಾವಣಾ ಪ್ರಚಾರದಲ್ಲಿನ ಮಾತುಗಳು ಅತಿಶಯೋಕ್ತಿಯಾಗಿದೆ. ದೇವರು ಕಳುಹಿಸಿದ ಎಂಬ ಹುಚ್ಚುತನದ ಮಾತಿಗೆ ಅಧ್ಯಾತ್ಮವಾದಿಗಳು ಕೂಡ ಅಚ್ಚರಿಗೊಂಡಿದ್ದಾರೆ.

"ಲಾರ್ಡ್ ಜಗನ್ನಾಥ ಮೋದಿಯ ಭಕ್ತ"!!

ಇತ್ತೀಚೆಗೆ, ಬಿಜೆಪಿಯ ವಕ್ತಾರ ಮತ್ತು ಒಡಿಶಾದಲ್ಲಿ ಸ್ಪರ್ಧಿಸುತ್ತಿರುವ ಸಂಭಿತ್ ಪಾತ್ರ ಅವರು "ಲಾರ್ಡ್ ಜಗನ್ನಾಥ ಮೋದಿಯ ಭಕ್ತ" ಎಂದು ಹೇಳಿದರು, ಟೀಕೆಗಳು ಎದುರಾದ ನಂತರ ಅವರು ಅದು "ನಾಲಿಗೆ ಸ್ಲಿಪ್" ಎಂದು ಹೇಳಿದ್ದಾರೆ. ಜಗನ್ನಾಥ ದೇವರನ್ನು ನಂಬಿದ ಕೋಟ್ಯಂತರ ಜನರಿಗೆ ಮಾಡಿದ ಅವಮಾನಕ್ಕಾಗಿ ಮೋದಿಯವರು ಕ್ಷಮೆಯಾಚಿಸಬೇಕೆಂಬ ಒತ್ತಡಗಳೂ ಕೇಳಿಬಂದವು.

ಮೋದಿ ಪ್ರಜೆಗಳ ಪ್ರತಿನಿಧಿಯಲ್ಲ. ಮೋದಿಯನ್ನು ದೇವರು ಕಳುಹಿಸಿದ್ದಾನೆ. ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ನಂಬಿಕೆಯಿಲ್ಲದವರು ಮೋದಿಯವರನ್ನು ಏನನ್ನೂ ಕೇಳಬಾರದು. ದೇವದೂತನ ವಿರುದ್ಧ ಎಡಪಂಥೀಯರು ಹೋರಾಡುತ್ತಾರೆ ಎಂದು ಮೋದಿ ಹೇಳಿದರು. ಈ ವಿಷಯದಲ್ಲಿ ಎಡಪಂಥೀಯರು ತಲೆಕೆಡಿಸಿಕೊಳ್ಳಲಿಲ್ಲ. ಈ ಚರ್ಚೆಯಲ್ಲಿ ಜನರ ಸಮಸ್ಯೆಗಳು ಬದಿಗೆ ಸರಿಯುವುದನ್ನು ಅವರು ಬಯಸುವುದಿಲ್ಲ.

ಪುರುಷಾಧಿಪತ್ಯ, ವರ್ಣಾಧಿಪತ್ಯ ಪುರಾಣಕರ್ತರ ಪ್ರವಚನಗಳ ಪ್ರಕಾರ ಪೌರಾಣಿಕ ಕಥೆಗಳ ಕಲ್ಪನೆಗಳನ್ನು, ದೇವರನ್ನು, ದೇವದೂತರನ್ನು ಪ್ರಶ್ನಿಸಬಾರದು. ಸಮಸ್ಯೆಗಳನ್ನು ಪರಿಹರಿಸುವಂತೆ ಅವರನ್ನು ಕೇಳಬಾರದು. ಅಂದಿನ ಪದ್ಧತಿಗಳಾದ ಕುಂತಿಯ ಮಕ್ಕಳ ಸಂತಾನವನ್ನು, ದ್ರೌಪದಿಯ ದಾಂಪತ್ಯವನ್ನೂ ಪ್ರಶ್ನಿಸದೆ ಬರುವುದನ್ನು ನಮ್ಮನ್ನು ನಾವು ಹೊಂದಿಸಿಕೊಂಡಿದ್ದೇವೆ. ಇಂದಿನ ಮೋದಿ ದೇವದೂತ ಎಂದು ನಂಬಿ ಮತ್ತು ಅವರ ಬಳಿ ಏನನ್ನೂ ಪ್ರಶ್ನಿಸಬೇಡಿ. ರೈತರು ಸೇರಿದಂತೆ ದೇಶದ ಪ್ರಜೆಗಳಿಗೆ ಮೋದಿ ಜವಾಬ್ದಾರರಲ್ಲ. ಮೋದಿ ದೇವರಿಗೆ ಮಾತ್ರ ಜವಾಬುದಾರರು. ಏನು, ಹೇಗೆ, ಯಾರಿಗೆ ಕೊಡಬೇಕು, ಯಾರಿಗೆ ಕೊಡಬಾರದು ಎನ್ನುವುದನ್ನು ದೇವರು ಮೋದಿಗೆ ಹೇಳುತ್ತಾನೆ. ಸೂಚನೆಗಳನ್ನು, ಮಾರ್ಗದರ್ಶನಗಳನ್ನು ನೀಡುತ್ತಾನೆ.

> **'ದೇವರು ನನ್ನನ್ನು ಕಳುಹಿಸಿದ್ದಾನೆ, ನನ್ನ ಶಕ್ತಿ ಜೈವಿಕವಲ್ಲ ಎಂದು ಮನವರಿಕೆಯಾಗಿದೆ' ಎಂದಿದ್ದಾರೆ ಪ್ರಧಾನಿ ನರೇಂದ್ರ ಮೋದಿ. ಕೋಪ, ಲೋಭ, ಮೌಢ್ಯಗಳನ್ನು ಸಂಪೂರ್ಣವಾಗಿ ಜಯಿಸಿದ ಬುದ್ಧ ಜನರಿಂದಲೇ ಭಗವಾನ್ ಎಂದು ಕರೆಸಿಕೊಂಡ. ಆದರೆ, ಬುದ್ಧನೇ ತನ್ನನ್ನು ತಾನು ಎಲ್ಲರಂತೆಯೇ ಸಾಮಾನ್ಯ ಮನುಷ್ಯ ಎಂದು ಹೇಳಿಕೊಂಡ. ಬುದ್ಧ ಹುಟ್ಟಿದ ನಾಡಿನಲ್ಲಿ, ವಿಜ್ಞಾನ ತಂತ್ರಜ್ಞಾನವು ಇಷ್ಟೊಂದು ಮುಂದುವರೆದ ಕಾಲದಲ್ಲಿ, ಜನರ ಬದುಕಿಗೆ ಬಹು ರೀತಿಯಲ್ಲಿ ತೊಂದರೆ ಉಂಟುಮಾಡಿ, ಅಸಮಾನತೆಯ ಸಮಾಜದ ನಿರ್ಮಾಣದ ದಿಕ್ಕಿನೆಡೆ ಆಡಳಿತ ನಡೆಸಿರುವ ಮೋದಿಯವರು ತಮ್ಮನ್ನು ತಾವೇ ದೇವದೂತ ಎನ್ನುತ್ತಿರುವುದು ಮೂಢನಂಬಿಕೆಯ ಸಮಾಜ ನಿರ್ಮಾಣದ ಸ್ಪಷ್ಟ ಹೆಜ್ಜೆಯಾಗಿದೆ.**



ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ, ಹನುಮಂತ ದೇವರಿಗೆ ಅಗೌರವ ತೋರುತ್ತಿರುವ ಮತ್ತು ಭಜರಂಗದಳದ ಮೇಲೆ ನಿರ್ಬಂಧಗಳಿಗೆ ಕರೆ ನೀಡುತ್ತಿರುವ ಕಾಂಗ್ರೆಸ್ ಅನ್ನು ಸೋಲಿಸಲು ಮತದಾರರು "ಬಜರಂಗ ಬಲಿ" ಎಂಬ ಹೆಸರಿನ ಬಟನ್ ಅನ್ನು ಒತ್ತಬೇಕು ಎಂದು ಮೋದಿ ವಿವಾದಾತ್ಮಕವಾಗಿ ಹೇಳಿದ್ದರು. ಅವರು "ನಿಮ್ಮ ಮತ ಚಲಾಯಿಸುವಾಗ ಬಜರಂಗ ಬಲಿಯನ್ನು ಪಠಿಸಿ" ಎಂದು ಕೇಳಿಕೊಂಡರು. ಚುನಾವಣಾ ಆಯೋಗಕ್ಕೆ ದೂರು ಬಂದಿದ್ದರೂ ಆಯೋಗ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಮೇ 2023 ರಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಬಿಜೆಪಿಯನ್ನು ಸೋಲಿಸಿತು.

ಗುಜರಾತಿನ ಘೋರ ಅಗ್ನಿ ದುರಂತವನ್ನು ದೇವದೂತ ಏಕೆ ತಡೆಯಲಿಲ್ಲ?

ನೆಹರೂ ತನ್ನನ್ನು ಪ್ರಥಮ ಸೇವಕ ಎಂದು ಘೋಷಿಸಿಕೊಂಡರು. ಸ್ವಲ್ಪ ಮಟ್ಟಿಗೆ ಅವರು ಹಾಗೆ ನಡೆದುಕೊಂಡರು. ಅನುಕರಣೆಯಲ್ಲಿ, ಸುಳ್ಳಿನ ಚಕ್ರವರ್ತಿ ಮೋದಿ ನಾನು ಪ್ರಧಾನ ಸೇವಕ ಎನ್ನುವುದಿಲ್ಲ. ದೇವದೂತ ಜನರ ಪ್ರಧಾನ ಸೇವಕನಾಗಿದ್ದರೆ ದೇವರಿಗೆ ಅವಮಾನ. ಮೋದಿ ತಮ್ಮ ದೈವತ್ವದ ಸೂತ್ರೀಕರಣವನ್ನು ಹಲವಾರು ಬಾರಿ ಪುನರಾವರ್ತಿಸಿದ್ದಾರೆ. ಇಲ್ಲದ ರೈಲ್ವೇ ನಿಲ್ದಾಣದಲ್ಲಿ ಚಾಯ್ ಮಾರುತ್ತಿದ್ದೆ ಎಂದರು. ಬಾಲ್ಯದಲ್ಲಿ ಮೊಸಳೆಯೊಂದಿಗೆ ಹೋರಾಡಿದೆ ಎಂದರು. 2013 ರಲ್ಲಿ ಕೇದಾರನಾಥ ಪ್ರವಾಹದಲ್ಲಿ ಭಕ್ತರನ್ನು ದೈವಿಕ ಶಕ್ತಿಯಿಂದ ರಕ್ಷಿಸಿಕೊಂಡರು, ಅವರು ರಾತ್ರೋ ರಾತ್ರಿ ಮರಳಿ ಬಂದರೆಂದರು. ದೇವದೂತನಿಂದ ಇಷ್ಟೆಲ್ಲಾ ಮಾಡಲು ಸಾಧ್ಯವಾಗಿದ್ದು ನಿಜವಾಗಿದ್ದರೆ, ಕನಿಷ್ಟಪಕ್ಷ ತನ್ನದೇ ಮಾತೃಭೂಮಿ ಗುಜರಾತ್ ರಾಜ್ಯದ ರಾಜ್ ಕೋಟ್ ನಲ್ಲಿ ಇತ್ತೀಚೆಗೆ ನಡೆದ ಘೋರ ದುರಂತವನ್ನು ದೇವದೂತ ಏಕೆ ತಡೆಯಲಿಲ್ಲ? ಮೇ 26ರಂದು ನಡೆದ ಬೆಂಕಿ ಅನಾಹುತದಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ 33 ಜೀವಗಳು ಸುಟ್ಟು ಕರಕಲಾದವು. ಬಿಜೆಪಿಗೆ ಮತ ಹಾಕಿದವರಿಗೆ ಅವರ ಕಾರ್ಯಗಳಲ್ಲಿ ಪುಣ್ಯ (ಮಾನಭಂಗ, ನರಮೇಧಗಳು ಪುಣ್ಯಗಳೇ?) ಸಿಗುತ್ತದೆ ಎಂದು ಇತ್ತೀಚಿನ ಪ್ರಚಾರಗಳಲ್ಲಿ ಹೇಳಿದ್ದರು. ದೈವತ್ವಕ್ಕಾಗಿ ಮತ ಹಾಕಲು ದೇವರ ಪ್ರತಿಪಾದಕರು ಒಲವು ತೋರುತ್ತಾರೆ ಎಂಬುದು ಮೋದಿ ನಂಬಿಕೆ.

ಸ್ವಯಂ ರಕ್ಷಣೆಯ ಹನ್ನೊಂದನೇ ಅವತಾರವೇ!?

ಮಾನವರು, ಏಕಾಂಗಿಯಾಗಿ ಸಾಧ್ಯವಾಗದಿದ್ದರೆ, ಗುಂಪಾಗಿ ಸಮಸ್ಯೆಗಳನ್ನು ಪೂರ್ತಿಯಾಗಿ ಪರಿಹರಿಸಿಕೊಳ್ಳುತ್ತಾರೆ. ಪುರಾಣಗಳಲ್ಲಿ, ದೇವರು ಕೆಲವೊಮ್ಮೆ ಪ್ರತ್ಯಕ್ಷವಾಗಿ, ಕೆಲವೊಮ್ಮೆ ಅವತಾರವಾಗಿ, ಪ್ರಪಂಚದ ಸಮಸ್ಯೆಗಳನ್ನು ಪರಿಹರಿಸಲು ಇಳಿದು ಬಂದರು ಎನ್ನುತ್ತಾರೆ. ಈ ಅವತಾರ ಪುರುಷರು ಒಂದೇ ಬಾರಿಗೆ ಸಮಸ್ಯೆಯನ್ನು ಶಾಶ್ವತವಾಗಿ ತೊಡೆದುಹಾಕಬೇಕಲ್ಲವೇ?. ಅವರಿಂದ ಅದು ಆಗಲಿಲ್ಲ. ದೇವರು ಹತ್ತು ಬಾರಿ ಅವತಾರ ಎತ್ತಬೇಕಾಯಿತು. ಅದು ಸಾಕಷ್ಟು ಉಪಕರಣಗಳಿಲ್ಲದ ಸಮಯ ಎಂದು ಕೊಳ್ಳೋಣ. ಸಕಲ ಸೌಕರ್ಯಗಳು, ಅಧಿಕಾರ, ಆರ್ಥಿಕ, ಭೌತಿಕ, ಬಾಹ್ಯ ದೈವಿಕ ಶಕ್ತಿಗಳನ್ನು ಹೊಂದಿರುವ ಮೋದಿಯವರು ಎಲ್ಲ ಸಮಸ್ಯೆಗಳನ್ನು 'ಹಾಂ ಫಟ್' ಎಂದು ಏಕೆ ಪರಿಹರಿಸಲಿಲ್ಲ? 2047 ರ ವೇಳೆಗೆ ಭಾರತವನ್ನು ಸ್ವರ್ಗವನ್ನಾಗಿ ಮಾಡಲು ದೇವರು ಮೋದಿಯನ್ನು 2024 ರಲ್ಲೇ ತನ್ನ ದೂತನಾಗಿ ಕಳುಹಿಸಿದನೆ? ಇದಕ್ಕೂ ಮುಂಚೆ ಹಲವು ಸಂದರ್ಭಗಳಲ್ಲಿ ವಿವಿಧ ವೇಷಗಳನ್ನು ಧರಿಸಿ ದೇಶವೆಲ್ಲಾ ಸುತ್ತಿ ಮೌನ ಮುಖಭಾವವೊತ್ತು ವಿಶೇಷ ಧಾರ್ಮಿಕ ಕಾರ್ಯಗಳ ಮೂಲಕ ಭಗವಂತನ ಇಚ್ಛೆಗಳನ್ನು ನೆರವೇರಿಸಿದರು. ರಾಮಮಂದಿರ ಕಟ್ಟಿಸಿದರು. ಪ್ರಧಾನ ಅರ್ಚಕನ ಪಾತ್ರವನ್ನು ನಿರ್ವಹಿಸಿದರು. ಇಂದು ಮೋದಿಯದ್ದು ದೈವಿಕ ರಾಜತಾಂತ್ರಿಕತೆಯೇ? ಸ್ವಯಂ ರಕ್ಷಣೆಯ ಹನ್ನೊಂದನೇ ಅವತಾರವೇ!?

ಜನರಿಗೆ ರೂ. 15 ಲಕ್ಷ ಕಪ್ಪುಹಣವನ್ನು ಹಂಚದಿರುವುದು, ದೊಡ್ಡ ನೋಟುಗಳ ಪ್ರವೇಶ, ಕೇಂದ್ರದ ಆದಾಯ ಹೆಚ್ಚಿಸಲು ಜನರ ಮೇಲೆ ಹೆಚ್ಚಿನ ಸೆಸ್ಸುಗಳು, ತೆರಿಗೆಗಳು, ರಾಜ್ಯಗಳ ಆದಾಯವನ್ನು ಕುಗ್ಗಿಸುವ ಸರಕು ಮತ್ತು ಸೇವಾ ತೆರಿಗೆ, ರಾಜ್ಯಗಳ ಮೇಲೆ ಕೇಂದ್ರದ ವೆಚ್ಚದ ಹೊರೆ ಹೆಚ್ಚಿಸುವುದು, ಉದ್ಯೋಗದ ಕೊರತೆ, ಹಸಿವು, ಬಡತನ, ಹಣದುಬ್ಬರ, ಬೆಲೆಗಳ ಹೆಚ್ಚಳ, ಶ್ರೀಮಂತರ ಅಭಿವೃದ್ಧಿ, ಶ್ರೀಸಾಮಾನ್ಯನ ಸಂಕಷ್ಟಗಳು, ಕರಾಳ ಕಾನೂನುಗಳ ಜಾರಿ, ಪ್ರಜಾಸತ್ತಾತ್ಮಕ ಸಂವಿಧಾನದ ಉಲ್ಲಂಘನೆ, ದೇಶದ ಧಾರ್ಮಿಕ ವಿಭಜನೆ ಇವೆಲ್ಲವೂ ದೈವಿಕವಾಗಿದೆಯೇ? "ಮಾಡಬೇಕಾದುದನ್ನು ಮಾಡದಿದ್ದರೂ ಅಥವಾ ಮಾಡಬಾರದ್ದನ್ನು ಮಾಡಿದರೂ ದೇವದೂತನನ್ನು ತಮ್ಮ ಪ್ರತಿನಿಧಿಯಲ್ಲದ ಪವಿತ್ರ ಪ್ರವಾದಿಯನ್ನು, ದೇವರ ಮಗನನ್ನು ಪ್ರಜೆಗಳು ಪ್ರಶ್ನಿಸಬಾರದು. ಆತನ ಮೇಲೆ ಕೋಪ ಮಾಡಿಕೊಳ್ಳಬಾರದು. ಇದನ್ನು ದೈವಿಕ ಆಜ್ಞೆ ಎಂದು ಭಾವಿಸಿ, ಸಹಿಸಿಕೊಳ್ಳಿ, ತಡೆದುಕೊಳ್ಳಿ, ಮತ ಚಲಾಯಿಸಿ ಮತ್ತು ದೈವಿಕ ಪ್ರಾತಿನಿಧ್ಯವನ್ನು ಮುಂದುವರಿಸಿ.

ಅಂದು ಜರ್ಮನಿ, ಇಂದು ಭಾರತದ ಸರದಿ

ಮೋದಿಯ ದೈವೀಕರಣದಿಂದ ಮೋದಿಯ ಭಕ್ತರು ಗುಲಾಮರಾಗುತ್ತಾರೆ. ದೈವ ಪ್ರತಿನಿಧಿಯನ್ನು ಸೋಲಿಸುವುದು ದೇವರಿಗೆ ಮಾಡುವ ಅಪಚಾರ ಎಂದು ಪ್ರಚಾರ ಮಾಡಲಾಗುತ್ತದೆ. ಪರ್ಯಾಯ ಎಂದು ಭಾವಿಸಿರುವ ಗಡ್ಕರಿ ಅವರನ್ನು ಸೋಲಿಸಲೇಬೇಕು. ಎರಡನೇ ಹಿಟ್ಲರ್ ಅಮಿತ್ ಶಾ ಅನುಮೋದಿಸಬೇಕು. ಮೂರನೇ ಹಿಟ್ಲರ್ ಯೋಗಿ ಬಾಯಿ ಮುಚ್ಚಬೇಕು.

ಹಿಟ್ಲರನ ಕಾಲದಲ್ಲಿ ಇತಿಹಾಸದಲ್ಲಿ ಇದೇ ರೀತಿಯ ಕುಖ್ಯಾತ ಘಟನೆಯನ್ನು ಕಾಣಬಹುದು. ಹಿಟ್ಲರ್ ತನ್ನ ಬಾಲ್ಯದ ಸುಳ್ಳು "ದೈವಿಕ" ಶೌರ್ಯದ ಕಥೆಗಳನ್ನು ಶ್ಲಾಘಿಸಲು ಪಕ್ಷದ ನಿಷ್ಠಾವಂತರನ್ನು, ಮಿತ್ರ ಮಾಧ್ಯಮಗಳನ್ನು ಮತ್ತು ಪ್ರಕಾಶಕರನ್ನು ಹುಸಿ ಪ್ರಚಾರದಲ್ಲಿ ತೊಡಗಿಸಿಕೊಂಡರು. ಅವರು ಜರ್ಮನಿಯ ಸಂರಕ್ಷಕ ಎಂದು ಸ್ವತಃ ಹೊಗಳಿದರು. ವಿಕ್ಟರ್ ವಾನ್ ಕೊರ್ಬರ್ ಎಂಬ ಹೆಸರಿನ ಅವರ ಆತ್ಮಚರಿತ್ರೆಯಲ್ಲಿ, ಅವರು ಕ್ರಿಸ್ತ ಎಂದು ಬರೆದಿದ್ದಾರೆ. ಹಿಟ್ಲರ್ ಪ್ರಜಾಪ್ರಭುತ್ವವನ್ನು ಸರ್ವಾಧಿಕಾರವಾಗಿ ಪರಿವರ್ತಿಸಿ ಜರ್ಮನಿಯನ್ನು ನಾಶಪಡಿಸಿದನು. ಇಂದು ಭಾರತದ ಸರದಿ.

ಕೃಪೆ: ಪ್ರಜಾಶಕ್ತಿ
ಭಾವಾನುವಾದ: ಸಿ.ಸಿದ್ದಯ್ಯ

ಚುನಾವಣಾ ಪ್ರಚಾರ ಅಂತ್ಯ–ಸುಳ್ಳುಗಳ ಸರಮಾಲೆಗೆ ವಿರಾಮ

"ವಾಸ್ತವ ಜಗತ್ತೇ ಕಾರ್ಟೂನನ್ನು ಅಣಕಿಸುವಂತಿದೆ, ದೇವರೇ, ನನ್ನ ಉದ್ಯೋಗವನ್ನು ಉಳಿಸು!"

ಇದು ಈ ವರ್ಷದ ವಿಶ್ವ ವ್ಯಂಗ್ಯಚಿತ್ರಕಾರರ ದಿನದಂದು (ಮೇ5) ಒಬ್ಬ ಪ್ರಖ್ಯಾತ ವ್ಯಂಗ್ಯಚಿತ್ರಕಾರರ ಕಾರ್ಟೂನಿನ ಉಲ್ಲೇಖ.. 18ನೇ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ನಮ್ಮ ಪ್ರಧಾನ ಮಂತ್ರಿಗಳ ಉದ್ಗಾರಗಳು ಇದು ಅಕ್ಷರಶಃ ನಿಜ ಎಂದು ಸಾರಿ ಹೇಳಿವೆ. ತಮಾಷೆಯೆಂದರೆ ಈ ಮೂಲಕ ದೇಶದ ವ್ಯಂಗ್ಯಚಿತ್ರಕಾರರಿಗೆ ಪುರುಸೊತ್ತೇ ಇಲ್ಲದಂತೆ ಮಾಡಿದ್ದಾರೆ!

ಈ 82 ದಿನಗಳ ಪ್ರಚಾರದಲ್ಲಿ ಪ್ರಧಾನಿಗಳು, ಆಳುವ ಪಕ್ಷದ ಸ್ಟಾರ್ ಪ್ರಚಾರಕರಾಗಿ 206 ರ್‍ಯಾಲಿಗಳು ಮತ್ತು ರೋಡ್ ಶೋಗಳನ್ನು ನಡೆಸಿದರಂತೆ. ಮತ್ತು ಒಂದೇ ಒಂದು ಪತ್ರಿಕಾಗೋಷ್ಠಿಯನ್ನೂ ನಡೆಸಲಿಲ್ಲ ಎಂಬ ಆರೋಪಕ್ಕೆ ತಮ್ಮ ಉತ್ತರವೋ ಎಂಬಂತೆ 80ಕ್ಕೂ ಹೆಚ್ಚು ಪತ್ರಿಕಾ ಸಂದರ್ಶನಗಳನ್ನು ಕೊಟ್ಟರು.


ಶ್ರೀರಾಮನಾಮವೊಂದೇ ಸಾಕು 400ರ ಸಂಖ್ಯೆಯನ್ನು ದಾಟಲು ಎಂಬ ನಂಬಿಕೆ ಸುಳ್ಳಾಗುತ್ತಿದೆ ಎಂದು ಕಂಡು ಬಂದಾಗ ಸುಳ್ಳುಗಳ ಸರಮಾಲೆಯನ್ನೇ ಹೆಣೆಯಲು ಆರಂಭಿಸಿದಂತೆ ಕಾಣಿಸಿತು. ಮಾಸ್–ಮಛಲಿ–ಮೊಘಲ್‌ನಿಂದ ಆರಂಭವಾದ ಈ ಸರಮಾಲೆ "ನುಸುಳುಕೋರರು', 'ಹೆಚ್ಚು ಮಕ್ಕಳಿರುವವರು', ಮಂಗಳಸೂತ್ರ, ಎಮ್ಮೆ ಮತ್ತು ಹಣ ಕಿತ್ತುಕೊಳ್ಳುವವರು, ಎಸ್‌ಸಿ/ಎಸ್‌ಟಿ/ಒಬಿಸಿಗಳ ಮೀಸಲಾತಿಯನ್ನು ಕಸಿದುಕೊಂಡು ಮುಸ್ಲಿಮರಿಗೆ ಕೊಡುವವರು, ಭಾರತದ ಕ್ರಿಕೆಟ್ ಟೀಮಿನಲ್ಲಿ ಮುಸ್ಲಿಮರನ್ನೇ ತುಂಬಿಸುವವರು, ವೋಟ್ ಜಿಹಾದ್ ಎಂಬಿತ್ಯಾದಿ ನುಡಿಮುತ್ತುಗಳು ಮುಜ್ರಾದ ವರೆಗೂ ಹೋದವು. ಈ ಭರದಲ್ಲಿ ತಮ್ಮ ಆಪ್ತಮಿತ್ರರಾದ ಅದಾನಿ–ಅಂಬಾನಿಯರ ಕಪ್ಪುಹಣವನ್ನೂ ಎಳೆದು ತಂದರು!

ಈ 206 ರ್‍ಯಾಲಿಗಳಲ್ಲಿ ಪ್ರಧಾನಿಗಳು 421 ಬಾರಿ ವಿಭಜನಕಾರಿ ಮಾತುಗಳನ್ನು ಆಡಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹೇಳಿದ್ದಾರೆ.

80ಕ್ಕೂ ಹೆಚ್ಚು 'ಸಂದರ್ಶನ'ಗಳಂತೂ ಒಂದಕ್ಕಿಂತ ಒಂದನ್ನು ಮೀರಿಸುವಂತವು. ಮುಸ್ಲಿಮರನ್ನು ಗುರಿಮಾಡಿ ಏನೂ ಹೇಳೇ ಇಲ್ಲ, ಹಾಗೆ ಹೇಳುವವರು ಸಾರ್ವಜನಿಕ ಜೀವನದಲ್ಲಿರಲು ಯೋಗ್ಯರಲ್ಲ ಎಂದು ಒಂದರಲ್ಲಿ ಹೇಳಿದರು; ಇನ್ನೊಂದರಲ್ಲಿ ತಮ್ಮ ತಾಯಿಯ ನಿಧನದ ನಂತರ, ತಾನು ಜೈವಿಕ ಅಲ್ಲ, ದೇವರೇ ತನ್ನನ್ನು ಕಳಿಸಿರುವುದು ಎಂದು ಅನಿಸಲಾರಂಭಿಸಿದೆ ಎಂದರು; ಕೊನೆಯಲ್ಲಿ ಗಾಂಧೀಜಿ ಪ್ರಸಿದ್ಧಿಗೆ ಬಂದದ್ದು ಅಟೆನ್‌ಬರೋ ಅವರ ಬಗ್ಗೆ ಫಿಲ್ಮ್ ತಯಾರಿಸಿದ ನಂತರವೇ ಎಂಬ ಒಂದು ಹೊಸ ಸಂಶೋಧನೆಯನ್ನೇ ಮಂಡಿಸಿದರು!

ವಿಶೇಷ ಸಂಗತಿಯೆಂದರೆ, ಈ ಯಾವ ಭಾಷಣ, ಸಂದರ್ಶನದಲ್ಲೂ ಮಾನ್ಯ ಪ್ರಧಾನಿಗಳು ಇಂಡಿಯಾ ಮೈತ್ರಿಕೂಟದ ಮುಖಂಡರು ಎತ್ತಿದ ನಿರುದ್ಯೋಗ, ಬೆಲೆಯೇರಿಕೆ, ರೈತರಿಗೆ ಎಂಎಸ್‌ಪಿ, ಮಣಿಪುರದಲ್ಲಿ ಹಿಂಸಾಚಾರ ಮುಂತಾದವುಗಳ ಬಗ್ಗೆ ಚಕಾರವೆತ್ತಲಿಲ್ಲ. ಅವರ ನಿರೀಕ್ಷೆಗೆ ವಿರುದ್ಧವಾಗಿ ಈ ಎಲ್ಲ ಪ್ರಶ್ನೆಗಳು ಮತ್ತು ಸಂವಿಧಾನವನ್ನು ರಕ್ಷಿಸುವ ಪ್ರಶ್ನೆ ಕೂಡ ಚುನಾವಣಾ ಪ್ರಚಾರದಲ್ಲಿ ವಿಷಯಗಳಾಗಿ ಜನಗಳ ಮುಂದೆ ಬಂದವು ಮತ್ತು ಇವಕ್ಕೆ ಪ್ರಧಾನಿಗಳ ಮತ್ತು ಆಳುವ ಪಕ್ಷದ ಬಳಿ ಉತ್ತರಗಳಿಲ್ಲ ಎಂಬುದೂ ಗಮನಕ್ಕೆ ಬರುವಂತಾಗಿದೆ.

ಮಾರ್ಕ್‌ಟ್ವೇನ್ ಮೂರು ತರದ ಸುಳ್ಳುಗಳಿವೆ ಎಂದಿದ್ದರು– "ಸುಳ್ಳುಗಳು, ಹಸಿ ಸುಳ್ಳುಗಳು ಮತ್ತು ಅಂಕಿ–ಅಂಶಗಳು". ಅದಕ್ಕೆ ಈಗ ನಾಲ್ಕನೆಯದನ್ನು ಸೇರಿಸಬೇಕು–'ಮೋದಿ' ಎಂಬುದನ್ನು ಎಂದೊಬ್ಬ ವಿಶ್ಲೇಷಕರು ಹೇಳಿದ್ದಾರೆ.



ಲೈಟ್ಸ್ –ಕ್ಯಾಮರಾ–ಧ್ಯಾನ

ವ್ಯಂಗ್ಯಚಿತ್ರ: ಸ್ಯಾನಿಟರಿ ಪ್ಯಾನಲ್ಸ್

ಪುರಿಯ ಜಗನ್ನಾಥ ಕೂಡ ಮೋದಿಯ ಭಕ್ತ ಎಂದ ಸಂಬಿದ್ ಪಾತ್ರ ಒಡಿಯಾ ಜನಗಳ ಆಕ್ರೋಶವನ್ನು ಕಂಡು ಕ್ಷಮೆ ಕೇಳಿ ಮೂರುದಿನಗಳ ಪ್ರಾಯಶ್ಚಿತ್ತ ಮಾಡಿಕೊಂಡರಂತೆ. ಇತ್ತ ಮೋದಿಯವರು ಪ್ರಚಾರ ಮುಗಿಯುತ್ತಿದ್ದಂತೆಯೇ ಕನ್ಯಾಕುಮಾರಿಗೆ ಮೂರು ದಿನಗಳ ಧ್ಯಾನಕ್ಕೆ ತೆರಳಿದ್ದಾರೆ!



ಈ ಬಾರಿ ನಾವು ಮುಜ್ರಾ ಮಾಡಬೇಕೇ?–ವ್ಯಂಗ್ಯಚಿತ್ರ:ಸತೀಶ ಆಚಾರ್ಯ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ


ಸೇವಕ ಚೌಕೀದಾರ ಭಗವಂತ



ವ್ಯಂಗ್ಯಚಿತ್ರ: ರಾಕೇಶ್ ರಂಜನ್, ಮೊಲಿಟಿಕ್ಸ್.ಇನ್

ಕೊನೆಗೂ ಚುನಾವಣಾ ಆಯೋಗ ಮತದಾನ ವಿವರಗಳನ್ನು ಪ್ರಕಟಿಸಿತು!

ಮೇ 25ರಂದು ಕೊನೆಗೂ ಚುನಾವಣಾ ಆಯೋಗ ಅದುವರೆಗೆ ನಡೆದಿದ್ದ ಎಲ್ಲ 5 ಹಂತಗಳ ಮತದಾನದ ಸಂಖ್ಯೆಗಳನ್ನು ಮೇ 25ರಂದು ಪ್ರಕಟಪಡಿಸಿದೆ. ಮೊದಲ ಹಂತದ ಮತದಾನ ನಡೆದ 11 ದಿನಗಳ ನಂತರ, ಕೇವಲ ಶೇಕಡಾ ಮತದಾನಗಳನ್ನಷ್ಟೇ ಪ್ರಕಟಿಸಿದಾಗ ಎಲ್ಲ ಪ್ರತಿಪಕ್ಷಗಳು ಮತ್ತು ನಾಗರಿಕ ಸಮಾಜದ ಗಣ್ಯರು ಕೇಳಿದರೂ ಪ್ರಕಟಿಸಲು ಆಯೋಗ ನಿರಾಕರಿಸಿದಾಗ, ಪ್ರಕರಣ ಸುಪ್ರಿಂ ಕೋರ್ಟಿಗೂ ಹೋಯಿತು. ಗಮನಾರ್ಹ ಸಂಗತಿಯೆಂದರೆ, ಕಳೆದ 2019ರ ಲೋಕಸಭಾ ಚುನಾವಣೆಗಳ ವರೆಗೂ ಅದು ಈ ಅಂಕಿ–ಅಂಶಗಳನ್ನು ಪ್ರಟಿಸುವ ಮತ್ತು ಈ ಕುರಿತು ಪತ್ರಿಕಾಗೋಷ್ಠಿಯನ್ನು ನಡೆಸುವ ಪರಿಪಾಟವಿತ್ತು.



ನ್ಯಾಯಾಲಯ ಈ ಬಗ್ಗೆ ಆಯೋಗದಿಂದ ವಿವರಣೆ ಕೇಳಿತು. ಅದಕ್ಕೆ ಉತ್ತರವಾಗಿ ಸಲ್ಲಿಸಿದ 225 ಪುಟಗಳ ಅಫಿಡವಿಟ್‌ನಲ್ಲಿ ಆಯೋಗ ಕಾನೂನು ಪ್ರಕಾರ ಅದನ್ನು ಪ್ರಕಟಿಸಬೇಕಾಗಿಲ್ಲ ಎಂದು ವಾದ ಹೂಡಿತು. ಅವನ್ನು ಪ್ರಕಟಿಸಿದರೆ, ನಾಗರಿಕರಲ್ಲಿ ಗೊಂದಲ ಉಟಾಗಬಹುದು ಎಂದೂ ಹೇಳಿತು. ನ್ಯಾಯಾಲಯ ಕೂಡ ಈ ಹಂತದಲ್ಲಿ ಮಧ್ಯಪ್ರವೇಶಿಸಲು ಬಯಸುವುದಿಲ್ಲ ಎನ್ನುತ್ತ ವಿಚಾರಣೆಯನ್ನು ಮುಂದೂಡಿತು. ಇನ್ನು ಈ ಬಗ್ಗೆ ವಿಚಾರಣೆ ನಡೆಯುವುದು ಚುನಾವಣೆಗಳು ಮುಗಿದು ಫಲಿತಾಂಶಗಳೂ ಬಂದ ಮೇಲೆಯೇ.

ಮತಗಟ್ಟೆವಾರು ಮಾಹಿತಿಗಳನ್ನು ಸಾರ್ವಜನಿಕ ಗೊಳಿಸುವುದರಿಂದ ಮತದಾರರಲ್ಲಿ ಗೊಂದಲ ಉಂಟಾಗುತ್ತದೆ

–ಚುನಾವಣಾ ಆಯೋಗ

ವ್ಯಂಗ್ಯಚಿತ್ರ: ಆರ್.ಪ್ರಸಾದ್, ಇಕನಾಮಿಕ್ ಟೈಮ್ಸ್

ಆದರೆ ಅದೇಕೋ ಚುನಾವಣಾ ಆಯೋಗ ಮರುದಿನವೇ ಅದು ಬಹಳ ದಿನಗಳಿಂದ ನಿರಾಕರಿಸುತ್ತಿದ್ದ, ಬಹುಶಃ ಅದು ಸಿದ್ದಪಡಿಸಿಟ್ಟು ಕೊಂಡಿದ್ದ ಅಂಕಿ–ಅಂಶಗಳನ್ನು ಪ್ರಕಟಿಸಿತು. ಈ ಪ್ರಕಟಣೆಯಲ್ಲಿ ಅದು ಸುಪ್ರಿಂ ಕೋರ್ಟ್ ಈ ಕುರಿತು ವ್ಯಕ್ತಪಡಿಸಿದ ಆಂಶಗಳಿಂದ ಮತ್ತು ತೀರ್ಪಿನಿಂದ ತನಗೆ ಬಲ ಬಂದಂತೆ ಅನಿಸಿದ್ದರಿಂದ ಮತ್ತು ಅದು ತನ್ನ ಮೇಲೆ ಹೆಚ್ಚಿನ ಹೊಣೆಗಾರಿಕೆಯನ್ನು ತಂದಿರುವುದರಿಂದ ಈ ಪ್ರಕಟಣೆಯನ್ನು ಮಾಡಲಾಗಿದೆ ಎಂದೂ ಹೇಳಿರುವುದಾಗಿ ವರದಿಯಾಗಿದೆ. ಹಾಗಿದ್ದರೆ ಅದು ಸುಪ್ರಿಂ ಕೋರ್ಟಿನಿಂದ ಶಕ್ತಿಗೂಡಿಸಿಕೊಳ್ಳಲು ಕಾಯುತ್ತಿತ್ತೇ ಎಂದು ಒಬ್ಬ ರಾಜಕೀಯ ವಿಶ್ಲೇಷಕರು ಟಿಪ್ಪಣಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಕೆಲವೇ ದಿನಗಳ ಹಿಂದೆ ಚುನಾವಣಾ ಬಾಂಡುಗಳ ವಿಷಯದಲ್ಲಿ ನಡೆದ ವಾದ–ವಿವಾದಗಳನ್ನು ಸಹಜವಾಗಿಯೇ ನೆನಪಿಸಿಕೊಳ್ಳಬಹುದು. ಸ್ಟೇಟ್ ಬ್ಯಾಂಕ್ ಇಂಡಿಯಾ ಈ ಬಾಂಡುಗಳ ವಿವರಗಳನ್ನು ಸಲ್ಲಿಸಬೇಕು ಎಂದಾಗ, ಇದೇ ರೀತಿಯ ಅಫಿಡವಿಟನ್ನು ಸಲ್ಲಿಸಿ, ಮೂರು ತಿಂಗಳ ಸಮಯವನ್ನು ಕೇಳಿತು. ಆಗಲೂ ಸರಕಾರದ ವಕೀಲರು ನಾಗರಿಕರಿಗೆ ಈ ವಿವರಗಳನ್ನು ಕೇಳುವ ಹಕ್ಕು ಇಲ್ಲ ಎಂದೂ ವಾದಿಸಿದರು. ಆದರೆ ಇದನ್ನು ಒಪ್ಪದ ನ್ಯಾಯಾಲಯ ವಿವರಗಳನ್ನು ಸಲ್ಲಿಸಲು ಆದೇಶ ನೀಡಿತು, ಅದುವರೆಗೆ ಇದಕ್ಕೆ ಬಹಳ ಸಮಯ ಬೇಕು ಎಂದು ಸ್ಟೇಟ್ ಬ್ಯಾಂಕ್ ಇಂಡಿಯಾ ನಿಗದಿತ ಗಡುವಿನಿನೊಳಗೇ ವಿವರಗಳನ್ನು ಪ್ರಕಟಿಸಿತು.

ಇದೇ ರೀತಿಯಲ್ಲಿ ಚುನಾವಣಾ ಆಯೋಗ ಸುಪ್ರಿಂ ಕೋರ್ಟಿನಿಂದ ಆದೇಶವನ್ನು ನಿರೀಕ್ಷಿಸಿತ್ತೇ, ಅದಕ್ಕಾಗಿ ಈ ವಿವರಗಳನ್ನು ಸಿದ್ಧಪಡಿಸಿಟ್ಟು ಕೊಂಡಿತ್ತೇ? ಎಲ್ಲೆಡೆಗಳಿಂದ ಟೀಕೆ–ಟಿಪ್ಪಣಿಗಳು ಬರುತ್ತಿದ್ದರೂ, ಮೌನವಹಿಸಿದ್ದ ಆಯೋಗಕ್ಕೆ ಸುಪ್ರಿಂ ಕೋರ್ಟ್ ಅಂತಹ ಏನೂ ಆದೇಶ ಹೊರಡಿಸದೆ ಇದ್ದಾಗಲೂ, ಇದಕ್ಕಿದ್ದಂತೆ ಬಲ ಹೇಗೆ ಬಂತು, ತನ್ನ ಜವಾಬ್ದಾರಿ ಹೆಚ್ಚಿದೆ ಎಂದು ಏಕೆ ಅನಿಸಿತು, ಅದುವರೆಗೆ ಈ ಬಲ ಮತ್ತು ಅನಿಸಿಕೆ ಇರಲಿಲ್ಲವೇ, ಹಾಗಿದ್ದರೆ ಅದಕ್ಕೆ ಕಾರಣಗಳೇನು, ಅಥವ ಯಾರು ಎಂಬಿತ್ಯಾದಿ ಗಂಭೀರ ಪ್ರಶ್ನೆಗಳು ಹಲವು ರಾಜಕೀಯ ವೀಕ್ಷಕರನ್ನು ಕಾಡುತ್ತಿವೆ.


ನೀವು ಅದೃಷ್ಟವಂತರಪ್ಪಾ!



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಎಸ್‌ಬಿಐ ಅಧಿಕಾರಿ ಚು.ಆ. ಅಧಿಕಾರಿಗೆ

ನವ-ಉದಾರವಾದವು ಸಾಮೂಹಿಕ ಬಡತನವನ್ನು ಹೆಚ್ಚಿಸಿದೆ



ಬಡತನದ ಇಳಿದಿದೆ ಎಂಬ ಅಧಿಕೃತ ದಾವೆಗಳನ್ನು ನಂಬುವವರು, 'ಬಡತನ ಕಡಿಮೆಯಾಗಿರುವಾಗ ಹಸಿವು ಹೆಚ್ಚಲು ಹೇಗೆ ಸಾಧ್ಯ?' ಎಂದು ಕೇಳುತ್ತಿದ್ದಾರೆ. ಆದರೆ ಕೇಳಬೇಕಾಗಿರುವ ಪ್ರಶ್ನೆಯೆಂದರೆ 'ಹಸಿವು ಹೆಚ್ಚಾಗಿರುವಾಗ ಬಡತನ ಹೇಗೆ ತಾನೇ ಕಡಿಮೆಯಾಗಲು ಸಾಧ್ಯ?'. ವಾಸ್ತವವಾಗಿ ಕಳೆದ ಮೂರು ದಶಕಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಬಡವರ ಪ್ರಮಾಣ ಇಳಿಮುಖವಾಗುವ ಬದಲು ಗಮನಾರ್ಹವಾಗಿ ಏರಿದೆ. ಈ ಅಧಿಕೃತ ಸುಳ್ಳು ದಾವೆಗಳು ದಕ್ಷಿಣ ಗೋಳಾರ್ಧದ ದೇಶಗಳ ಸರ್ಕಾರಗಳು ಮತ್ತು ವಿಶ್ವಬ್ಯಾಂಕ್ ತಾವೇ ಸೃಷ್ಟಿಸಿಕೊಂಡಿರುವ ಗೋಜಲು ಮತ್ತು ಅದರ ಪರಿಣಾಮವಾಗಿ ಒಂದು ಸರಳ ತಾರ್ಕಿಕ ತಪ್ಪಿನ ಫಲಿತಾಂಶ. ನಿಜ, 2016 ರ ನೋಟುರದ್ಧತಿಯಂತಹ ಅವಿವೇಕದ ಕ್ರಮಗಳು ಅಥವಾ 2021-22ರ ಮಹಾಸೋಂಕು-ಪ್ರೇರಿತ ಆರ್ಥಿಕ ಹಿಂಜರಿತ ಬಡತನದ ಸಮಸ್ಯೆಯನ್ನು ಉಲ್ಬಣಗೊಳಿಸಿವೆ. ಆದರೆ ಈ ಘಟನೆಗಳೇ ಬಡತನದ ಏರಿಕೆಯ ಮೂಲ ಕಾರಣಗಳಲ್ಲ. ಅದಕ್ಕಿಂತ ಮೊದಲೇ ಇದು ಆರಂಭವಾಗಿತ್ತು. ನಿಜ, ಈ ಬಡತನವನ್ನು ಪುನರ್ವಿತರಣಾ ಕ್ರಮಗಳ ಮೂಲಕ ಗಣನೀಯವಾಗಿ ಕಡಿಮೆ ಮಾಡುವುದು ಕಷ್ಟಕರವಾದ ಸಂಗತಿಯೇಯಲ್ಲ. ಆದರೆ ಇದಕ್ಕೆ ಅತ್ಯಗತ್ಯ ಪೂರ್ವ-ಷರತ್ತೆಂದರೆ, ರಾಷ್ಟ್ರೀಯವಾಗಿ ಮಾತ್ರವಲ್ಲದೆ ಅಂತರಾಷ್ಟ್ರೀಯವಾಗಿ ಪ್ರಚಲಿತದಲ್ಲಿರುವ ಬಡತನದ ತಪ್ಪಾದ ಮಾಪನವನ್ನು ಕೈಬಿಡಬೇಕು ಮತ್ತು ಬಡತನ ಇಳಿಕೆಯ ಹುಸಿ ದಾವೆಗಳ ಬದಲು ವಾಸ್ತವಿಕವಾದ ಮತ್ತು ತಾರ್ಕಿಕವಾಗಿ ಸರಿಯಾದ ಅಂದಾಜುಗಳನ್ನು ಮಾಡಬೇಕು.

ಪ್ರೊ.ಉತ್ಸಾ ಪಟ್ನಾಯಕ್

ನವ-ಉದಾರವಾದಿ ಆರ್ಥಿಕ ನೀತಿಗಳನ್ನು ನೋಡಿದ ಕಳೆದ ಮೂರು ದಶಕಗಳಲ್ಲಿ ಜಾಗತಿಕ ದಕ್ಷಿಣದಲ್ಲಿ ಲಕ್ಷಾಂತರ ಜನರು ಬಡತನದಿಂದ ಹೊರಬಂದಿದ್ದಾರೆ ಎಂದು ವಿಶ್ವಬ್ಯಾಂಕ್ ಮತ್ತು ಸರ್ಕಾರಗಳ ಹೇಳಿಕೆಗಳಿಂದ ಮಾಧ್ಯಮಗಳು ತುಂಬಿವೆ. ಈ ವರ್ಷದ ಆರಂಭದಲ್ಲಿ ಪತ್ರಿಕಾ ಪ್ರಕಟಣೆಯಲ್ಲಿ ನೀತಿ ಆಯೋಗವು 2022-23 ರ ವೇಳೆಗೆ ಭಾರತವು ಶೂನ್ಯ ಬಡತನದ ಸಮೀಪದಲ್ಲಿದೆ, ಇದು ಜನಸಂಖ್ಯೆಯ ಶೇಕಡಾ 5 ರಷ್ಟು ಜನಗಳನ್ನು ಮಾತ್ರ ತಟ್ಟಿದೆ ಎಂದು ಹೇಳಿಕೊಂಡಿದೆ. ಆದರೆ ಪೌಷ್ಠಿಕಾಂಶದ ಸೇವನೆಯ ನಿಷ್ಠುರ ದತ್ತಾಂಶಗಳು ಕಳೆದ ಮೂರು ದಶಕಗಳಲ್ಲಿ ಹಸಿವು ಬಹಳವಾಗಿ ಏರಿದೆ ಎಂದು ತೋರಿಸುತ್ತವೆ, ಗ್ರಾಮೀಣ ಮತ್ತು ನಗರ ಜನಸಂಖ್ಯೆಯ ಮೂರನೇ ಎರಡಕ್ಕಿಂತಲೂ ಹೆಚ್ಚು ಮಂದಿಗೆ ಕ್ಯಾಲೊರಿ ಮತ್ತು ಪ್ರೋಟೀನ್ ಸೇವನೆಯ ದೃಷಿಯಿಂದಲೂ ಕನಿಷ್ಠ ಅಗತ್ಯಗಳಿಗೆ ಸಾಕಷ್ಟು ಖರ್ಚು ಮಾಡಲು ಸಾಧ್ಯವಾಗುತ್ತಿಲ್ಲ. ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಅತ್ಯಂತ ಕಡಿಮೆ ಶ್ರೇಯಾಂಕವು (2023 ರಲ್ಲಿ 125 ದೇಶಗಳಲ್ಲಿ 111) ಮುಂದುವರಿದಿದೆ ಮತ್ತು ಕೆಲವು ಆರೋಗ್ಯ ಸೂಚಕಗಳು ಸುಧಾರಿಸಿದ್ದರೂ, ಇತರವು ಹದಗೆಟ್ಟಿವೆ.

ಅಧಿಕೃತ ದಾವೆಗಳನ್ನು ನಂಬುವವರು, 'ಬಡತನ ಕಡಿಮೆಯಾಗಿರುವಾಗ ಹಸಿವು ಹೆಚ್ಚಲು ಹೇಗೆ ಸಾಧ್ಯ?' ಎಂದು ಕೇಳುತ್ತಿದ್ದಾರೆ. ಆದರೆ ಕೇಳಬೇಕಾಗಿರುವ ಪ್ರಶ್ನೆಯೆಂದರೆ 'ಹಸಿವು ಹೆಚ್ಚಾಗಿರುವಾಗ ಬಡತನ ಹೇಗೆ ತಾನೇ ಕಡಿಮೆಯಾಗಲು ಸಾಧ್ಯ?'. ತರ್ಕಹೀನ ಮತ್ತು ಪಾರದರ್ಶಕವಲ್ಲದ ಲೆಕ್ಕಾಚಾರದ ವಿಧಾನಗಳನ್ನು ಆಧರಿಸಿದ ಅಧಿಕೃತ ಬಡತನದ ಅಂದಾಜುಗಳಿಗೆ ತದ್ವಿರುದ್ಧವಾಗಿ, ಹಸಿವು ಹೆಚ್ಚಿದೆ ಎಂಬುದು ಸುಲಭವಾಗಿ ಲಭ್ಯವಿರುವ ಮತ್ತು ಪರಿಶೀಲಿಸಬಹುದಾದ ಅಂಕಿ-ಅಂಶಗಳ ಮೇಲೆ ಆಧರಿತವಾಗಿವೆ, ಇದು ಬಡತನದಲ್ಲಿ ಬೃಹತ್ ಪ್ರಮಾಣದಲ್ಲಿ ಇಳಿದಿದೆ ಎಂಬುದು ಕಪಟ ದಾವೆ ಎಂದು ನಿರೂಪಿಸುತ್ತದೆ. ಬಡತನ ಇಳಿದಿದೆ ಎಂಬ ಕಪಟ ದಾವೆಗೆ ವಿಶ್ವ ಬ್ಯಾಂಕ್‌ನ ತರ್ಕಹೀನ ವಿಧಾನದ ಆಶೀರ್ವಾದವಿದೆ.

ಏಕೆ ತರ್ಕಹೀನ-ನಕಲಿ?

ಅಧಿಕೃತ ವಿಧಾನವು ಏಕೆ ತರ್ಕಹೀನವಾಗಿದೆ, ಬಡತನ ಇಳಿದಿದೆ ಎಂಬ ತೀರ್ಮಾನವು ಏಕೆ ನಕಲಿಯಾಗಿದೆ? ಏಕೆಂದರೆ ಅದರ ವಿಧಾನವು ಬಡತನದ ರೇಖೆಗಳನ್ನು ಕ್ರಮೇಣ ಕೀಳಂದಾಜು ಮಾಡುತ್ತ ಬಂದಿದೆ. ಇದರಿಂದಾಗಿ ಈ ಬಡತನ ರೇಖೆಗಳನ್ನು ಲೆಕ್ಕ ಹಾಕುವಲ್ಲಿ ಪರಿಗಣಿಸಬೇಕಾದ ಜನಗಳ ಪೋಷಕಾಂಶಗಳ ಪ್ರಮಾಣ ಇಳಿಯುತ್ತ ಬಂದಿದೆ. ಯಾವುದೇ ನಿಜವಾದ ಹೋಲಿಕೆ ಮಾಡಲು, ಮಾನದಂಡವು ಸ್ಥಿರವಾಗಿರಬೇಕು. ಉದಾಹರಣೆಗೆ, ಒಂದು ಶಾಲೆಯು 30 ವರ್ಷಗಳ ಅವಧಿಯಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಲ್ಲಿ ಅನುತ್ತೀರ್ಣರಾಗಿರುವವರ ಪ್ರಮಾಣ ಶೇ.55 ರಿಂದ ಶೇ.5ಕ್ಕೆ ಇಳಿದಿದೆ ಎಂದು ಹೇಳಿಕೊಳ್ಳುವಾಗ, ಉತ್ತೀರ್ಣರಾಗುವ ಅಂಕಗಳನ್ನು ಆರಂಭದಲ್ಲಿ ಇದ್ದ ಶೇ.50 ರಿಂದ ಸದ್ದಿಲ್ಲದೆ ಇಳಿಸುತ್ತ ಬಂದು 30ನೇ ವರ್ಷದ ಕೊನೆಯಲ್ಲಿ ಅದು ಶೇ.15ಕ್ಕೆ ಇಳಿದಿದೆ ಎಂದು ತಿಳಿದರೆ ಅದನ್ನು ಹೇಗೆ ತಾನೇ ನಂಬಲು ಸಾಧ್ಯ?

ಅದೇ ರೀತಿ, 1973-74ರಲ್ಲಿ ಹೆಚ್ಚಿನ ರಾಜ್ಯಗಳಲ್ಲಿ ಬಡತನ ರೇಖೆಯನ್ನು ನಿರ್ಧರಿಸಲು, ನಗರಗಳಲ್ಲಿ 2,200 ಕ್ಯಾಲೋರಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 2,100 ಕ್ಯಾಲೋರಿ ಪೋಷಕಾಂಶಗಳನ್ನು ಪಡೆಯಲು ಸಾಧ್ಯವಾಗಬೇಕೆಂಬ ಪರಿಕಲ್ಪನೆಯಿತ್ತು, ನಾಲ್ಕು ದಶಕಗಳ ನಂತರ ಬಹಳಷ್ಟು ರಾಜ್ಯಗಳಲ್ಲಿ ಆಹಾರ ಸೇವನೆಯ ಪ್ರಮಾಣವನ್ನು 1700 ಕ್ಯಾಲರಿಗೆ ಮತ್ತು ಪ್ರೋಟೀನ್ ಸೇವನೆಯ ಪ್ರಮಾಣವನ್ನು ಕೂಡ ಇಳಿಸಿ ಬಡತನ ರೇಖೆಗಳನ್ನು ಲೆಕ್ಕ ಹಾಕಲಾಗಿದೆ ಎಂದಿದ್ದರೆ, ಇದರ ಆಧಾರದಲ್ಲಿ ಬಡತನ ಇಳಿದಿದೆ ಎಂಬ ದಾವೆಗೆ ಅರ್ಥವಿರುವುದಿಲ್ಲ. ತೆಂಡೂಲ್ಕರ್ ಸಮಿತಿಯ ಬಡತನ ರೇಖೆಗಳ ಪ್ರಕಾರ (ಪ್ರಸ್ತುತ ನೀತಿ ಆಯೋಗ ಅದನ್ನೇ ಅನುಸರಿಸುತ್ತಿದೆ) 2011-12 ರಲ್ಲಿ ಗ್ರಾಮೀಣ ಗುಜರಾತ್‌ನಲ್ಲಿ ಬಡತನದ ರೇಖೆ ತಲಾ ಮಾಸಿಕ ವೆಚ್ಚ 932 ರೂ.ನಲ್ಲಿ 21.9 ಶೇ. ದಷ್ಟಿತ್ತು. ಆದರೆ ಇದರಲ್ಲಿ ಆಹಾರ ಸೇವನೆಯ ಮಟ್ಟವು ಕೇವಲ 1,670 ಕ್ಯಾಲೊರಿಗಳು ಎಂದು ಕಂಡು ಬರುತ್ತದೆ. 2,200 ಕ್ಯಾಲೊರಿಗಳ ಸೇವನೆಗೆ ರೂ 2,000 ಬೇಕಿತ್ತು, ಅಂದರೆ ಅಧಿಕೃತ ಬಡತನ ರೇಖೆಗಿಂತ ಎರಡು ಪಟ್ಟು ಹೆಚ್ಚು ಖರ್ಚು ಮಾಡಬೇಕಾಗಿತ್ತು. ಇದನ್ನು ಪರಿಗಣಿಸಿದರೆ, 87ಶೇ. ಮಂದಿ ಈ ಮಟ್ಟಕ್ಕಿಂತ ಕೆಳಗಿದ್ದಾರೆ. 21.9 ರಷ್ಟು ಅಧಿಕೃತ ಬಡತನ ಮತ್ತು ಶೇಕಡಾ 87 ರ ನೈಜ ಬಡತನ.

ಗ್ರಾಮೀಣ ಪಂಜಾಬ್‌ನಲ್ಲಿ, ಅಧಿಕೃತ ಬಡತನ 7.7ಶೇ. ಇದರಲ್ಲಿ ಪರಿಗಣಿಸಿದ ಆಹಾರ ಸೇವನೆಯ ಪ್ರಮಾಣ ದಿನಕ್ಕೆ 1,800 ಕ್ಯಾಲೊರಿಗಳು. ಇದು 2,200 ಕ್ಯಾಲೊರಿ ಎಂದು ಲೆಕ್ಕ ಹಾಕಿದರೆ, 38 ಶೇ. ದಷ್ಟು ಜನರು ಬಡತನ ರೇಖೆಯ ಕೆಳಗೆ ಬೀಳುತ್ತಾರೆ. 2009 ರಲ್ಲಿ ಗ್ರಾಮೀಣ ಪುದುಚೇರಿಯಲ್ಲಿ ಅಧಿಕೃತ ಬಡತನದ ಪ್ರಮಾಣ 0.2 ಶೇ. ದಷ್ಟಿತ್ತು, ಅಂದರೆ ಸುಮಾರಾಗಿ ಬಡವರೇ ಇಲ್ಲ ಎಂದಾಗುತ್ತದೆ. ಆದರೆ ಇದನ್ನು ಲೆಕ್ಕಹಾಕಿದ್ದು, ಕೇವಲ 1040 ಕ್ಯಾಲೊರಿ ಆಹಾರ ಸೇವನೆ ಎಂದು ಪರಿಗಣಿಸಿ. ಆದರೆ ವಾಸ್ತವವಾಗಿ ಬಡವರು 2200 ಕ್ಯಾಲೋರಿ ಮಾನದಂಡವನ್ನು ತಲುಪಲು ಸಾಧ್ಯವಾಗದವರ ಪ್ರಮಾಣ 58 ಶೇ.! ಅಧಿಕೃತ ಬಡತನ ರೇಖೆಯನ್ನು ಎಷ್ಟು ಕೆಳಮಟ್ಟದಲ್ಲಿ ಇಡಲಾಗಿದೆ ಎಂದರೆ, ಅದರ ಕೆಳಗೆ ಜನ ಬದುಕಿರಲೂ ಸಾಧ್ಯವಿಲ್ಲ! ಆದ್ದರಿಂದ ಲೆಕ್ಕಕ್ಕೇ ಬರುವುದಿಲ್ಲ. ಇದೇ ರೀತಿ ನಗರ ಪ್ರದೇಶದಲ್ಲಿಯೂ ಬಡತನ ಹೆಚ್ಚುತ್ತಲೇ ಬಂದಿರುವುದನ್ನು ನೋಡಬಹುದು.



ಹಸಿವಿನ ರೇಖೆ

ಬಡತನದ ಪ್ರಮಾಣ ಕೇವಲ ಶೇ.5 ಎನ್ನುವ ನೀತಿ ಆಯೋಗದ ದಾವೆ ತೆಂಡೂಲ್ಕರ್ ಸಮಿತಿಯ ಬಡತನ ರೇಖೆಯನ್ನು 2023-24 ಬೆಲೆಸೂಚ್ಯಂಕಕ್ಕೆ ಹೊಂದಿಸಿ ಮಾಡಿರುವ ಲೆಕ್ಕಾಚಾರವನ್ನು ಆಧರಿಸಿದೆ. ಈ ರೀತಿಯಲ್ಲಿ ಬಡತನ ರೇಖೆಗಳನ್ನು 2023-24ಕ್ಕೆ ಮುಂದಕ್ಕೆ ತಂದಾಗ, ಗ್ರಾಮೀಣ/ನಗರ ಪ್ರದೇಶಗಳಿಗೆ ಪ್ರತಿದಿನ ತಲಾ ವೆಚ್ಚ ರೂ.57/ ರೂ.69 ಆಗುತ್ತದೆ. ಇದರಲ್ಲಿ ಆಹಾರದ ಭಾಗವು ಅನುಕ್ರಮವಾಗಿ ರೂ.26.6 ಮತ್ತು ರೂ.27 ಮತ್ತು ಆಹಾರೇತರ ಭಾಗವು ರೂ.30.4 ಮತ್ತು ರೂ.42.

ಬಾಡಿಗೆ, ಸಾರಿಗೆ, ಆರೋಗ್ಯ ಪಾಲನೆ ಮತ್ತು ತಯಾರಿಸಿದ ಸರಕುಗಳನ್ನು ಪಡೆಯಲು (ಶಿಕ್ಷಣ ಮತ್ತು ಮನರಂಜನೆಯನ್ನು ಬಿಟ್ಟು) ಒಬ್ಬ ವ್ಯಕ್ತಿಯ ಕನಿಷ್ಠ ಆಹಾರೇತರ ದೈನಂದಿನ ಅಗತ್ಯಗಳನ್ನು ದಿನಕ್ಕೆ 30.4 ರೂ.ನಿಂದ ಅಥವ ರೂ.42 ರಲ್ಲಿ ಪೂರೈಸಬಹುದು ಎಂದು ಯೋಚಿಸುವುದು ವಾಸ್ತವತೆಯ ಅರಿವಿರುವ ಯಾರಿಂದಲೂ ಸಾಧ್ಯವಿಲ್ಲ, ಅಧಿಕೃತ ಅಂದಾಜುಗಾರರಿಗೆ ಮಾತ್ರ ಅದು ಸಾಧ್ಯ. ಅವರು ಬಡತನದ ರೇಖೆ ಎಂದು ಕರೆಯುವಂತದ್ದು ದಟ್ಟ ದಾರಿದ್ರ್ಯ ಮತ್ತು ಹಸಿವಿನ ರೇಖೆಗಳು; ಅವರ ಪ್ರಕಾರ ಗ್ರಾಮೀಣ ಜನಸಂಖ್ಯೆಯ 6.6 ಶೇ. ಮತ್ತು ನಗರ ಜನಸಂಖ್ಯೆಯ 1.6 ಶೇ. ಜನರು ಇನ್ನೂ ಮನುಷ್ಯ ಮಾತ್ರರು ಬದುಕಿರಲಾಗದ ಈ ಮಟ್ಟದಲ್ಲಿ ಉಳಿದುಕೊಂಡಿದ್ದಾರೆ. ಇದನ್ನು ಹೀಗೇ ಮುಂದುವರೆಸಿದರೆ, ಇನ್ನು ಮೂರು ವರ್ಷಗಳಲ್ಲಿ, ಅಧಿಕೃತವಾಗಿ 'ಶೂನ್ಯ ಬಡತನ' ಎಂದು ಹೇಳಿಕೊಳ್ಳುವ ಸಾಧ್ಯತೆಯಿದೆ, ಏಕೆಂದರೆ ಅಧಿಕೃತ ಬಡತನ ರೇಖೆಗಳ ಕೆಳಗೆ ಯಾರೂ ಬದುಕುಳಿದಿರಲು ಸಾಧ್ಯವಿಲ್ಲ. ಪರೀಕ್ಷೆಯಲ್ಲಿ ಉತ್ತೀರ್ಣತೆ ಅಂಕವು(ಪಾಸ್ ಮಾರ್ಕ್) ಶೂನ್ಯವನ್ನು ತಲುಪಿದರೆ, ಅನುತ್ತೀರ್ಣರಾಗಿರುವವರ ಸಂಖ್ಯೆ ಶೂನ್ಯ ತಾನೇ.

ಕಳೆದ ಮೂರು ದಶಕಗಳಲ್ಲಿ ಗ್ರಾಮೀಣ ಮತ್ತು ನಗರಗಳೆರಡರಲ್ಲೂ ವಾಸ್ತವವಾಗಿ ಬಡವರ ಪ್ರಮಾಣ ಇಳಿಮುಖವಾಗುವ ಬದಲು ಗಮನಾರ್ಹವಾಗಿ ಏರಿದೆ. 1993-94 ರಲ್ಲಿ, ಬಡವರು ಗ್ರಾಮೀಣ/ನಗರ ಪ್ರದೇಶಗಳಲ್ಲಿ ಅನುಕ್ರವಾಗಿ ಶೇ.58.5 ಮತ್ತು ಶೇ.57 ರಷ್ಟಿದ್ದರು. ಏಕೆಂದರೆ ಅವರು ದಿನಕ್ಕೆ 2200/2100 ಕ್ಯಾಲೋರಿಗಳ ಪೌಷ್ಟಿಕಾಂಶದ ಮಾನದಂಡಗಳನ್ನು ತಲುಪಲು ಸಾಧ್ಯವಾಗಲಿಲ್ಲ, ಆದರೆ 2004-05 ರ ಹೊತ್ತಿಗೆ ಆಯಾ ಗ್ರಾಮೀಣ/ನಗರ ಬಡತನ ಅನುಪಾತಗಳು 69.5ಶೇ./ 65 ಶೇ.ಕ್ಕೆ ಏರಿದವು. ಬರಗಾಲದ ವರ್ಷ 2009-10 ರಲ್ಲಿ ಒಂದು ತೀವ್ರ ಏರಿಕೆಯ ನಂತರ 2011-12 ರ ವೇಳೆಗೆ ಶೇ.67/ 62 ಶೇಕಡಾಕ್ಕೆ ಇಳಿಕೆ ಕಂಡುಬಂದಿದೆ.

2017-18ರಲ್ಲಿ ಪೌಷ್ಟಿಕಾಂಶ ಸೇವನೆಯ ಪ್ರಮಾಣ ಎಷ್ಟಿತ್ತು ಎಂಬ ದತ್ತಾಂಶವನ್ನು ಬಿಡುಗಡೆ ಮಾಡಲಾಗಿಲ್ಲ, ಆದರೆ ಅದನ್ನು ಕನಿಷ್ಟ ಮಟ್ಟದಲ್ಲಿ ಅಂದಾಜು ಮಾಡಬಹುದು, ನಂತರದ ವರ್ಷಗಳ ಬೆಲೆ ಸೂಚ್ಯಂಕಗಳನ್ನು 2011-12ರ ಸೂಚ್ಯಂಕಕ್ಕೆ ಹೊಂದಿಸಿ ಇದನ್ನು ಮಾಡಬಹುದು. ಇದು ಗ್ರಾಮೀಣ ಬಡತನದಲ್ಲಿ ತೀವ್ರ ಏರಿಕೆಯನ್ನು ತೋರಿಸುತ್ತದೆ-ಜನಸಂಖ್ಯೆಯ ಶೇಕಡಾ 80 ಕ್ಕಿಂತ ಹೆಚ್ಚು, ನಗರದಲ್ಲಿ ಬಡತನವು 2011-12 ರ ಮಟ್ಟದಲ್ಲೇ ಉಳಿದಿತ್ತು. 2023-24ರ ಸಂಪೂರ್ಣ ಮಾಹಿತಿಯು ಇನ್ನೂ ಬಿಡುಗಡೆಯಾಗಬೇಕಿದೆ. ಆದರೆ ಮಹಾ ಸಾಂಕ್ರಾಮಿಕದಿಂದ ಉಂಟಾದ ಆರ್ಥಿಕ ಮಂದಗತಿ ಮತ್ತು ಹೆಚ್ಚುತ್ತಿರುವ ನಿರುದ್ಯೋಗವನ್ನು ನೋಡಿದರೆ, ನಿಜವಾದ ಬಡತನದ ಮಟ್ಟವು ಹೆಚ್ಚಿರುವ ಸಾಧ್ಯತೆಯಿದೆ.

ಸ್ವಯಂಸೃಷ್ಟಿಯ ಗೋಜಲು

ಸರ್ಕಾರಗಳು ಮತ್ತು ವಿಶ್ವಬ್ಯಾಂಕ್ ತಾವೇ ಸೃಷ್ಟಿಸಿಕೊಂಡಿರುವ ಗೋಜಲು ಮತ್ತು ಅದರ ಪರಿಣಾಮವಾಗಿ ಇಳಿಮುಖವಾಗುತ್ತಿರುವ ಬಡತನದ ಸುಳ್ಳು ದಾವೆಗಳು ಒಂದು ಸರಳ ತಾರ್ಕಿಕ ತಪ್ಪಿನ ಫಲಿತಾಂಶ. ಅವರು ಮೊದಲು ಬಡತನದ ರೇಖೆಗಳನ್ನು ಆರಂಭಿಕ ವರ್ಷದಲ್ಲಿ ಪೌಷ್ಟಿಕಾಂಶದ ಮಾನದಂಡಗಳ ಆಧಾರದ ಮೇಲೆ ಸರಿಯಾಗಿ ವ್ಯಾಖ್ಯಾನಿಸಿದರು, ಮತ್ತು ನಂತರದ ವರ್ಷಗಳಲ್ಲಿ ಅದನ್ನು ಅಸಂಗತ ರೀತಿಯಲ್ಲಿ ಬದಲಾಯಿಸಿದರು, ಪೌಷ್ಟಿಕಾಂಶದ ಮಾನದಂಡಗಳನ್ನು ಬಳಸಲಿಲ್ಲ. ಅವರು ಪ್ರತಿ ದೇಶಕ್ಕೂ ಇದನ್ನು ಮಾಡಿದ್ದಾರೆ. ಭಾರತದಲ್ಲಿ 1973-74 ರಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಪ್ರತಿದಿನ 2200 ಕ್ಯಾಲೊರಿಗಳನ್ನು ಮತ್ತು ನಗರ ಪ್ರದೇಶಗಳಲ್ಲಿ 2100 ಕ್ಯಾಲೊರಿಗಳನ್ನು ಪಡೆಯಲು ತಲಾ ಮಾಸಿಕ ಖರ್ಚು ಅನುಕ್ರಮವಾಗಿ ರೂ 49 ಮತ್ತು ರೂ 56.6 ಆಗಿತ್ತು, ಇದರಿಂದಾಗಿ ಅಧಿಕೃತ ಬಡತನದ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿ 56.4 ಶೇಕಡಾ ಮತ್ತು ನಗರಪ್ರದೇಶಗಳಲ್ಲಿ 49.2 ಶೇಕಡಾ. ಪೌಷ್ಟಿಕಾಂಶದ ಸೇವನೆಯ ಅಗತ್ಯ ದತ್ತಾಂಶ ಪ್ರತಿ ಐದು ವರ್ಷಗಳಿಗೊಮ್ಮೆ ಲಭ್ಯವಿದ್ದರೂ, ಪೌಷ್ಟಿಕಾಂಶದ ಮಾನದಂಡಗಳನ್ನು ನೇರವಾಗಿ ಬಳಸಿಕೊಂಡು ಬಡತನ ರೇಖೆಯನ್ನು ಲೆಕ್ಕ ಹಾಕುವ ವಿಧಾನವನ್ನು ಪುಟ 14 ಕ್ಕೆ

ನವ–ಉದಾರವಾದವು........ ಪುಟ 13 ರಿಂದ

ಮತ್ತೆಂದೂ ಬಳಸಲಿಲ್ಲ.

ಬದಲಿಗೆ ಈ ನಿರ್ದಿಷ್ಟ 1973ರ ಬಡತನ ರೇಖೆಗಳನ್ನು ಮೇಲೆ ವಿವರಿಸಿದಂತೆ ಬೆಲೆ ಸೂಚ್ಯಂಕಗಳನ್ನು ಬಳಸಿಕೊಂಡು ನಂತರದ ವರ್ಷಗಳಿಗೆ ಸರಳವಾಗಿ ಹೊಂದಿಸಲಾಗಿದೆ, ಪೌಷ್ಟಿಕಾಂಶದ ಮಾನದಂಡಗಳನ್ನು ತಲುಪಲಾಗಿದೆಯೇ ಅಥವಾ ಇಲ್ಲವೇ ಎಂದು ಎಂದಿಗೂ ಕೇಳಲೇ ಇಲ್ಲ. ಬಡತನ ರೇಖೆಯ ಒಂದು ನಿರೂಪಣೆಯೊಂದಿಗೆ ಆರಂಭಿಸಿ, ನಂತರ ಸದ್ದಿಲ್ಲದೆ ಇನ್ನೊಂದು ಸಂಪೂರ್ಣ ವಿಭಿನ್ನ ನಿರೂಪಣೆಗೆ ಬದಲಾಯಿಸುವುದು ಎಂದರೆ ಒಂದು ತಾರ್ಕಿಕ ಆಭಾಸ, ಅನುಮಾನಾಸ್ಪದ ತರ್ಕಾಭಾಸ. ಈ ಆಭಾಸಕಾರಿ ವಿಧಾನದಲ್ಲಿ 1973–74 ರಲ್ಲಿ ಲಭ್ಯವಿದ್ದ ಮತ್ತು ಬಳಸಿದ ಸರಕು ಮತ್ತು ಸೇವೆಗಳ ನಿರ್ದಿಷ್ಟ ಪಟ್ಟಿಯನ್ನು ಹಾಗೆಯೇ ಇರಿಸಲಾಗಿದೆ, 50 ವರ್ಷಗಳ ನಂತರವೂ ಅದೇ ಪಟ್ಟಿಯನ್ನು ಇಟ್ಟುಕೊಂಡು, ಬೆಲೆ ಸೂಚ್ಯಂಕವನ್ನು ಅನ್ವಯಿಸಲಾಗುತ್ತದೆಯಷ್ಟೇ.

ಆದರೆ, ವಾಸ್ತವದಲ್ಲಿ ಕಳೆದ ಮೂರು ದಶಕಗಳ ನವ–ಉದಾರವಾದಿ ಮಾರುಕಟ್ಟೆ ಸುಧಾರಣೆಗಳಿಂದಾಗಿ, ಅಂದರೆ ಹೆಚ್ಚೆಚ್ಚು ಖಾಸಗೀಕರಣ ಮತ್ತು ಮಾರುಕಟ್ಟೆಯೇ ಬೆಲೆ ನಿರ್ಧರಿಸುವುದರಿಂದಾಗಿ ಲಭ್ಯವಿರುವ ಸರಕು ಮತ್ತು ಸೇವೆಗಳ ಪಟ್ಟಿ ವೇಗವಾಗಿ ಬದಲಾಗಿದೆ. 50 ವರ್ಷಗಳ ಕಾಲ ಅದೇ ಪಟ್ಟಿಯನ್ನು ಅನುಸರಿಸುವುದು ಬಡತನದ ನೈಜ ಪ್ರವೃತ್ತಿಯನ್ನು ತಿಳಿಯದಂತೆ ಮಾಡುತ್ತದೆ, ಏಕೆಂದರೆ ಜನರು ಬಡತನದ ಅದೇ ಮಟ್ಟದಲ್ಲಿ ಉಳಿದಿದ್ದಾರೆಯೇ, ಅದು ಹದಗೆಟ್ಟಿದೆಯೇ ಅಥವಾ ಉತ್ತಮಗೊಂಡಿದೆಯೇ ಎಂಬುದು ಆಯಾಯ ಸಮಯದಲ್ಲಿ ಅವರಿಗೆ ಲಭ್ಯವಿರುವ ಸರಕು ಮತ್ತು ಸೇವೆಗಳ ಈ ಪಟ್ಟಿಯಲ್ಲಿ ಏನು ಬದಲಾವಣೆಯಾಗಿದೆ ಎಂಬುದರ ಮೇಲೆ ನಿರ್ಣಾಯಕವಾಗಿ ಅವಲಂಬಿತವಾಗಿದೆ. ಆರೋಗ್ಯ, ಶಿಕ್ಷಣ, ವಸತಿ ಮತ್ತು ಬಹಳಷ್ಟು ಉಪಯುಕ್ತತೆಗಳನ್ನು ಮಾರುಕಟ್ಟೆ ಬೆಲೆಗಳ ವಲಯದಿಂದ ತೆಗೆದುಹಾಕಿ, ಅವು ಸಾರ್ವಜನಿಕ ಸರಕುಗಳೆಂದು ಪರಿಗಣಿಸಲ್ಪಟ್ಟಿರುವ ಧೋರಣೆಗಳನ್ನು ಅನುಸರಿಸಿದ ದೇಶಗಳಲ್ಲಿ ಬಡತನವು ಗಮನಾರ್ಹವಾಗಿ ಇಳಿದಿದೆ ಅಥವಾ ಸಂಪೂರ್ಣವಾಗಿ ನಿವಾರಣೆಗೊಂಡಿದೆ. ಅಲ್ಲಿ ಉಚಿತ ಆರೋಗ್ಯಪಾಲನೆ ಮತ್ತು ಮಕ್ಕಳಿಗೆ ಕಡ್ಡಾಯ ಉಚಿತ ಶಿಕ್ಷಣ, ಅಥವಾ ಕೇವಲ ನಾಮಮಾತ್ರ ಶುಲ್ಕವನ್ನು ವಿಧಿಸಲಾಯಿತು. ಕಡಿಮೆ ಬಾಡಿಗೆಯೊಂದಿಗೆ ಕೈಗೆಟುಕುವ ಕಡಿಮೆ–ವೆಚ್ಚದ ವಸತಿ ನಿರ್ಮಾಣ, ಮತ್ತು ಸಾರ್ವಜನಿಕ ಸಾರಿಗೆ, ನೀರು, ಬೆಳಕು ಮತ್ತು ಅಡುಗೆ ಇಂಧನಗಳ ಮೇಲೆ ನಾಮಮಾತ್ರ ಶುಲ್ಕಗಳು, ಆಹಾರ, ತಯಾರಿಸಿದ ಅಗತ್ಯತೆಗಳು ಮತ್ತು ಮನರಂಜನೆಯ ಖರ್ಚುಗಳು ಕಡಿಮೆಯಾಗಿ ಕುಟುಂಬದ ಬಜೆಟಿನಿಂದ ಬಹಳಷ್ಟು ಹೊರೆಗಳು ಇಳಿದವು. ಹೀಗೆ ಸಾರ್ವಜನಿಕ ಸರಕುಗಳನ್ನು ಒದಗಿಸುವ ಕ್ರಮಗಳನ್ನು ಏಷ್ಯಾ ಮತ್ತು ಯುರೋಪಿನ ಸಮಾಜವಾದಿ ರಾಷ್ಟ್ರಗಳಲ್ಲಿ ಮಾತ್ರವಲ್ಲ; ಎರಡನೇ ಮಹಾಯುದ್ಧದ ನಂತರದ ಅವಧಿಯಲ್ಲಿ ಬಹುತೇಕ ಎಲ್ಲಾ ಪಾಶ್ಚಿಮಾತ್ಯ ಯುರೋಪಿಯನ್ ಬಂಡವಾಳಶಾಹಿ ರಾಷ್ಟ್ರಗಳಲ್ಲಿಯೂ ಕೈಗೊಳ್ಳಲಾಯಿತು.

ಕಷ್ಟಕರ ಸಂಗತಿಯೇನಲ್ಲ

ನಂತರ ತದ್ವಿರುದ್ಧವಾದುದೇ ನಡೆಯಿತು. ಜಾಗತಿಕ ದಕ್ಷಿಣದ ದೇಶಗಳಲ್ಲಿ ಮಾರುಕಟ್ಟೆ ಆಧಾರಿತ ಆರ್ಥಿಕ ಸುಧಾರಣೆಗಳನ್ನು ಕೈಗೊಳ್ಳುವುದರೊಂದಿಗೆ, ಲಭ್ಯವಿರುವ ಸರಕು ಮತ್ತು ಸೇವೆಗಳ ಪಟ್ಟಿಯಲ್ಲಿ ಗ್ರಾಹಕರಿಗೆ ಹಾನಿ ತರುವಂತಹ ತೀವ್ರ ಬದಲಾವಣೆಗಳಾದವು, ಏಕೆಂದರೆ ಈ ಕ್ರಮಗಳು ಆರೋಗ್ಯ, ಶಿಕ್ಷಣ ಮತ್ತು ಉಪಯುಕ್ತತೆಗಳನ್ನು ಸಾರ್ವಜನಿಕ ಸರಕುಗಳ ಪಟ್ಟಿಯಿಂದ ಗಣನೀಯವಾಗಿ ಅಥವಾ ಸಂಪೂರ್ಣವಾಗಿ ತೆಗೆದು ಹಾಕಿದವು. ಅವುಗಳನ್ನು ಮಾರುಕಟ್ಟೆ ಬೆಲೆಗಳಲ್ಲಿ ಪಡೆಯಬೇಕಾಗಿ ಬಂದಿದೆ. ಇದರ ಪರಿಣಾಮವಾಗಿ ಉಂಟಾದ ಕುಟುಂಬ ವೆಚ್ಚಗಳ ಹೆಚ್ಚಳವು ಬಹುಪಾಲು ಜನರಿಗೆ ಆಹಾರ ಮತ್ತು ಅಗತ್ಯ ವಸ್ತುಗಳ ಮೇಲೆ ಖರ್ಚು ಮಾಡಲು ಲಭ್ಯವಾಗುವ ಆದಾಯವನ್ನು ದೊಡ್ಡಪ್ರಮಾಣದಲ್ಲಿ ಇಳಿಸಿದೆ, ಹೆಚ್ಚೆಚ್ಚು ಜನರನ್ನು ಪೌಷ್ಟಿಕಾಂಶ ಪಡೆಯಲಾರದ ಒತ್ತಡಕ್ಕೆ ತಳ್ಳಿದೆ. 2016 ರ ನೋಟುರದ್ಧತಿಯಂತಹ ಅವಿವೇಕದ ಕ್ರಮಗಳು ಅಥವಾ 2021–22ರ ಮಹಾಸೋಂಕು–ಪ್ರೇರಿತ ಆರ್ಥಿಕ ಹಿಂಜರಿತ ಬಡತನದ ಸಮಸ್ಯೆಯನ್ನು ಉಲ್ಬಣಗೊಳಿಸಿವೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಈ ಘಟನೆಗಳೇ ಬಡತನದ ಏರಿಕೆಯ ಮೂಲ ಕಾರಣಗಳಲ್ಲ. ಅದಕ್ಕಿಂತ ಮೊದಲೇ ಇದು ಆರಂಭವಾಗಿತ್ತು.

ಪುನರ್ವಿತರಣಾ ಕ್ರಮಗಳ ಮೂಲಕ ಬಡತನವನ್ನು ಗಣನೀಯವಾಗಿ ಕಡಿಮೆ ಮಾಡುವುದು ಕಷ್ಟಕರವಾದ ಸಂಗತಿಯೇಯಲ್ಲ. ಭಾರತದ ಜನರಿಗೆ ಸಾಕಷ್ಟು ಆಹಾರ, ಮೂಲಭೂತ ಮತ್ತು ಸಮಗ್ರ ಆರೋಗ್ಯ, ಕಡ್ಡಾಯ ಉಚಿತ ಶಿಕ್ಷಣ, ಉದ್ಯೋಗ ಖಾತರಿ ಮತ್ತು ವೃದ್ಧಾಪ್ಯ ಪಿಂಚಣಿಗಳನ್ನು ಒದಗಿಸಲು ಭಾರತದ ಜಿಡಿಪಿಯ ಸುಮಾರು ಹತ್ತನೇ ಒಂದು ಭಾಗದಷ್ಟು ವಿನಿಯೋಗಿಸ ಬೇಕಾದೀತಷ್ಟೇ. ಇದಕ್ಕೆ ಜಿಡಿಪಿಯ ಶೇಕಡ 7ರಷ್ಟು ಹೆಚ್ಚುವರಿ ತೆರಿಗೆಯ ಅಗತ್ಯವಿದೆ. ಇದನ್ನು ಶ್ರೀಮಂತರು ಮತ್ತು ಅತಿ ಶ್ರೀಮಂತರು ಸುಲಭವಾಗಿ ಭರಿಸಬಹುದು. ಇದರೊಂದಿಗೆ ಈಗಿರುವ ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ 2013 ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯ ತೀವ್ರ ಅನುಷ್ಠಾನದಿಂದ ಬಡತನವನ್ನು ದೊಡ್ಡ ಪ್ರಮಾಣದಲ್ಲಿ ನಿಜವಾಗಿಯೂ ಇಳಿಸಬಹುದು. ಆದರೆ ಇದಕ್ಕೆ ಅತ್ಯಗತ್ಯ ಪೂರ್ವ–ಷರತ್ತೆಂದರೆ ಪ್ರಾಯೋಗಿಕ ಕೆಲಸಕ್ಕೆ ಮಾರ್ಗದರ್ಶನ ನೀಡುವ ಪರಿಕಲ್ಪನೆಗಳು ಮತ್ತು ಅವುಗಳನ್ನು ಆಧರಿಸಿದ ತೀರ್ಮಾನಗಳು. ರಾಷ್ಟ್ರೀಯವಾಗಿ ಮಾತ್ರವಲ್ಲದೆ ಅಂತರಾಷ್ಟ್ರೀಯವಾಗಿ ಪ್ರಚಲಿತದಲ್ಲಿರುವ ಬಡತನದ ತಪ್ಪಾದ ಮಾಪನವನ್ನು ಕೈಬಿಡಬೇಕು ಮತ್ತು ಬಡತನ ಇಳಿಕೆಯ ಹುಸಿ ದಾವೆಗಳ ಬದಲು ವಾಸ್ತವಿಕವಾದ ಮತ್ತು ತಾರ್ಕಿಕವಾಗಿ ಸರಿಯಾದ ಅಂದಾಜುಗಳನ್ನು ಮಾಡಬೇಕು.

ಅನು: ಕೆ.ವಿ.

ಸ್ಕೀಂ ಮತ್ತಿತರ ಸೇವಾದಾತರು........ ಪುಟ 16 ರಿಂದ

ಇಡುವುದು (ರಾಷ್ಟ್ರೀಯ ಆದಾಯವನ್ನು ಮೌಲ್ಯಗಳಲ್ಲಿ ಲೆಕ್ಕ ಹಾಕುವುದು), ಸಾಮಾಜಿಕ ವರ್ಗಗಳ ವಿಶ್ಲೇಷಣೆ, ಮತ್ತು ಕಾರ್ಮಿಕರನ್ನು ಸಂಘಟಿಸುವ ಪ್ರಾಯೋಗಿಕ ಹಾಗೂ ರಾಜಕೀಯ ತೀರ್ಮಾನಗಳ ದೃಷ್ಟಿಯಿಂದಲೂ ಪ್ರಮುಖ. ಉತ್ಪಾದಕ ಕಾರ್ಮಿಕರು ಮಾತ್ರ ಕಾರ್ಮಿಕ ವರ್ಗದ ಭಾಗವೇ? ಸಾಮಾಜಿಕ ಮಿಗುತಾಯ–ಮೌಲ್ಯಕ್ಕೆ ನೇರ ಕೊಡುಗೆ ಕೊಡುವ ಉತ್ಪಾದಕ ಕಾರ್ಮಿಕರು ಮತ್ತು ಅದನ್ನು ಹಂಚಿಕೊಳ್ಳುವ ಅನುತ್ಪಾದಕ (ವಿಶೇಷವಾಗಿ ಸರಕಾರಿ ಸೇವಾ) ಕಾರ್ಮಿಕರ ನಡುವೆ ಅದರಿಂದಾಗಿ ವೈರುಧ್ಯ ಇದೆಯೇ? ಈ ಪ್ರಶ್ನೆಗಳು ಆಗಾಗ ಏಳುತ್ತವೆ.

ಕಾರ್ಮಿಕರು ಅಥವಾ ಕಾರ್ಮಿಕ ವರ್ಗಕ್ಕೆ ಸೇರಿದವರು ಯಾರು ಎಂಬ ಪ್ರಶ್ನೆಗೆ ಎರಡು ವಿಪರೀತ ಉತ್ತರಗಳನ್ನು ಕೊಡಲಾಗುತ್ತದೆ. ಒಂದು ಕಡೆ ಕೈಗಾರಿಕಾ ಕಾರ್ಮಿಕರು ಮಾತ್ರ ಕಾರ್ಮಿಕರು ಎಂಬ ಅತಿ 'ಸಂಕುಚಿತ' ನಿರ್ವಚನೆ, ಇನ್ನೊಂದು ಕಡೆ ಎಲ್ಲ ವೇತನ ಪಡೆಯುವವರು ಕಾರ್ಮಿಕರು ಎಂಬ ಅತಿ 'ವಿಶಾಲ' ದೃಷ್ಟಿ. ಉತ್ಪಾದನಾ ಸಾಧನಗಳ ಒಡೆಯರಲ್ಲದೆ, ಅದನ್ನು ಪಡೆಯಲು ಶಕ್ತರಲ್ಲದೆ, ಬೇರೆ ಯಾವುದೇ ಜೀವನೋಪಾಯವಿಲ್ಲದೆ ಶ್ರಮ ಮಾರಲೇಬೇಕಾದ ಸಾಮಾಜಿಕ–ಆರ್ಥಿಕ ಒತ್ತಡಕ್ಕೆ ಒಳಗಾದವರು, ಎಂಬುದು 'ಬಂಡವಾಳ'ದಲ್ಲಿ ಮಾರ್ಕ್ಸ್ ಮಂಡಿಸಿದ ಮಾನದಂಡ. ಈ ಮಾನದಂಡದ ಪ್ರಕಾರ ಉತ್ಪಾದಕ, ಅನುತ್ಪಾದಕ ಕಾರ್ಮಿಕರ ಬಹುಪಾಲು ಕಾರ್ಮಿಕ ವರ್ಗಕ್ಕೆ ಸೇರುತ್ತಾರೆ. ಕೈಗಾರಿಕಾ ಕಾರ್ಮಿಕರಲ್ಲದೆ ಬ್ಯಾಂಕ್ ಗುಮಾಸ್ತರು, ಸರಕಾರಿ ಸೇವೆಯಲ್ಲಿರುವವರು, ಮಾರಾಟ ಕೆಲಸಗಾರರು, ಮನೆ ಕೆಲಸಗಾರರು – ಹೀಗೆ ಎಲ್ಲರೂ ಕಾರ್ಮಿಕ ವರ್ಗದ ಸದಸ್ಯರು. ಈ ಮಾನದಂಡದ ಪ್ರಕಾರ ಉನ್ನತ ವೇತನ ಮಟ್ಟದಿಂದಾಗಿ ಸಾಕಷ್ಟು ಹಣ ಸಂಚಯ ಮಾಡಿಕೊಂಡಿರುವ ಅಥವಾ ಇತರೇ ರೀತಿಯಲ್ಲಿ (ಭೂಮಿ, ಕಟ್ಟಡಗಳು, ಕಂಪನಿ ಶೇರು ಇತ್ಯಾದಿ ರೂಪದಲ್ಲಿ) ಆಸ್ತಿವಂತರಾಗಿದ್ದು ವ್ಯಾಪಾರ–ವಹಿವಾಟುಗಳಲ್ಲಿ ತೊಡಗಬಲ್ಲ, ಉತ್ಪಾದನಾ ಸಾಧನ ಕೊಳ್ಳಬಲ್ಲ, ಇತರ ಜೀವನೋಪಾಯಗಳ ಆಯ್ಕೆ ಇರುವವರು ಕಾರ್ಮಿಕ ವರ್ಗಕ್ಕೆ ಸೇರುವುದಿಲ್ಲ. ಸರಕಾರ, ಮಿಲಿಟರಿ, ಕೈಗಾರಿಕೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಅಧಿಕಾರಸ್ಥ ಸ್ಥಾನದಲ್ಲಿರುವವರು ವೇತನ ಪಡೆಯುವವರಾದರೂ ಸಹ ಕಾರ್ಮಿಕ ವರ್ಗಕ್ಕೆ ಸೇರುವುದಿಲ್ಲ.

ಹಿಂದೆ ಹೇಳಿದ ಮಾನದಂಡದ ಪ್ರಕಾರ ಉತ್ಪಾದಕ ಕಾರ್ಮಿಕರು ಸಾಮಾಜಿಕ ಮಿಗುತಾಯ–ಮೌಲ್ಯಕ್ಕೆ ಸಕ್ರಿಯವಾಗಿ ಕೊಡುಗೆ ಕೊಡುವವರಾಗಿದ್ದು, ಅದನ್ನು ಕನಿಷ್ಠಗೊಳಿಸುವುದರಲ್ಲಿ ಅವರ ವರ್ಗಹಿತ ಅಡಗಿರುತ್ತದೆ. ಅನುತ್ಪಾದಕ ಕಾರ್ಮಿಕರು ಒಟ್ಟು ಸಾಮಾಜಿಕ ಮಿಗುತಾಯ–ಮೌಲ್ಯವನ್ನು ಹಂಚಿಕೊಳ್ಳುವವರಾದ್ದರಿಂದ ಅದನ್ನು ಗರಿಷ್ಠಗೊಳಿಸುವುದರಲ್ಲಿ ಅವರ ವರ್ಗಹಿತ ಅಡಗಿರುತ್ತದೆ. ಇದು ಕಾರ್ಮಿಕರ ಈ ಎರಡು ವಿಭಾಗಗಳ ನಡುವೆ ವೈರುಧ್ಯವನ್ನು ತಂದಿಟ್ಟು ಕಾರ್ಮಿಕ ವರ್ಗದ ಐಕ್ಯತೆಗೆ ಧಕ್ಕೆ ತರುವುದಿಲ್ಲವೇ ಎಂಬ ಪ್ರಶ್ನೆ ಎತ್ತಲಾಗುತ್ತದೆ.

ಅನುತ್ಪಾದಕ ಕಾರ್ಮಿಕರ ವೇತನಗಳು ಸದ್ಯದಲ್ಲಿ ಉತ್ಪಾದಿಸಲಾಗುತ್ತಿರುವ ಮಿಗುತಾಯ–ಮೌಲ್ಯದ ಭಾಗದಿಂದ ಬರುವುದಿಲ್ಲ. ಅದು ಬರುವುದು ಹಿಂದಿನ ಸಂಚಯವಾಗಿರುವ ಮಿಗುತಾಯ–ಮೌಲ್ಯದ ಭಾಗದಿಂದ. ಹಾಗಾಗಿ ಉತ್ಪಾದಕ ಮತ್ತು ಅನುತ್ಪಾದಕ ಕಾರ್ಮಿಕರ ಹಿತಾಸಕ್ತಿಗಳ ನಡುವೆ ಯಾವುದೇ ವೈರುಧ್ಯವಿಲ್ಲ.

ಸರಕಾರಿ ನೌಕರರ ವೇತನ ಈಗಿನ (ಉತ್ಪಾದಕ ಸಾಮಾಜಿಕ ಬಂಡವಾಳದ) ಮಿಗುತಾಯ ಮೌಲ್ಯದಿಂದ ಕೊಡಲಾಗುತ್ತದೆ. ಆದರೆ ಅದು ಕಡಿಮೆಯಾದರೆ ಅಥವಾ ಸರಕಾರಿ ಖರ್ಚು ಕಡಿಮೆಯಾದರೆ ಸಾಮಾಜಿಕ ಮಿಗುತಾಯ ಮೌಲ್ಯ ಕಡಿಮೆಯಾಗಬಹುದು ಮತ್ತು 'ಉತ್ಪಾದಕ ಕ್ಷೇತ್ರ'ದ ಕಾರ್ಮಿಕರ ವೇತನ ಹೆಚ್ಚಳ ಆಗಬಹುದು ಎಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಸರಕಾರದ ಖರ್ಚುಗಳಲ್ಲಿ ಪ್ರಮುಖವಾಗಿ ಸೇರಿರುವ ಸಾಮಾಜಿಕ ಮೂಲಸೌಕರ್ಯ, ಶಿಕ್ಷಣ, ಆರೋಗ್ಯ, ಸಾರಿಗೆ ಇತ್ಯಾದಿ ಸಾರ್ವಜನಿಕ ಸೇವೆಗಳು ಕಾರ್ಮಿಕ ವರ್ಗ ಕಳೆದುಕೊಂಡ ವೇತನದ ಭಾಗ ಅಲ್ಲ. ವಾಸ್ತವದಲ್ಲಿ ಅದು ಕಾರ್ಮಿಕರ ಸಾಮಾಜೀಕೃತ ವೇತನದ ಭಾಗ ಅಂದರೆ ಹಣ–ವೇತನದ ಬದಲು ಉಚಿತ ಅಥವಾ ಸಬ್ಸಿಡಿ ನೀಡಿದ ಶಿಕ್ಷಣ–ಆರೋಗ್ಯ ಸೇವೆಯ ರೂಪದಲ್ಲಿ ಕೊಡಲಾಗಿದೆ. ಸರಕಾರಿ ಸೇರಿದಂತೆ ಸೇವಾ ಕಾರ್ಮಿಕರ ಮತ್ತು ಇತರ ಅನುತ್ಪಾದಕ ಕಾರ್ಮಿಕರ ಹೆಚ್ಚಳದೊಂದಿಗೆ ಉತ್ಪಾದಕ ಕಾರ್ಮಿಕರ ವೇತನ ಹೆಚ್ಚಳವಾಗುವುದು ಪ್ರಾಯೋಗಿಕವಾಗಿ ಕಂಡು ಬಂದಿದೆ. ಇದಕ್ಕೆ ಕಾರಣ ಬಹಳ ನಿಗೂಢವೇನಲ್ಲ. ಹಲವು ಬಗೆಯ ಅನುತ್ಪಾದಕ ಕಾರ್ಮಿಕರ ಹೆಚ್ಚಳದಿಂದ ಕೈಗಾರಿಕಾ ಮೀಸಲು ಪಡೆಯ ಕಡಿತವಾಗಿದೆ. ಹಾಗಾಗಿ ಉತ್ಪಾದಕ ಕಾರ್ಮಿಕರ ವೇತನ ಹೆಚ್ಚಳವಾಗುತ್ತಿದೆ.

ಅದು ಮಾತ್ರವಲ್ಲ, ಸರಕಾರಿ ಸಾಮಾಜಿಕ ವೆಚ್ಚಗಳ ಕಡಿತದ ವಿರುದ್ಧ ಕೈಗಾರಿಕಾ ಕಾರ್ಮಿಕರು ಸೇರಿದಂತೆ ಇಡೀ ಕಾರ್ಮಿಕ ವರ್ಗ ಹಲವು ದೇಶಗಳಲ್ಲಿ ಪ್ರತಿಭಟಿಸಿದೆ, ವಿರೋಧಿಸಿದೆ. ಉತ್ಪಾದಕ ಮತ್ತು ಅನುತ್ಪಾದಕ ಕಾರ್ಮಿಕರ ನಡುವಿನ ಐಕ್ಯತೆ ಕಾರ್ಮಿಕ ವರ್ಗದ ಸಹಜ ಪ್ರವೃತ್ತಿಯಾಗಿದೆ ಎಂದು ಇದು ತೋರಿಸುತ್ತದೆ.

ನಾರಾಯಣ ವೆಳಿಪ್‌ರಿಗೆ ನುಡಿನಮನ.... ಪುಟ 4 ರಿಂದ

ಎಲ್ಲಾ ಜನರ ಮಧ್ಯೆ ಹೇಳುತ್ತಿದ್ದರು.

ಇನ್ನೊಂದು ವಿಷಯ ಏನೆಂದರೆ, ಈ ಭಾಗದಲ್ಲಿ ಎರಡು ಬಾರಿ ಜಿಲ್ಲಾ ಪಂಚಾಯತ್, ತಾಲೂಕಾ ಪಂಚಾಯತ್ ಚುನಾವಣೆಗೆ ಸಿಪಿಐ(ಎಂ) ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿ ಉತ್ತಮ ಮತ ಪಡೆಯುವಂತೆ ಮಾಡುವಲ್ಲಿ ಇವರು ಸಂಘಟಿತವಾದ ಶಕ್ತಿಯ ಮೂಲಕ ಶ್ರಮ ಹಾಕಿದ್ದಾರೆ. ಮಾತ್ರವಲ್ಲ, ಸ್ವತಃ ಕಲಾಪೋಷಕರು, ತನ್ನ ಮನೆ ಅಂಗಳದಲ್ಲೇ ರಂಗಭೂಮಿ ನಿರ್ಮಿಸಿ ಹಲವು ಹತ್ತು ಬಗೆಯ ಕಾರ್ಯಕ್ರಮ ರೂಪಿಸಿ ಸಾಂದರ್ಭಿಕ ಮಹತ್ವದ ದಿನಗಳಲ್ಲಿ ಹಗಲು ರಾತ್ರಿ ಕಾರ್ಯಕ್ರಮ ಮಾಡುತ್ತಲೇ ಬಂದಿದ್ದಾರೆ. ಸರ್ಕಾರ ತಮ್ಮ ಕಲಾಪ್ರಕಾರ ಗುರ್ತಿಸಬೇಕೆಂದು ಚಿಂತನ ಉತ್ತರ ಕನ್ನಡ ಹಾಗೂ ಸಹಯಾನ ಸಂಸ್ಥೆಯ ಜೊತೆಗೆ ಹತ್ತಾರು ಬಾರಿ ಮನವಿ ಸಲ್ಲಿಸುವಾಗ, ಕಲಾವಿದರ ಮಾಶಾಸನ ಮಾಡಿಸುವಾಗ ಜೊತೆಯಾದವರು. ಹಾಗೆಯೇ ಈ ಭಾಗದ ಕುಂಡಲ್, ಕಾರ್ಟೋಳಿ, ಮುಡಿಯೆ ಇನ್ನಿತರ ಭಾಗದ ತಂಡವನ್ನು ವಿವಿಧ ಉತ್ಸವಗಳಿಗೆ ಕರೆದಾಗ ಬನವಾಸಿ, ಕಾರವಾರ, ಹಳಿಯಾಳ, ದಾಂಡೇಲಿ, ಹೊನ್ನಾವರ ಸಹಯಾನ ಕೆರೆಕೋಣ ಅನೇಕ ಕಡೆ ಹೋಗಿ ಬಂದರು. ಸಿಗ್ಮೆ ಖೇಳ್, ನವಮಿ ಖೇಳ್, ಕೋಲಾಟ, ಪುಗಡಿ ಬಲ್ಲವರು. ಜೋಯಿಡಾದ ಪ್ರತಿ ಹಳ್ಳಿಹಳ್ಳಿಗಳಲ್ಲಿ ಇವರು ಪರಿಚಿತರು. ಯಾವ ಹಳ್ಳಿಯಲ್ಲಿ ಏನೆಲ್ಲ ಸಮಸ್ಯೆಗಳಿವೆ ಎಂದು ಬಲ್ಲವರು. ಉತ್ತಮ ಕೃಷಿಕ, ಅರಣ್ಯ ಉತ್ಪನ್ನಗಳ ಮಾಹಿತಿ ಬಲ್ಲವರು ಮಾತ್ರವಲ್ಲ, ಬಿದಿರು ಬೆತ್ತ, ಬಯಿನೆ, ತಾಳೆ, ಈಚ್ಲು ಮರಮಟ್ಟುಗಳಿಂದ ವಿವಿಧ ರೀತಿಯ ವಸ್ತುಗಳ ಕುಶಲವಾಗಿ ಹೆಣೆಯಬಲ್ಲವರು. ಇವರ ಮನೆಜನರೆಲ್ಲ ಕಠಿಣ ಶ್ರಮಜೀವಿಗಳು. ಅಕ್ಕಿ, ಭತ್ತದ ಮುಡಿ ಕಟ್ಟುವುದರಲ್ಲೂ ಪಾಟ್ಸೋ (ಹಾಸಿಗೆ) ನೇಯುವಲ್ಲೂ ನಿಸ್ಸೀಮರು. ಗಡ್ಡೆ ಗೆಣಸು, ಕೆಸು (ಕೋನ್, ಮುಡ್ಲಿ, ಆಳು ಇತ್ಯಾದಿ) ಉಳ್ಳಾಗಡ್ಡೆ, ಬಗೆಬಗೆಯ ಹರಿವೆ, ಔಷಧ ಗಿಡಗಳ ಬೆಳೆಯುವಲ್ಲಿ ಈ ಆಜಾನುಬಾಹು, ಸರಳ ಸಜ್ಜನ ನಾರಾಯಣ್ ಮಾಮ್ ಕುಟುಂಬದ ಜೊತೆಗೆ ಮುಂಚೂಣಿಯಲ್ಲಿದ್ದವರು. ಚಳುವಳಿಯ ಕಾರಣಕ್ಕೆ ನಮಗೆಲ್ಲ ಈ ಮನೆ ಎಂದಿಗೂ ನಮ್ಮನೆಯಂತೆಯೇ ಮಾಡಿದ ಕಾಮ್ರೇಡ್ ನಾರಾಯಣ ವೆಳಿಪರಿಗೆ ಸಿಪಿಐ(ಎಂ) ಪಕ್ಷದ ಉತ್ತರ ಕನ್ನಡ ಜಿಲ್ಲಾ ಸಮಿತಿಯಿಂದ ಕೆಂಪು ನಮನಗಳನ್ನು ಸಲ್ಲಿಸಲಾಯಿತು.


–ಯಮುನಾ ಗಾಂವ್ಕರ್

ಮಹಾತ್ಮ ಗಾಂಧಿ ಕೊಲೆ: ಶಿಕ್ಷೆಯಿಂದ ಸಾವರ್ಕರ್ ತಪ್ಪಿಸಿಕೊಂಡದ್ದು ಹೇಗೆ?

"ಪುಣೆಯ ಚಿತ್ಪಾವನ ಬ್ರಾಹ್ಮಣ ಕುಟುಂಬದ ನಾಥುರಾಮ್ ಗೋಡ್ಸೆ 31, ಜನವರಿ 1948ರಂದು ಗಾಂಧಿಯನ್ನು ಹತ್ಯೆಗೈದ. ನಂತರ ಗೋಡ್ಸೆಯ ಜೊತೆಗೆ ವಿ.ಆರ್.ಕರ್ಕರೆ, ವಿನಾಯಕ ಸಾವರ್ಕರ್, ನಾರಾಯಣ ಅಪ್ಟೆ, ಗೋಪಾಲ್ ಗೋಡ್ಸೆ ಅವರನ್ನೂ ಸಹ ಹತ್ಯೆಯ ಈ ಸಂಚಿನಲ್ಲಿ ಭಾಗಿಗಗಳು ಎಂದು ಆರೋಪಿಸಿ ಬಂಧಿಸಲಾಯಿತು. ಆದರೆ ಸಾವರ್ಕರ್ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಬಿಡುಗಡೆಗೊಂಡರೆ ಗೋಪಾಲ್ ಗೋಡ್ಸೆಯ ಅಪರಾಧ ಸಾಬೀತಾಗಿ ಹದಿನೈದು ವರ್ಷಗಳ ಜೈಲು ಶಿಕ್ಷೆ ಅನುಭವಿಸಿದ.

ಸಾವರ್ಕರ್ ಶಿಕ್ಷೆಯಿಂದ ಪಾರಾದದ್ದು ಹೇಗೆಂದು ಎ.ಜಿ.ನೂರಾನಿಯವರು 30, ಜನವರಿ, 2003ರಲ್ಲಿ ದಿ ಹಿಂದೂ ಪತ್ರಿಕೆಗೆ ಬರೆದ ಲೇಖನದಲ್ಲಿ ವಿವರಿಸುತ್ತಾರೆ: "ನಾಥುರಾಮ್‌ಗಿಂತ ಹತ್ತು ದಿನಗಳ ಮುಂಚೆ ಮದನಲಾಲ್ ಪಾಹ್ವಾ 20, ಜನವರಿ 1948ರಂದು ಗಾಂಧಿಯ ಮೇಲೆ ಹತ್ಯೆ ನಡೆಸುವ ವಿಫಲ ಯತ್ನ ನಡೆಸುತ್ತಾನೆ. ಇದರ ಪಿತೂರಿಯ ಹಿಂದೆ ಸಾವರ್ಕರ್‌ನ ಕೈವಾಡವಿದೆಯೆಂದು ಶಂಕಿಸಲಾಯಿತು. ತನಿಖೆಗಳು ಈ ಶಂಕೆಯನ್ನು ಧೃಡಪಡಿಸಿದವು. ಸಾಕ್ಷಿಗಳೂ ಸಾವರ್ಕರನ ಕುರಿತು ಅನುಮಾನ ವ್ಯಕ್ತಪಡಿಸಿದವು.

ಆದರೂ ಸಾವರ್ಕರನು ಶಿಕ್ಷೆಯಿಂದ ಪಾರಾಗಿದ್ದು ಒಂದು ಪವಾಡ. ಆಗಿನ ಉಪ ಪ್ರಧಾನಿ ವಲ್ಲಭಾಯಿ ಪಟೇಲ್ ಅವರಿಗೂ ಸಾವರ್ಕರ್‌ನೆ ಅಪರಾಧಿ ಎಂದು ಧೃಡವಾಗಿತ್ತು. Freedom At Midnight(1976) ಎನ್ನುವ ಪುಸ್ತಕದಲ್ಲಿ ಲೇಖಕರಾದ ಲಾರಿ ಕಾಲಿನ್ಸ್ ಮತ್ತು



ಡಾಮಿನಿಕ್ ಲಾಪ್ಯೆರಿ ವ್ಯಾಪಕವಾದ ವಿವರಗಳನ್ನು ಕಲೆ ಹಾಕಿದ್ದಾರೆ. ಪೋಲೀಸರ ಇಂಟೆಲಿಜೆನ್ಸ್ ವರದಿಗಳು ಮತ್ತು ಬದುಕುಳಿದವರ ಸಾಕ್ಷಿಗಳ ಅನುಸಾರ ಮದನ್‌ಲಾಲ್ ತಾನು ಗಾಂಧಿ ಹತ್ಯೆಗೆ ಪ್ರಯತ್ನಿಸುವ ಮುನ್ನ ಸಾವರ್ಕರ್‌ನನ್ನು ಭೇಟಿ ಮಾಡಿದ್ದೆ ಮತ್ತು ಆತನಿಗೆ ಗೋಡ್ಸೆ ಕುರಿತಾಗಿ ತಿಳಿಸಿದ್ದೆ. ಅದು 'ಹಿಂದೂ ರಾಷ್ಟ್ರ', ಮರಾಠಿ ದಿನಪತ್ರಿಕೆಯ ಸಂಪಾದಕರು: ಎನ್.ವಿ.ಗೋಡ್ಸೆ, ಮಾಲೀಕರು: ಎನ್.ಡಿ. ಅಪ್ಟೆ, ಸಾವರ್ಕರ್‌ವಾದಿ ಗುಂಪಿನ ದಿನಪತ್ರಿಕೆ" ಇದಕ್ಕಿಂತಲೂ ಮುಖ್ಯವಾದ ಸಾಕ್ಷಿ ತನಿಖಾಧಿಕಾರಿಗಳಿಗೆ ದೊರಕಲಾರದೇನೋ.

ನಂತರ ಆಗಿನ ಬಾಂಬೆ ಪ್ರಾಂತದ ಗೃಹ ಮಂತ್ರಿಯಾಗಿದ್ದ ಮುರಾರ್ಜಿ ದೇಸಾಯಿಯವರು ಜಮ್ಶಿದ್ ನಾಗನ್‌ವಾಲ್ಲಾ ಎನ್ನುವ ಹಿರಿಯ ಸಿ.ಐ.ಡಿ. ಪೋಲೀಸ್ ಅಧಿಕಾರಿಗೆ ಈ ತನಿಖೆಯ ಕೇಸ್ ಅನ್ನು ಒಪ್ಪಿಸಿದರು. ತನಿಖೆಯ ಸಂದರ್ಭದಲ್ಲಿ ಈ ಪೋಲೀಸ್ ಅಧಿಕಾರಿಗೆ ಸಾವರ್ಕರನೂ ಈ ಪಿತೂರಿಯಲ್ಲಿ ಭಾಗಿಯಾಗಿರುವುದು ಧೃಢವಾದ ನಂತರ ಸಾವರ್ಕರನನ್ನೂ ವಿಚಾರಣೆಗೆ ಒಳಪಡಿಸಲು ಮೊರಾರ್ಜಿ ದೇಸಾಯಿಯವರ ಅನುಮತಿ ಕೇಳಿದರು. ಮೊರಾರ್ಜಿಯವರು ಸಿಟ್ಟಿನಿಂದಲೇ ಈ ಮನವಿಯನ್ನು ತಿರಸ್ಕರಿಸಿದರು. ಆದರೂ ಹಿರಿಯ ಪೊಲೀಸ್ ಅಧಿಕಾರಿಯ ತಂಡ ಸಾವರ್ಕರ್‌ನ ಮನೆ ಮತ್ತು ಚಲನವಲನಗಳ ಮೇಲೆ ಕಣ್ಗಾವಲನ್ನು ಇಟ್ಟಿತ್ತು.

ಗಾಂಧಿ ಹತ್ಯೆಯ ಕೆಲವೇ ದಿನಗಳ ನಂತರ ಸಾವರ್ಕರನು, ಪೊಲೀಸ್ ಇಲಾಖೆಗೆ 22, 1948ರಂದು "ಅವರು ಬಯಸುವವರೆಗೂ ತಾನು ರಾಜಕೀಯ ಚಟುವಟಿಕೆಗಳಿಂದ ದೂರವಿರುತ್ತೇನೆ" ಎಂದು ಮುಚ್ಚಳಿಕೆಯನ್ನು ಬರೆದುಕೊಟ್ಟ. ನಂತರ ನಡೆದ ವಿಚಾರಣೆಯ ಸಂದರ್ಭದಲ್ಲಿ ದಿಗಂಬರ್ ಬಾಡ್ಗೆ ಅವರು ಮುಖ್ಯ ಸಾಕ್ಷಿಯಾಗಿದ್ದರು. ಸಾವರ್ಕರ್‌ನನ್ನು ತಾನು ಭೇಟಿ ಆಗುತ್ತಿರುವುದನ್ನು ದಿಗಂಬರ್ ಸಾಕ್ಷಿ ನುಡಿದಾಗ ಇನ್ನೂ ಇಬ್ಬರು ಸಾಕ್ಷಿಗಳು ಅದನ್ನು ಧೃಢಪಡಿಸಿದರು.

ಮುಖ್ಯವಾಗಿ ಗೋಡ್ಸೆ ಮತ್ತು ಆತನ ಸಂಗಾತಿ ನಾರಾಯಣ ಅಪ್ಟೆ ಜನವರಿ, 14, 1948ರಂದು ಸಾವರ್ಕರ್‌ನನ್ನು ಭೇಟಿಯಾಗಿದ್ದರು. ಪ್ರತಿಯೊಂದು ಭೇಟಿಯ ಸಂದರ್ಭದಲ್ಲಿ ಬಾಡ್ಗೆನನ್ನು ಮನೆಯ ಹೊರಗೆ ನಿಲ್ಲಲು ಸೂಚಿಸುತ್ತಿದ್ದರು ಮತ್ತು ಆ ಭೇಟಿಯ ವೇಳೆಯಲ್ಲಿ ಸಾವರ್ಕರ್ "ಯಶಸ್ವಿಯಾಗಿ ಮರಳಿ ಬನ್ನಿ" ಎಂದು ಹಾರೈಸಿದ್ದು ನನ್ನ ಕಿವಿಗೆ ಕೇಳಿಬಂತು ಎಂದು ದಿಗಂಬರ್ ಸಾಕ್ಷಿ ನುಡಿದಾಗ ಅದನ್ನು ಪುರಸ್ಕರಿಸಲು ಮಿಕ್ಕ ಸಾಕ್ಷಿಗಳನ್ನು ಕೋರ್ಟ್‌ಗೆ ಹಾಜರುಪಡಿಸಲಿಲ್ಲ. ಇನ್ನುಳಿದ ಇಬ್ಬರು ಸಾಕ್ಷಿಗಳು ಆ ಮೂವರು ಮನೆಯ ಮುಂದೆ ಇಳಿದದ್ದು ಮಾತ್ರ ನಿಜ ನಂತರ ನಮಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿದರು.

ಹೀಗಾಗಿ ಸೂಕ್ತ ಸಾಕ್ಷಿಗಳಿಲ್ಲವೆಂದು ಸಾವರ್ಕರ್ ಖುಲಾಸೆ ಗೊಂಡ. ಆದರೆ ಸಾವರ್ಕರ್ ತೀರಿಕೊಂಡು ಎರಡು ವರ್ಷಗಳ ನಂತರ ಆತನ ಅಂಗರಕ್ಷಕನಾಗಿದ್ದ ಅಪ್ಪೆ ರಾಮಚಂದ್ರ ಕಸರ್ ಮತ್ತು ಅವನ ಸೆಕ್ರೆಟರಿ ವಿಷ್ಣು ದಾಮ್ಲೆ ಇವರಿಬ್ಬರು ಕಪೂರ್ ಕಮಿಷನ್ ಮುಂದೆ ಹಾಜರಾಗಿ "ಅಪ್ಟೆ ಮತ್ತು ಗೋಡ್ಸೆ ಸಾವರ್ಕರ್‌ನನ್ನು ಬಾಂಬೆ (ಮುಂಬೈ)ನಲ್ಲಿ ನಿಯಮಿತವಾಗಿ ಭೇಟಿ ಆಗುತ್ತಿದ್ದರು. ಕರ್ಕರೆ ಮತ್ತು ದಿಗಂಬರ್ ಬಡ್ಗೆ ಸಹ ನಿಯಮಿತವಾಗಿ ಸಾವರ್ಕರ್ ಅವನನ್ನು ಭೇಟಿ ಮಾಡುತ್ತಿದ್ದರು" ಎಂದು ಸಾಕ್ಷಿ ನುಡಿದಿದ್ದರು ಮತ್ತು ಆಯೋಗವು "ಈ ಎಲ್ಲಾ ಸಾಕ್ಷಿಗಳು ಗಾಂಧಿ ಹತ್ಯೆಯ ಆರೋಪಿಗಳು ಸಾವರ್ಕರ್ ಒಡನಾಡಿಗಳಾಗಿದ್ದರು ಎಂದು ಸಾಬೀತಾಗುತ್ತದೆ. 1946, 1947, 1948 ರ ವರ್ಷಗಳಲ್ಲಿನ ಸಾರ್ವಜನಿಕ ಸಮಾರಂಭಗಳಲ್ಲಿ ಗೋಡ್ಸೆ ಕಾಣಿಸಿಕೊಂಡಿದ್ದ" ಎಂದು ತೀರ್ಪನ್ನು ಕೊಟ್ಟಿದೆ. ಆದರೆ ಈ ಎಲ್ಲಾ ಸಾಕ್ಷಿಗಳನ್ನು ಸಾವರ್ಕರ್ ಬದುಕಿರುವಾಗಲೇ ಕೋರ್ಟಿನಲ್ಲಿ ಹಾಜರುಪಡಿಸಿದ್ದರೆ ಸಾವರ್ಕರ್ ಆರೋಪಿ ಎಂದು ಸಾಬೀತಾಗುತ್ತಿತ್ತು.

(ಹಿಂದುತ್ವ ರಾಜಕಾರಣ–ಅಂದು, ಇಂದು, ಮುಂದು' ಪುಸ್ತಕದಿಂದ)

ಪಿತ್ರೋಡಾ ಹೇಳಿದ್ದರಲ್ಲಿ ತಪ್ಪೇನಿದೆ? 'ದಕ್ಷಿಣ(ಭಾರತ)ದವರು ಆಫ್ರಿಕನ್ನರಂತೆ ಕಾಣಬಹುದು' ಎಂಬ ಮಾತಿನಲ್ಲಿ ಜನಾಂಗೀಯ ನಿಂದನೆ ಏನಿದೆ?

ನಾಗೇಶ ಹೆಗಡೆ
ವಿಜ್ಞಾನಿಗಳು, ವಿಜ್ಞಾನ ಲೇಖಕರು,

ಇತ್ತೀಚೆಗೆ ಭಾರತದ ಜನಾಂಗೀಯ ವೈವಿಧ್ಯತೆ ಬಗೆಗೆ ಕಾಂಗ್ರೆಸ್ ಪಕ್ಷದ ಸಾಗರೋತ್ತರ ಘಟಕದ ಅಧ್ಯಕ್ಷರಾಗಿದ್ದ ಸ್ಯಾಮ್ ಪಿತ್ರೋಡಾ ಎಂದೇ ಹೆಸರಾದ ಸತ್ಯನಾರಾಯಣ ಗಂಗಾರಾಮ್ ಪಿತ್ರೋಡಾ ಅವರ ಹೇಳಿಕೆಯನ್ನು ವಿವಾದಗೊಳಿಸಲಾಯಿತು. ಕಾಂಗ್ರೆಸ್ ಪಕ್ಷ ಸಹ ಪಿತ್ರೋಡಾ ಅವರ ಹೇಳಿಕೆಯನ್ನು ಸಮರ್ಥಿಸಿಕೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ ಕನ್ನಡದ ಹಿರಿಯ ವಿಜ್ಞಾನ ಲೇಖಕರಾದ ನಾಗೇಶ ಹೆಗಡೆಯವರು ಬರೆದ ಒಂದು ಬರಹ.

"ಜಗತ್ತಿನಲ್ಲೇ ನಮ್ಮಂಥ ಚಂದದ ಪ್ರಜಾತಂತ್ರ ಬೇರೊಂದಿಲ್ಲ. ನಮ್ಮ ದೇಶದಲ್ಲಿ ಇಷ್ಟೊಂದು ವೈವಿಧ್ಯಮಯ ಜನಾಂಗದವರಿದ್ದರೂ ಇಡೀ ದೇಶ ಒಗ್ಗಟ್ಟಾಗಿ ಕಳೆದ 70–75 ವರ್ಷಗಳಿಂದ ನಾವು ಸಂತೋಷದಿಂದ, ಸಾಮರಸ್ಯದಿಂದ ಬದುಕಿದ್ದೇವೆ. ಎಲ್ಲೋ ಅಪರೂಪಕ್ಕೆ ಅಲ್ಲೊಂದು ಇಲ್ಲೊಂದು ಘಟನೆಗಳಾಗಿದ್ದನ್ನು ಬಿಟ್ಟರೆ ನಾವೆಲ್ಲ ಒಂದಾಗಿ ಬದುಕುತ್ತಿದ್ದೇವೆ.

"ಈ ದೇಶದ ಪೂರ್ವಭಾಗದ ಜನರು ಚೀನೀಯರಂತಿರಬಹುದು; ಪಶ್ಚಿಮದವರು ಅರಬ್‌ರಂತೆ ಕಾಣಬಹುದು; ಉತ್ತರದವರು ತುಸು ಹೆಚ್ಚುಕಮ್ಮಿ ಬಿಳಿಯರಂತಿರಬಹುದು; ದಕ್ಷಿಣದವರು ಆಫ್ರಿಕನ್ನರಂತೆ ಕಾಣಬಹುದು. ಅದು ಇಲ್ಲಿ ಮುಖ್ಯ ಅಲ್ಲವೇ ಅಲ್ಲ, ನಾವೆಲ್ಲ ಸೋದರ ಸೋದರಿಯರು. ನಾವೆಲ್ಲ ಬೇರೆ ಬೇರೆ ಭಾಷೆಗಳನ್ನು ಗೌರವಿಸುತ್ತೇವೆ. ಬೇರೆ ಬೇರೆ ಚಹರೆಗಳನ್ನು, ಸಂಸ್ಕೃತಿಯನ್ನು, ಆಹಾರ ಪದ್ಧತಿಯನ್ನು ಗೌರವಿಸುತ್ತೇವೆ. ನಾನು ಗುಜರಾತಿಯಾಗಿದ್ದರೂ ನನಗೆ ದೋಸೆ ಎಂದರೆ ಪ್ರೀತಿ. ಇಡ್ಲಿ ಎಂದರೆ ಇಷ್ಟ. ಅದು ನಮ್ಮ ಭಾರತ...."


ಇದರಲ್ಲಿ ತಪ್ಪು ಹುಡುಕುವಂಥದ್ದು ಏನಿದೆ? "ದಕ್ಷಿಣ(ಭಾರತ)ದವರು ಆಫ್ರಿಕನ್ನರಂತೆ ಕಾಣಬಹುದು" ಎಂಬ ಅವರ ಮಾತಿನಲ್ಲಿ ಜನಾಂಗೀಯ ನಿಂದನೆ ಏನಿದೆ? ಇಡೀ ಮಾನವ ಕುಲವೇ ಆಫ್ರಿಕಾದಿಂದ ಉಗಮವಾಗಿದೆ. ಅದು ನಮ್ಮೆಲ್ಲರ ಮೂಲ ಮಾತೃಭೂಮಿ.

'ಆಫ್ರಿಕದ ಜನ ಕಪ್ಪು; ಅವರು ಕಳಪೆ ದರ್ಜೆಯ ನಾಗರಿಕರು' ಎಂಬ ಧೋರಣೆಯನ್ನು ಬದಲಿಸಬೇಕೆಂಬ ಹೋರಾಟಕ್ಕೆ 150 ವರ್ಷಗಳ ಇತಿಹಾಸವಿದೆ. ಬಿಳಿಯರು ಅವರನ್ನು ಪ್ರಾಣಿಗಳಂತೆ ಪರಿಗಣಿಸಿ ಗುಲಾಮರಂತೆ ಖರೀದಿಸಿ, ದುಡಿಸಿಕೊಳ್ಳುತ್ತಿದ್ದರು.

ಅಮೆರಿಕದ ಸಂವಿಧಾನದಲ್ಲಿ 1865ರಲ್ಲಿ ಬದಲಾವಣೆ ತಂದು ಗುಲಾಮಗಿರಿಯ ನಿವಾರಣೆ ಮಾಡಲಾಯಿತು. ವರ್ಣಭೇದ ನೀತಿ ಇಡೀ ಮಾನವ ಕುಲಕ್ಕೆ ಕಲಂಕ ಎಂದು ವಿಶ್ವಸಂಸ್ಥೆ ಘೋಷಿಸಿದರೂ ದಕ್ಷಿಣ ಆಫ್ರಿಕಾದಲ್ಲಿ ಅದು 1991ರವರೆಗೂ ಮುಂದುವರೆಯಿತು. ಅದರ ವಿರುದ್ಧ ಹೋರಾಡಿ 25 ವರ್ಷ ಜೈಲಲ್ಲಿದ್ದ ನೆಲ್ಸನ್ ಮಂಡೇಲಾ ಅಧ್ಯಕ್ಷರಾದರು.– ಇಡೀ ಜಗತ್ತೇ ಕೊಂಡಾಡಿತು.

ವಾಸ್ತವ ಹೀಗಿದೆ: ಆಫ್ರಿಕಾದ ಇಥಿಯೋಪಿಯಾದಲ್ಲಿ ಏಳೆಂಟು ಲಕ್ಷ ವರ್ಷಗಳ ಹಿಂದೆ ಸಣ್ಣ ಗುಂಪಿನಲ್ಲಿದ್ದ ಹೋಮೋ ಸೇಪಿಯನ್ಸ್ ಅಲ್ಲಿಂದ ಬೇರೆ ಬೇರೆ ದಿಕ್ಕಿಗೆ ವಲಸೆ ಹೊರಟರು. ಸುಮಾರು 65 ಸಾವಿರ ವರ್ಷಗಳ ಹಿಂದೆ ಹೊರಟ ಒಂದು ಕವಲು ನಮ್ಮ ಭೂಭಾಗದ ಕಡಲಂಚಿಗೆ ಸಾಗುತ್ತ ಶ್ರೀಲಂಕಾ, ತಮಿಳುನಾಡು, ಅಂಡಮಾನ್, ಬಾಂಗ್ಲಾ, ಬರ್ಮಾ, ಇಂಡೋನೇಶ್ಯ ಕಡಲ ತೀರದ ಗುಂಟ ಆಸ್ಟ್ರೇಲಿಯಾಕ್ಕೂ ಹೋಯಿತು.

ಆನಂತರ ಅದೆಷ್ಟೂ ಸಾವಿರ ವರ್ಷಗಳಲ್ಲಿ ಬೇರೆ ಬೇರೆ ಮಾರ್ಗಗಳಿಂದ ಇತರ ತಂಡಗಳೂ ಬಂದು, ಈಗಂತೂ ನಾವು ಸಾಕಷ್ಟು ವರ್ಣಗಳ ಮಿಶ್ರತಳಿಗಳಾಗಿದ್ದೇವೆ. 'ಫೇರ್ ಅಂಡ್ ಲವ್ಲಿ' ಮುಲಾಮನ್ನು (ಈಗ ಅದರ ಹೆಸರು ಬದಲಾಗಿದೆ) ಅದೆಷ್ಟೇ ಬಳಿದುಕೊಂಡರೂ ಮೂಲನಿವಾಸಿಗಳ ಛಾಯೆ ಅಲ್ಲಲ್ಲಿ ಉಳಿದಿದೆ.



ಮೂಲಛಾಯೆಯನ್ನು ಈಗಲೂ ಉಳಿಸಿಕೊಂಡವರನ್ನೂ ನಾವು ಗೌರವಿಸುತ್ತೇವೆ. ರಾಷ್ಟ್ರಪತಿಯ ಹುದ್ದೆಗೂ ಏರಿಸುತ್ತೇವೆ. ಆದರೂ ಪ್ರಧಾನಿಯವರು ಇಷ್ಟೊಂದು ರೊಚ್ಚಿನ ಮಾತಾಡಿದ್ದು ಯಾಕೆ? ಪಿತ್ರೋಡಾ ಅವರ ಮಾತಿನಲ್ಲಿ ವರ್ಣಭೇದದ ಛಾಯೆ ಇವರಿಗೆ ಹೇಗೆ ಕಂಡಿತು?

ಅದಕ್ಕಿಂತ ಮುಖ್ಯ ಎಂದರೆ, ಕಾಂಗ್ರೆಸ್ ಪಕ್ಷ ಕೂಡ ಪಿತ್ರೋಡಾ ಹೇಳಿದ್ದನ್ನು ಗಟ್ಟಿ ಧ್ವನಿಯಲ್ಲಿ ಸಮರ್ಥಿಸಿಕೊಳ್ಳುವ ಬದಲು ದೂರ ಸರಿದಿದ್ದೇಕೆ? ತಲೆತಗ್ಗಿಸುವಂಥದ್ದು ಏನಿದೆ ಇದರಲ್ಲಿ?

'ನಾವು ಆಫ್ರಿಕದ ಆ ಪೂರ್ವಜರಿಂದ ಬಂದವರಲ್ಲ; ನಮ್ಮನ್ನು ಹಾಗೆಲ್ಲ ಹಂಗಿಸಬೇಡಿ, ನಮ್ಮದು ಆರ್ಯರ ರಕ್ತ' ಎಂದು ನಂಬಿದವರು ಮಾತ್ರ ಪಿತ್ರೋಡಾ ಮಾತಿಗೆ ಆಕ್ಷೇಪ ಎತ್ತಬಹುದು.

ಎಂಥ ದುರಂತ ನೋಡಿ!

('ದಿ ಸ್ಟೇಟ್ಸ್‌ಮನ್' ಪತ್ರಿಕೆಗೆ ಪಿತ್ರೋಡಾ ನೀಡಿದ ಸಂದರ್ಶನ ಇಲ್ಲಿದೆ. ಮೊದಲ ಎರಡೂವರೆ ನಿಮಿಷಗಳಲ್ಲಿ ಬಂದ ಅವರ ಮಾತನ್ನೇ ರಾಜಕಾರಣಿಗಳು ಖಂಡಿಸಿದ್ದಾರೆ. ಹತ್ತು ನಿಮಿಷಗಳಷ್ಟು ಕೇಳಿಸಿಕೊಂಡರೆ ಪ್ರಧಾನಿಯವರ ಕೋಪಕ್ಕೆ ಕಾರಣ ಗೊತ್ತಾಗುತ್ತದೆ. ನಮ್ಮ ಮಾಧ್ಯಮಗಳ ಅವನತಿಯ ಬಗ್ಗೆ ಜುಗುಪ್ಸೆ ಹುಟ್ಟುತ್ತದೆ. ಪೂರ್ತಿ ಸಂದರ್ಶನವನ್ನು ಕೇಳಿದರೆ ಸ್ವತಂತ್ರ ಭಾರತದ ಚರಿತ್ರೆಯ ಬಗ್ಗೆ ನಮಗೆ ಹೆಮ್ಮೆ ಮೂಡುತ್ತದೆ.)

https://www.youtube.com/watch?v=LpQ8wa_PpiU
Attachments area
Preview YouTube video Sam Pitroda in conversation with The Statesman about Congress prospects in #elections 2024

NEW No. MAG(3)/NPP/205/2021-2022
JANASHAKTHI KANNADA VARA PATRIKE June 3-9, 2024 Price: Rs. 10/- Date of Publication: 31 May 2024 RNI No. KARKAN /2006/17926 Posted on 04-06-2024
Posted at BG PSO, BG - 560026 **Posted at Periodical Rate -** Rs. 2

ಸ್ಕೀಂ ಮತ್ತಿತರ ಸೇವಾದಾತರು 'ಉತ್ಪಾದಕ' ಕಾರ್ಮಿಕರಲ್ಲವೇ?

ವಸಂತರಾಜ ಎನ್.ಕೆ.

ಮಾರ್ಕ್ಸ್ ಅವರ ಮೇರುಕೃತಿಯೆಂದು ಕರೆಯಲಾಗುವ 'ಬಂಡವಾಳ' (ದಾಸ್ ಕ್ಯಾಪಿಟಲ್)ದ ಸಂಪುಟ 2ರ ಕನ್ನಡ ಅನುವಾದವಾಗಿದ್ದು ಅದನ್ನು ಜೂನ್ 2ರಂದು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಗಿದೆ. ಮಾರ್ಕ್ಸ್‌ವಾದ ಸಾಮಾನ್ಯವಾಗಿ ಮತ್ತು 'ಬಂಡವಾಳ' ಗ್ರಂಥ ನಿರ್ದಿಷ್ಟವಾಗಿ 19ನೇ ಶತಮಾನದ ಕೈಗಾರಿಕಾ ಬಂಡವಾಳಶಾಹಿ ವ್ಯವಸ್ಥೆಯ ಸಿದ್ಧಾಂತ. ಅಗಾಧ ಬದಲಾವಣೆಗಳನ್ನು ಕಂಡಿರುವ ಇಂದಿನ ಬಂಡವಾಳಶಾಹಿ ವ್ಯವಸ್ಥೆಯ ವಿಶ್ಲೇಷಣೆಗಳಿಗೆ ಅದು ಸೂಕ್ತವಲ್ಲ, ಹಾಗಾಗಿ ಅದು ಪ್ರಸ್ತುತವಲ್ಲ ಅಂತ ಒಂದು ಸಾಮಾನ್ಯ ಟೀಕೆಯಿದೆ. ಬಂಡವಾಳ ಸಂಪುಟ 2 ರ ಪ್ರವೇಶಿಕೆಯಿಂದ ಈ ಮೇಲಿನ ಪ್ರಶ್ನೆಗಳಿಗೆ ಉತ್ತರಿಸುವ ಆಯ್ದ ಭಾಗ ನೀಡುವ ಈ ಬರಹ, 'ಬಂಡವಾಳ' ಗ್ರಂಥ ಸೇವಾ ಕ್ಷೇತ್ರವನ್ನು ಪರಿಗಣಿಸುವುದಿಲ್ಲ ಮತ್ತು ಸೇವಾದಾತ ಶ್ರಮಿಕರು 'ಉತ್ಪಾದಕ' ಕಾರ್ಮಿಕರಲ್ಲ ಎಂಬ ನಿರ್ದಿಷ್ಟ ಟೀಕೆಯನ್ನು ಅಲ್ಲಗಳೆಯುತ್ತದೆ.

ಇಂದಿನ ಒಟ್ಟು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಕೈಗಾರಿಕಾ ಉತ್ಪಾದನೆ ಅಥವಾ ನೇರ ಉತ್ಪಾದನೆ ಸಣ್ಣ ಪಾತ್ರ ವಹಿಸುತ್ತದೆ. ಉದಾಹರಣೆಗೆ ಕರ್ನಾಟಕದ ಇತ್ತೀಚಿನ ವರ್ಷಗಳ ಆರ್ಥಿಕದಲ್ಲಿ ಕೃಷಿ (1/12 ಪಾಲು) ಮತ್ತು ಕೈಗಾರಿಕಾ ಉತ್ಪನ್ನಗಳ (1/5 ಪಾಲು) ನೇರ ಉತ್ಪಾದನೆಯ ಕೊಡುಗೆ ರಾಜ್ಯದ ಜಿಡಿಪಿಯ ಮೂರರಲ್ಲಿ ಸುಮಾರು ಒಂದು ಭಾಗ ಇದ್ದರೆ, ಮೂರರಲ್ಲಿ ಎರಡರಷ್ಟು ದೊಡ್ಡ ಭಾಗ ಸೇವಾ ಕ್ಷೇತ್ರದ ಕೊಡುಗೆ ಇದೆ.

'ಬಂಡವಾಳ' ಗ್ರಂಥ ಸೇವಾ ಕ್ಷೇತ್ರದ ಬಗ್ಗೆ ವಿಶ್ಲೇಷಿಸುತ್ತದೆಯೇ? ಸರಕು ಉತ್ಪಾದನೆಯಲ್ಲಿ ಮಿಗುತಾಯ ಮೌಲ್ಯ ಕಿತ್ತುಕೊಳ್ಳುವ ಶೋಷಣೆಯ ಸಿದ್ಧಾಂತ, ವಸ್ತುರೂಪದ ಉತ್ಪನ್ನದಲ್ಲಿರುವ ಸೇವಾ ಕ್ಷೇತ್ರದ ಕಾರ್ಮಿಕರಿಗೆ ಅನ್ವಯಿಸುತ್ತದೆಯೆ? ಭಾರಿ ಪ್ರಮಾಣದಲ್ಲಿ ಬೆಳೆದಿರುವ ಬ್ಯಾಂಕ್, ಇನ್ಶೂರೆನ್ಸ್, ಟೆಲಿಕಾಂ, ಇಂಟರ್ ನೆಟ್ ಸಂಪರ್ಕ ಇತ್ಯಾದಿ ಸೇವಾ ಕ್ಷೇತ್ರಗಳಿಗೆ 'ಬಂಡವಾಳ'ದಲ್ಲಿ ನಿರೂಪಿಸಿರುವ ವಿಶ್ಲೇಷಣೆ, ಸಿದ್ಧಾಂತ ಅನ್ವಯವಾಗುತ್ತದೆಯೆ? ಶಿಕ್ಷಣ, ಆರೋಗ್ಯ, ಸಾಮಾನ್ಯ ಆಡಳಿತ ಇತ್ಯಾದಿ ಸೇವಾ ಕ್ಷೇತ್ರದಲ್ಲಿರುವ (ಶಿಕ್ಷಕರು, ವೈದ್ಯರು, ನರ್ಸುಗಳು, ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರು, ಪಂಚಾಯತ್ ನೌಕರರು ಇತ್ಯಾದಿ) ಸರಕಾರಿ ಅಥವಾ ಸಾರ್ವಜನಿಕ ವಲಯದ ನೌಕರರ ಶೋಷಣೆಯ ಸ್ವರೂಪವೇನು? ಸಾಫ್ಟ್‌ವೇರ್ ಸರಕೇ ಅಥವಾ ಸೇವೆಯೇ? ಬಂಡವಾಳಶಾಹಿ ಸಮಾಜದಲ್ಲಿ ಮತ್ತು ಅದರ ಬದಲಾವಣೆಯಲ್ಲಿ ನೇರ ಉತ್ಪಾದನಾ ಕಾರ್ಮಿಕರ ಮತ್ತು ಸೇವಾ ಕ್ಷೇತ್ರದ ಕಾರ್ಮಿಕರ ವರ್ಗ ಪಾತ್ರದಲ್ಲಿ ವ್ಯತ್ಯಾಸವಿದೆಯೇ? ಅದಕ್ಕೆ ಆರ್ಥಿಕ ಆಧಾರವಿದೆಯೇ? ಈ ಹಿನ್ನೆಲೆಯಲ್ಲಿ ಎದುರಾಗುವ ಈ ಪ್ರಶ್ನೆಗಳಿಗೆ ಬಂಡವಾಳ ಸಂಪುಟ 2 ಉತ್ತರಿಸುತ್ತದೆ. ಅಲ್ಲಿ ನೇರ ಉತ್ಪಾದನೆಯಲ್ಲಿ ತೊಡಗಿಸಿರುವ ಶ್ರಮವನ್ನು 'ಉತ್ಪಾದಕ' ಮತ್ತು ಇತರ ಶ್ರಮವನ್ನು 'ಅನುತ್ಪಾದಕ' ಎಂದು ವಿಂಗಡಿಸಲಾಗಿದೆ. ಬಂಡವಾಳ ಸಂಪುಟ 2 ರ ಪ್ರವೇಶಿಕೆಯಿಂದ ಈ ಮೇಲಿನ ಪ್ರಶ್ನೆಗಳಿಗೆ ಉತ್ತರಿಸುವ ಆಯ್ದ ಭಾಗ (ಪ್ರವೇಶಿಕೆಯ ಭಾಗ 3.4 ಮತ್ತು 3.5 ಪುಟ 28–30) ಇಲ್ಲಿದೆ.


'ಅನುತ್ಪಾದಕ ಶ್ರಮ' ಯಾವುದು?

ಸಂಪುಟ 2 ರಲ್ಲಿ ಮೌಲ್ಯಗಳ ಉತ್ಪಾದನೆ, ಚಲನೆಯ ನಿರೂಪಣೆಯಲ್ಲಿ ಮತ್ತು 'ಪುನರುತ್ಪಾದನಾ ಸೂತ್ರ'ಗಳ ಚರ್ಚೆಯ ಸಂದರ್ಭದಲ್ಲಿ 'ಉತ್ಪಾದಕ ಶ್ರಮ'ದ ಪ್ರಸ್ತಾಪ ಆಗಾಗ ಬರುತ್ತದೆ. ಚಲಾವಣೆಯಲ್ಲಿ ಬರುವವು 'ಅನುತ್ಪಾದಕ ಶ್ರಮ' ಎನ್ನಲಾಗುತ್ತದೆ. ಉತ್ಪಾದಕ ಮತ್ತು ಅನುತ್ಪಾದಕ ಶ್ರಮ ಎಂದರೇನು? ಅವುಗಳನ್ನು ಪ್ರತ್ಯೇಕಿಸುವ ಮಾನದಂಡ ಯಾವುದು? ಮಾರ್ಕ್ಸ್‌ವಾದಿ ಅರ್ಥಶಾಸ್ತ್ರೀಯ ಸಿದ್ಧಾಂತದಲ್ಲಿ ಸಹ ಇದು ಬಹುಚರ್ಚಿತ ವಿಷಯ. ಮೌಲ್ಯ ಉತ್ಪಾದನೆ, ಚಲನೆಗಳಿಗೆ ಸಂಬಂಧಿತವಾಗಿರುವುದರಿಂದ ಮೌಲ್ಯ ಉತ್ಪಾದಿಸದ ಎಲ್ಲ ಆರ್ಥಿಕ ಚಟುವಟಿಕೆಗಳನ್ನು 'ಪುನರುತ್ಪಾದನಾ ಸೂತ್ರ'ಗಳು ಒಳಗೊಳ್ಳುವುದಿಲ್ಲ.

ಮಾರ್ಕ್ಸ್ ಶ್ರಮವನ್ನು ಉತ್ಪಾದಕ ಅಥವಾ ಅನುತ್ಪಾದಕ ಅಂತ ಗುರುತಿಸುವಾಗ, ಅದಕ್ಕೆ ಮಾನದಂಡ ಅದು ಸಾಮಾಜಿಕ ಒಳಿತು–ಕೆಡುಕು ಮಾಡುವಂಥದೇ ಎಂಬುದಲ್ಲ. ಅದು ಬೇಕೆ ಬೇಡವೇ ಎಂಬ ನೈತಿಕ ನಿರ್ಣಯವೂ ಅಲ್ಲ. ಈ ವ್ಯತ್ಯಾಸ ಎಲ್ಲ ಕಾಲಕ್ಕೂ ಸಲ್ಲುವ ವಸ್ತುನಿಷ್ಠವಾದದ್ದು ಎಂದು ಮಂಡಿಸುವುದೂ ಇಲ್ಲ. ಇದು ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ಮಾತ್ರ ಸಂಬಂಧಿಸಿದ್ದು.

ಮಾರ್ಕ್ಸ್ ಹಿಂದಿನ ಬರಹಗಳಲ್ಲಿ (ಪ್ರಧಾನವಾಗಿ 'ಥಿಯರೀಸ್ ಆಫ್ ಸರ್‌ಪ್ಲಸ್ ವ್ಯಾಲ್ಯೂಸ್' ನಲ್ಲಿ) ಮೌಲ್ಯ ಉತ್ಪಾದಿಸುವ ವೇತನ–ಶ್ರಮಿಕರು ಉತ್ಪಾದಿಸಿದ ಒಟ್ಟು ಮಿಗುತಾಯ–ಮೌಲ್ಯದ ಭಾಗವನ್ನು ಕಿತ್ತುಕೊಳ್ಳುವ ಮೂಲಕ ಒಬ್ಬ ಅಥವಾ ಹಲವು ಬಂಡವಳಿಗರಿಗೆ ಲಾಭ ತಂದು ಕೊಡುವ ಎಲ್ಲ ಶ್ರಮವನ್ನು 'ಉತ್ಪಾದಕ ಶ್ರಮ' ಎಂದು ಗುರುತಿಸಿದ್ದರು. ಆದರೆ ಸಂಪುಟ 2ರಲ್ಲಿ ಬಿಡಿ ಬಂಡವಳಿಗನಿಗೆ ಲಾಭ ತರುವ (ಅಥವಾ ಮಿಗುತಾಯ–ಮೌಲ್ಯ ಕೊಡುವ) ಶ್ರಮ ಮತ್ತು ಇಡೀ ಸಾಮಾಜಿಕ ಬಂಡವಾಳಕ್ಕೆ ಲಾಭ ತರುವ ಶ್ರಮದ ನಡುವೆ ವ್ಯತಾಸ ಮಾಡುತ್ತಾರೆ. (ಸ್ಥೂಲ ವಿವರಣೆಗೆ ಪ್ರವೇಶಿಕೆಯ 4.6 ಮತ್ತು ವಿವರಗಳಿಗೆ ಅಧ್ಯಾಯ 6 ನೋಡಬಹುದು) ಇಲ್ಲಿ ಒಟ್ಟು ಸಾಮಾಜಿಕ ಬಂಡವಾಳಕ್ಕೆ ಲಾಭ ತರುವ (ಅಥವಾ ಮಿಗುತಾಯ–ಮೌಲ್ಯ ಕೊಡುವ) ಶ್ರಮ ಮಾತ್ರ ಉತ್ಪಾದಕ ಶ್ರಮ ಎಂದು ಗುರುತಿಸುತ್ತಾರೆ. ಸಮಾಜ ಮಟ್ಟದ ಒಟ್ಟು ಮಿಗುತಾಯ–ಮೌಲ್ಯಕ್ಕೆ ಸೇರಿಸದೆ, ಅದರಿಂದ ಒಂದು ಪಾಲನ್ನು ಪಡೆಯುವ, ಆದರೆ ಬಿಡಿ ಬಂಡವಳಿಗನಿಗೆ ಲಾಭ ತರುವ ಶ್ರಮವನ್ನು 'ಅನುತ್ಪಾದಕ ಶ್ರಮ'ವೆಂದು ಗುರುತಿಸಲಾಗುತ್ತದೆ. ಸ್ಥೂಲವಾಗಿ ವಾಣಿಜ್ಯ, ಹಣಕಾಸು ಅಥವಾ 'ಸೇವಾ ಕ್ಷೇತ್ರ' ದ ಶ್ರಮ ಈ ಅರ್ಥದಲ್ಲಿ 'ಅನುತ್ಪಾದಕ ಶ್ರಮ' ಆಗುತ್ತದೆ. ಅದು ವಾಣಿಜ್ಯ, ಹಣಕಾಸು ಅಥವಾ ಸೇವಾ ಕ್ಷೇತ್ರದ ಬಿಡಿ ಬಂಡವಳಿಗನಿಗೆ 'ಉತ್ಪಾದಕ'ವಾಗಿರಬಹುದು. ಆದರೆ ಅದು ಈಗಾಗಲೇ ಉತ್ಪಾದಿತವಾದ ಸಾಮಾಜಿಕ ಮಿಗುತಾಯ–ಮೌಲ್ಯದ ಒಂದು ಭಾಗವನ್ನು ತೆಗೆದುಕೊಳ್ಳುತ್ತದೆ ಅಷ್ಟೇ, ಅದಕ್ಕೆ ಸೇರಿಸುವುದಿಲ್ಲ. ಎಲ್ಲ ಕೈಗಾರಿಕಾ ಮತ್ತಿತರ ಭೌತಿಕ ವಸ್ತು ಉತ್ಪನ್ನ ಮಾಡುವ ಶ್ರಮ ಸ್ಥೂಲವಾಗಿ 'ಉತ್ಪಾದಕ ಶ್ರಮ' ಎನಿಸಿಕೊಳ್ಳುತ್ತದೆ.

ಆದರೆ ಕೆಲವು ಕೆಲಸಗಳು ಉತ್ಪಾದಕವೋ, ಅನುತ್ಪಾದಕವೋ ಎಂಬ ಸಂದಿಗ್ಧತೆಯನ್ನು ಮೇಲಿನ ಮಾನದಂಡದಿಂದ ಪರಿಹರಿಸಬಹುದು. ಸೇವಾ ಕ್ಷೇತ್ರಗಳಲ್ಲಿ ಉತ್ಪಾದನಾ ವಲಯದ ಭಾಗ ಅಲ್ಲದಿದ್ದರೂ ಭೌತಿಕ ಸರಕಿಗೆ ಮೌಲ್ಯ ಸೇರಿಸುವ ಎಲ್ಲ ಶ್ರಮ ಉತ್ಪಾದಕವಾಗಿರುತ್ತದೆ. ಕಚ್ಚಾ ಸಾಮಗ್ರಿಗಳ ಸಿದ್ಧ ಸರಕುಗಳ ಸಾರಿಗೆ, 'ಸಾರ್ವಜನಿಕ ಸೇವೆ' ಎಂದು ಪರಿಗಣಿಸಲ್ಪಟ್ಟ ನೀರು, ಇಂಧನ (ಗ್ಯಾಸ್, ಪೆಟ್ರೋಲ್, ವಿದ್ಯುತ್ ಇತ್ಯಾದಿ) ಪೂರೈಕೆ, ಕಟ್ಟಡಗಳ ನಿರ್ಮಾಣ ಸಂಪುಟ 2 ರ ಮಾನದಂಡದ ಪ್ರಕಾರ ಉತ್ಪಾದಕ ಎನಿಸಿಕೊಳ್ಳುತ್ತವೆ. ಆದರೆ ಮನೆಗಳನ್ನು ಬಾಡಿಗೆಗೆ ಕೊಡುವುದು, ಮನುಷ್ಯರ ಸಾರಿಗೆ, ವೈದ್ಯಕೀಯ, ಶೈಕ್ಷಣಿಕ, ಮನೋರಂಜನಾ ಕ್ಷೇತ್ರಗಳಲ್ಲಿ ತೊಡಗಿಸಿದ ಶ್ರಮವು ಒಟ್ಟಾರೆ ಸಾಮಾಜಿಕ ಬಂಡವಾಳದ ಮಿಗುತಾಯ–ಮೌಲ್ಯಕ್ಕೆ ಕೊಡುಗೆ ನೀಡುವುದಿಲ್ಲ, ಹಾಗಾಗಿ 'ಅನುತ್ಪಾದಕ'. ಉತ್ಪಾದನಾ ಪ್ರಕ್ರಿಯೆಯಲ್ಲಿಯೂ ಸರಕಿನ ಉಪಯೋಗ–ಮೌಲ್ಯಕ್ಕೆ ನೇರವಾಗಿ ಸಂಬಂಧಿಸಿಲ್ಲದ ಅಥವಾ ಅದಕ್ಕೆ ಕೊಡುಗೆ ನೀಡದ ಮತ್ತು ಕಾರ್ಮಿಕರಿಂದ ಗರಿಷ್ಠ ಮಿಗುತಾಯ–ಮೌಲ್ಯ ಕಿತ್ತುಕೊಳ್ಳುವ ಪ್ರಕ್ರಿಯೆಯಲ್ಲಿ ಮಾತ್ರ ಪಾತ್ರ ವಹಿಸುವ ಶ್ರಮವೂ ಅನುತ್ಪಾದಕ. ಟೈಂ ಕೀಪರ್ಸ್, ಸೆಕ್ಯುರಿಟಿ ಸಿಬ್ಬಂದಿ, ಲೆಕ್ಕಪತ್ರ ಇಡುವವರು, ಕಾರ್ಖಾನೆ ನೇಮಿಸಿದ ವಕೀಲರು ಇತ್ಯಾದಿ ಇದಕ್ಕೆ ಉದಾಹರಣೆಗಳು. ಕರ ಕುಶಲ ಕಸುಬುದಾರರು ಮುಂತಾದ ಪುಟ್ಟ ಸರಕು ಉತ್ಪಾದಕರು, ಸ್ವತಂತ್ರ ರೈತರು ಬಂಡವಾಳಶಾಹಿ ವ್ಯವಸ್ಥೆಯ ಹೊರಗೆ ಕೆಲಸ ಮಾಡುವುದರಿಂದ ಅವರ ಶ್ರಮ ಬಂಡವಾಳಕ್ಕೆ ಉತ್ಪಾದಕವಾಗುವುದಿಲ್ಲ.



ಇತ್ತೀಚಿನ ದಶಕಗಳಲ್ಲಿ ಬಂಡವಾಳಶಾಹಿ ವಹಿವಾಟಿನ ದೊಡ್ಡ ಭಾಗವಾಗಿರುವ ಭೌತಿಕವಲ್ಲದ 'ಸಾಫ್ಟ್‌ವೇರ್' ನಲ್ಲಿ ತೊಡಗಿದ ಶ್ರಮ ಉತ್ಪಾದಕವೇ ಅನುತ್ಪಾದಕವೇ, ಸರಕೇ ಸೇವೆಯೇ ಎಂಬ ಪ್ರಶ್ನೆ ವಾಗ್ವಾದಕ್ಕೆ ಒಳಗಾಗಿದೆ. ಮಾರ್ಕ್ಸ್‌ವಾದಿ ವಲಯದೊಳಗೆ ಈ ಕುರಿತು ಪೂರ್ಣ ಸಹಮತ ಇಲ್ಲ. ಆದರೂ ಸಂಪುಟ 2 ರಲ್ಲಿ ಮಾರ್ಕ್ಸ್ ಮಂಡಿಸಿದ ಮಾನದಂಡದ ಆಧಾರದ ಮೇಲೆ ಕೆಲವು ಸಾಮಾನ್ಯ ಟಿಪ್ಪಣಿಗಳನ್ನು ಮಾಡಬಹುದು. ಭೌತಿಕ ಉತ್ಪಾದನೆಯಲ್ಲಿ ಉತ್ಪಾದನಾ ಸಾಧನದ ಪಾತ್ರ ವಹಿಸುವ ಉಪಕರಣಗಳಲ್ಲಿ (ಯಂತ್ರಗಳ ನಿಯಂತ್ರಕಗಳು, ರೊಬೊಟ್) ಮತ್ತು ಸಾಮಾನ್ಯ ಕಂಪ್ಯೂಟರ್ ನಿಂದ ಮೊಬೈಲ್ ಸೇರಿದಂತೆ ವಾಶಿಂಗ್ ಮಶೀನಿನಿಂದ ಜೆರಾಕ್ಸ್ ಮಶೀನ್ ವರೆಗೆ ಇರುವ ಹೆಚ್ಚಿನ ಬಳಕೆ ವಸ್ತುಗಳಲ್ಲಿ ಉತ್ಪನ್ನದಲ್ಲಿ ಅಡಕವಾಗಿದ್ದು ಅದರ ಭಾಗವಾಗಿರುವ ಸಾಫ್ಟ್‌ವೇರ್ ನಲ್ಲಿ ತೊಡಗಿಸಿದ ಶ್ರಮ ಸ್ಪಷ್ಟವಾಗಿ ಉತ್ಪಾದಕ. ಇಂತಹ ಶ್ರಮ ಉತ್ಪಾದನಾ ಸಾಧನದ ಭಾಗವಾಗಿ ಅಥವಾ ಸಹಾಯಕ ವಸ್ತುವಿನಂತೆ ಕೆಲಸ ನಿರ್ವಹಿಸುತ್ತದೆ, ಇಲ್ಲವೆ ಬಳಕೆ ವಸ್ತುಗಳ ಸಂದರ್ಭದಲ್ಲಿ ನೋಡುವಂತೆ ಉತ್ಪನ್ನದ ಭಾಗವಾಗಿರುತ್ತದೆ. ಇಂತಹ ಸಾಫ್ಟ್‌ವೇರ್ ಗಳ, ಇತರ ಕಂಪ್ಯೂಟರ್ ಜಾಲಗಳ (ರಿಪೇರಿ ಇತ್ಯಾದಿ ಮೈಂಟೆನೆನ್ಸ್) ನಿರ್ವಹಣೆಯಲ್ಲಿ ತೊಡಗಿದ ಶ್ರಮ ಸೇವೆಗಳು 'ಅನುತ್ಪಾದಕ'. ಇವಲ್ಲದೆ ವಾಣಿಜ್ಯ, ಹಣಕಾಸು ಮತ್ತಿತರ ಸೇವಾಕ್ಷೇತ್ರಗಳಲ್ಲಿ ಬಳಸುವ ಆಫೀಸ್ ಸಾಫ್ಟ್‌ವೇರ್, ಉತ್ಪಾದಕತೆ ಸಾಫ್ಟ್ ವೇರ್ ಇತ್ಯಾದಿ ಅವು ಬಳಕೆಯಾಗುವ ಆಯಾ ಕ್ಷೇತ್ರದಂತೆ 'ಅನುತ್ಪಾದಕ'. ಇವಲ್ಲದೆ ಹಲವು ಸಾಫ್ಟ್ ವೇರ್ ಗಳು ಉತ್ಪಾದಕವೋ ಅನುತ್ಪಾದಕವೋ ಎಂಬುದನ್ನು ಅವು ಯಾವುದರಲ್ಲಿ ಅಡಕವಾಗಿವೆ ಅಥವಾ ಯಾವ ಕ್ಷೇತ್ರಗಳಲ್ಲಿ ಬಳಸಲ್ಪಡುತ್ತಿವೆ ಎಂಬ ಮಾನದಂಡದ ಮೇಲೆ ನಿರ್ಧರಿಸಬಹುದು.

ಅನುತ್ಪಾದಕ ಶ್ರಮಿಕರು ಕಾರ್ಮಿಕ ವರ್ಗದ ಭಾಗವಲ್ಲವೇ?

ಶ್ರಮ ಉತ್ಪಾದಕವೇ ಅಲ್ಲವೇ ಎಂಬುದು ಬರಿಯ ಸೈದ್ಧಾಂತಿಕ ಪ್ರಶ್ನೆ ಮಾತ್ರವಲ್ಲ. ಸಾಮಾಜಿಕ ಲೆಕ್ಕಪತ್ರ

ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**